ವಿವೇಕಪ್ರಭ

ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ



₹ 14

ಆಗಸ್ಟ್ 2018

PACKAGE TOURS

Hotel Room Accom. & South Indian Veg. Food

Charodham Yatra : 15/19 Days
Sep 27 Oct 04, 06

Haridwar, Yamunotri, Gangotri, Uttarkashi, Kedarnath, Triyugi (Optional), Mana, Vyasa Guha, Ganesh Guha, Keshava Prayag, Badrinath, Rishikesh, New Delhi

Panchadwarka & Jyothirlinga : 22/24 DAYS
Nov 15

Pushkar, Ajmer, Nathadwar, Kankroli, Eklingji, Udaipur, Mt. Abu, Mathru Gaya, Dwarka, Bet Dwarka, Nagesham, Mul Dwarka, Porbandar, Veraval, Somnath, Dakor, Ahmedabad, Ujjain, Omkareshwar, Parli, Aurangabad, Ellora, Grishneshwar, Nasik, Triyambak, Shirdi, Shanisinganapur, Bhimashankar

Nepal : 07 DAYS
Sep 04

Kathmandu, Manokamana, Pokhara, Jomsom, Mukthinath, Bakthapur

Kolkata Darjeeling : 16 Days
Nov 13

Bhubaneshwar, Puri, Konark, Chilka Lake, Kolkata, Siliguri, Gangtok, Chengu Lake, Harbhajan Singh Mandir, Darjeeling, Tiger Hills

Kashi Chitrakoota : 15 Days
Oct 20

Allahabad, Gaya, Bodhgaya, Kashi, Saranath, Ayodhya, Naimisharanya, Chitrakoot

Mini Andhra : 05 Days
Sep 19

Manthralaya, Srishailam, Mahanandi, Ahobilam (Nava Narasimha)

Rajasthan Special : 16 Days
Nov 22

Jaipur, Pushkar, Ajmer, Chittaurgarh, Udaipur, Eklingji, Nathadwar, Mt. Abu, Jodhpur, Bikaner, Jaisalmer



Recognised by Department of Tourism, Govt. of Karnataka

: 640, 40th Cross, 8th Block, Jayanagar, Bangalore - 70
: hansaatravels@gmail.com : hansaatravels.com
: 080-26643276 / 26543891 / 9341215612 / 9341415612

ವಿವೇಕಪ್ರಭ


ಆಗಸ್ಟ್-2018 ಸಂಪುಟ 19 ಸಂಚಿಕೆ 08

ವಿಶೇಷ ಲೇಖನ


ಧಾರಾವಾಹಿ













ವ್ಯವಸ್ಥಾಪಕ ಸಂಪಾದಕರು: *ಸ್ವಾಮಿ ಆತ್ಮಜ್ಞಾನಂದ* ಸಂಪಾದಕರು: *ಸ್ವಾಮಿ ಜ್ಞಾನಯೋಗಾನಂದ*

ನೆರವು: *ಆರ್. ಎಸ್. ಪೂರ್ಣಾನಂದ, ಡಾ. ಕೆ. ಎಲ್. ಪ್ರಸನ್ನಾಕ್ಷೀ, ಡಾ. ಎಚ್. ಪಾಂಡುರಂಗ ವಿಠಲ*

ಅಕ್ಷರ ಜೋಡಣೆ: *ಶ್ರೀರಾಮಕೃಷ್ಣ ಆಶ್ರಮ, ಮೈಸೂರು* ಮುದ್ರಣ: *ಮಯೂರ್ ಗ್ರಾಫಿಕ್ಸ್, ಬೆಂಗಳೂರು*

ಮುಖಪುಟ

ಹಂಪಿಯ ಕಲ್ಲಿನ ರಥ

ಚಂದಾ ವಿವರ

ಬಿಡಿ ಪ್ರತಿ : ₹14 ವಾರ್ಷಿಕ : ₹ 140 ಮೂರು ವರ್ಷ : ₹ 375
ಆಜೀವ (25 ವರ್ಷ) : ₹3,000 ಪೋಷಕರು : ₹5,000 ಅಥವಾ ಹೆಚ್ಚು.

ವಿದೇಶಗಳಿಗೆ : (ಏರ್‌ಮೇಲ್) ವಾರ್ಷಿಕ : $ 20; ಮೂರು ವರ್ಷ : $ 60
ಆಜೀವ (25ವರ್ಷ) : $ 300 ಪೋಷಕರು : $ 600 ಅಥವಾ ಹೆಚ್ಚು.


ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– ಸ್ವಾಮಿ ವಿವೇಕಾನಂದ

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

E-mail: mysuru.vivekaprabha@rkmm.org Website: www.vivekaprabha.net ಫೋನ್ : 9481533505



ಪ್ರಾರ್ಥನೆ

ಕೋರಿಕೆ

ಜಗವೆಲ್ಲ ನಗುತಿರಲಿ!
ಜಗದಳುವು ನನಗಿರಲಿ!
ನಾನಳಲು, ಜಗವೆನ್ನನೆತ್ತಿಕೊಳದೆ?
ನಾ ನಕ್ಕು, ಜಗವಳಲು, ನೋಡಬಹುದೆ? ॥ ೧ ॥

ತೆರವಾಗಿ ನನ್ನೆದೆಯು,
ಧರೆಯೆದೆಯು ಉಕ್ಕಿರಲಿ!
ಧರೆಯೊಳಗೆ ತೇಲಿಸುವೆನೆನ್ನೆದೆಯನು!
ಧರೆ ಬತ್ತಿ, ಎನ್ನೆದೆಯು ಉಕ್ಕಲೇನು? ॥ ೨ ॥

ಪೊಡವಿಯೈಸಿರಿವಡೆದು
ಬಡತನವು ನನಗಿರಲಿ!
ಕೈಯೊಡ್ಡೆ, ಪೊಡವಿಯೆನಗಿಕ್ಕದೇನು?
ಪೊಡವಿಯೇ ಮೈಯಳಿಯೆ, ಮಾಡಲೇನು? ॥ ೩ ॥

ವಿಶ್ವವನು ತುಂಬಿರುವ
ಈಶ್ವರನೆ ಅಳತೊಡಗೆ,
ಸೈತಿಡಲು, ಸೈಪಿಡಲು, ಬರುವನಾವಂ?
'ಹೇ ತಂದೆ' ಎನಲೆನ್ನನವನೆ ಕಾವಂ! ॥ ೪ ॥

— ಈಶ್ವರ ಸಣಕಲ್ಲ

ಸೂಕ್ತಿಪ್ರಭ

ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಮ್ ।
ತತಸ್ತತೋ ನಿಯಮ್ಯೈತತ್ ಆತ್ಮನ್ಯೇವ ವಶಂ ನಯೇತ್ ॥

ಚಂಚಲವೂ ಅಸ್ಥಿರವೂ ಆದ ಮನಸ್ಸು ಯಾವ ಯಾವ ವಿಷಯದಿಂದ ಹೊರಕ್ಕೆ ಬರುವುದೋ ಆಯಾ ವಿಷಯದಿಂದ ಈ ಮನಸ್ಸನ್ನು ನಿಗ್ರಹಿಸಿ ಆತ್ಮನಲ್ಲಿಯೇ ವಶಪಡಿಸಿಕೊಳ್ಳಬೇಕು.

— ಭಗವದ್ಗೀತೆ, ೬.೨೬

ಮನವ ಘನದಲಿ ಕಟ್ಟಿ । ನೆನಹ ಮನದಲಿ ಕಟ್ಟಿ ।
ಮನವನ್ನಪಾನಕೆಳಸದ । ಯೋಗಿಗೆ
ವನವಾಸವೇಕೆ ಸರ್ವಜ್ಞ ॥

— ಸರ್ವಜ್ಞ

ದೀಪವಾಗು, ದೋಣಿಯಾಗು, ಮೆಟ್ಟಿಲಾಗು. ಇತರ ಜೀವಿಗಳ ಗಾಯ ನಿನ್ನಿಂದ ವಾಸಿಯಾಗಲಿ. ನಿನ್ನ ಮನೆಯಿಂದ ಹೊರಬಿದ್ದು ಓಡಾಡು, ಕುರುಬನಂತೆ.

— ರೂಮಿ

ಪ್ರಕೀರ್ಣೇ ವಿಷಯಾರಣ್ಯೇ ಧಾವಂತಂ ವಿಪ್ರಮಾಥಿನಂ ।
ಜ್ಞಾನಾಂಕುಶೇನ ಕುರ್ವೀತ ವಶ್ಯಮಿಂದ್ರಿಯದಂತಿನಮ್ ॥

ಹರಡಿಕೊಂಡಿರುವ ವಿಷಯಗಳೆಂಬ ಕಾಡಿನಲ್ಲಿ ಧಾವಿಸುತ್ತಾ ನಾಶಪಡಿಸುತ್ತಿರುವ ಇಂದ್ರಿಯವೆಂಬ ಆನೆಯನ್ನು ಜ್ಞಾನವೆಂಬ ಅಂಕುಶದಿಂದ ಹತೋಟಿಗೆ ತಂದುಕೊಳ್ಳಬೇಕು.

— ಸುಭಾಷಿತ ಸುಧಾನಿಧಿ

ದ್ರುತಸ್ಯ ಭಗವದ್ಧರ್ಮಾತ್ ಧಾರಾವಾಹಿಕತಾಂ ಗತಾ ।
ಸರ್ವೇಶೇ ಮನಸೋ ವೃತ್ತಿಃ ಭಕ್ತಿರಿತ್ಯಭಿಧೀಯತೇ ॥

ಭಗವಂತನ ಅಪಾರ ಕಾರುಣ್ಯಾದಿಗಳನ್ನು ಸ್ಮರಿಸಿಕೊಂಡು ಕರಗಿಹೋದ ಚಿತ್ತವೃತ್ತಿಯು ಆತನಲ್ಲಿಯೇ ಧಾರಾಕಾರವಾಗಿ ಹರಿಯುತ್ತಿದ್ದರೆ, ಆ ಚಿತ್ತವೃತ್ತಿಯು ಭಕ್ತಿ ಎನಿಸಿಕೊಳ್ಳುತ್ತದೆ.

— ಭಕ್ತಿರಸಾಯನ

ರಾಮಕೃಷ್ಣ ಮಠ, ರಾಮನಾಥಪುರಂ

No. 1, Raja Aranmanai Mele Street, Ramanathapuram (Ramnad),
Tamil Nadu 623 501 Ph : 98849 88178 Email : ramanathapuram@rkmm.org



ಬಡಜನತೆ ಹಾಗೂ ಸಂತ್ರಸ್ತರಿಗಾಗಿ ಶೈಕ್ಷಣಿಕ, ವೈದ್ಯಕೀಯ ಸೇವೆ



ನಿಮಗೆಲ್ಲ ತಿಳಿದಿರುವಂತೆ, ಪಾಶ್ಚಾತ್ಯ ದೇಶಗಳಲ್ಲಿ ನಮ್ಮ ಸನಾತನ ಧರ್ಮದ ಸಂದೇಶವನ್ನು ಪ್ರಚಾರ ಮಾಡುವುದಕ್ಕಾಗಿ ತೆರಳಿದ್ದ ಸ್ವಾಮಿ ವಿವೇಕಾನಂದರು ೧೮೯೭ರಲ್ಲಿ ಭಾರತಕ್ಕೆ ಮರಳಿದಾಗ ರಾಮನಾಥಪುರದ ಮಹಾರಾಜರಾದ ಶ್ರೀ ಭಾಸ್ಕರ ಸೇತುಪತಿಯವರು ಅವರಿಗೆ ಸಂಭ್ರಮದ ಸ್ವಾಗತವನ್ನು ಮಾಡಿದರು. ಸ್ವಾಮೀಜಿಯವರು ಮಹಾರಾಜ ಭಾಸ್ಕರ ಸೇತುಪತಿಯ ಅರಮನೆಯ ಅತಿಥಿ ಗೃಹದಲ್ಲಿ ೧೮೯೭ ರ ಜನವರಿ ೨೯ರಿಂದ ೩೧ರ ವರೆಗೆ, ಮೂರು ದಿನ ತಂಗಿದ್ದರು. ಅಲ್ಲಿ ಅವರು ಮಾಡಿದ ಭಾಷಣಗಳು ಭಾರತದ ಉದ್ದಗಲಕ್ಕೂ ಪ್ರಚಾರವಾಗಿ, ರಾಷ್ಟ್ರಜಾಗೃತಿಗೆ ನೆರವಾಯಿತು.

ಆ ಪ್ರದೇಶದಲ್ಲಿ ಇದೀಗ ರಾಮಕೃಷ್ಣ ಮಠದ ಹೊಸ ಶಾಖೆ ಆರಂಭಗೊಂಡಿದೆ. ೨೦೧೬ರ ಜೂನ್ ೨೬ರಂದು ಇದು ಬೇಲೂರು ಮಠದಲ್ಲಿರುವ ರಾಮಕೃಷ್ಣ ಮಠ ಹಾಗೂ ಮಿಷನ್ನಿಗೆ ಅಧಿಕೃತವಾಗಿ ಸೇರ್ಪಡೆಗೊಂಡಿತು. ರಾಮನಾಥಪುರಂ, ಮಂಡಪಂ, ಪಾಂಬನ್ ಹಾಗೂ ರಾಮೇಶ್ವರಂ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಲ್ಲಿ ಬಹುಪಾಲು ಮೀನುಗಾರರಾಗಿದ್ದು, ಬಡತನದ ಕಾರಣದಿಂದ ಅವರ ಮಕ್ಕಳು ಕೂಡ ಮೀನು ಹಿಡಿಯುವ ಕೆಲಸ ಮಾಡಬೇಕಾಗಿದೆ; ಅವರು ವಿದ್ಯಾಭ್ಯಾಸ ಹಾಗೂ ಉನ್ನತ ಶಿಕ್ಷಣ ನಡೆಸಲಾಗದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಹೊಸದಾಗಿ ಆರಂಭವಾಗಿರುವ ರಾಮಕೃಷ್ಣ ಮಠವು ಈ ದಿಕ್ಕಿನಲ್ಲಿ ಈ ಕೆಳಗಿನ ಸೇವಾಕಾರ್ಯಗಳನ್ನು ನಡೆಸಲು ಉದ್ದೇಶಿಸಿದೆ:

ಶೈಕ್ಷಣಿಕ ಸೇವೆ: ಈಗಾಗಲೇ ಮಠವು ಈ ಪ್ರದೇಶದ ೮೦ ಮಂದಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ಅವರಿಗೆ ನರ್ಸಿಂಗ್, ಪಾಲಿಟೆಕ್ನಿಕ್ ಹಾಗೂ ಕಲಾವಿಭಾಗ-ವಿಜ್ಞಾನ ವಿಭಾಗಗಳಲ್ಲಿ ಉನ್ನತ ಶಿಕ್ಷಣದ ವ್ಯವಸ್ಥೆ ಮಾಡಿದೆ. ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ೩೦,೦೦೦ (ಕಾಲೇಜು ಶುಲ್ಕ) ೨೦,೦೦೦+೧೦,೦೦೦(ವಸತಿ ಹಾಗೂ ಊಟದ ವ್ಯವಸ್ಥೆ) ವೆಚ್ಚ ತಗಲುತ್ತದೆ. ಒಟ್ಟು ಮೊತ್ತ ೨೪ ಲಕ್ಷವಾಗಿದೆ.

ಮೊಬೈಲ್ ವೈದ್ಯಕೀಯ ಸೇವೆ: ಸದ್ಯಕ್ಕೆ ನಾವು ರಾಮನಾಥಪುರಂ ಸುತ್ತಮುತ್ತ ವೈದ್ಯಕೀಯ ಶಿಬಿರಗಳನ್ನು ನಡೆಸುತ್ತಿದ್ದೇವೆ. ಈ ಪರಿಸರದಲ್ಲಿ ಸೂಕ್ತ ವೈದ್ಯಕೀಯ ಸೌಕರ್ಯ ಇಲ್ಲದಿರುವುದರಿಂದ, ಒಂದು ಮೊಬೈಲ್ ವೈದ್ಯಕೀಯ ಸೇವೆಯನ್ನು ಆರಂಭಿಸಲು ಯೋಜನೆ ಹಾಕಿಕೊಂಡಿದ್ದೇವೆ. ಇದರಿಂದ ಕೀಲನಗಾಚಿ ಹಾಗೂ ಇತರ ಸಮೀಪದ ಹಳ್ಳಿಗಳಿಗೆ ಅನುಕೂಲವಾಗಲಿದೆ. ಇದಕ್ಕೆ ಸುಮಾರು ಸುಮಾರು ೩೦ ಲಕ್ಷ ರೂ. ತಗಲುವುದು. ವೈದ್ಯರ ಹಾಗೂ ಸಹಾಯಕರ ಸಂಬಳ, ವೈದ್ಯಕೀಯ ವಾಹನ ಇತ್ಯಾದಿಗಳ ಖರ್ಚು ಇದರಲ್ಲಿ ಸೇರ್ಪಡೆಯಾಗಿದೆ.



ಕೋಚಿಂಗ್ ಕ್ಲಾಸ್: ನಾವು ಸುಮಾರು ೭೫ ಮಂದಿ ಬಡ ವಿದ್ಯಾರ್ಥಿಗಳಿಗೆ ಉಚಿತ ಶೈಕ್ಷಣಿಕ ತರಬೇತಿ ನೀಡುತ್ತಿದ್ದು, ಅದರೊಂದಿಗೆ ಆಹಾರ, ಸಮವಸ್ತ್ರ, ನೋಟ್ ಪುಸ್ತಕ, ಟೂತ್‌ಪೇಸ್ಟ್ ಹಾಗೂ ಇತರ ಶೌಚಾಲಯ ಸಾಮಗ್ರಿಗಳನ್ನು ಒದಗಿಸುತ್ತಿದ್ದೇವೆ. ಇದಕ್ಕಾಗಿ ವರ್ಷಕ್ಕೆ ೩.೫೦ ಲಕ್ಷ ರೂ ಮೊತ್ತ ತಗಲುವುದು.

ಈ ಶಾಖಾಕೇಂದ್ರವು ಈಗತಾನೇ ಆರಂಭವಾಗುತ್ತಿರುವುದರಿಂದ, ಇಲ್ಲಿ ಪ್ರತಿಯೊಂದು ಕೆಲಸವನ್ನೂ ಕೂಡ ಶೂನ್ಯದಿಂದ ಆರಂಭಿಸಬೇಕಾಗಿದೆ. ಅದಕ್ಕಾಗಿ ಸಾಧುನಿವಾಸ, ಬಹೂಪಯೋಗಿ ಕಟ್ಟಡ (ಮೆಡಿಕಲ್ ಕ್ಯಾಂಪ್ ಹಾಗೂ ಕೋಚಿಂಗ್ ಕ್ಲಾಸುಗಳಿಗಾಗಿ) ಇವನ್ನು ನಿರ್ಮಿಸುವ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ.

ಈ ಸೇವಕಾರ್ಯದಲ್ಲಿ ಆರ್ಥಿಕ ನೆರವು ನೀಡುವ ಮೂಲಕ ಭಗವಂತನ ಮಕ್ಕಳ ಬೆಳವಣಿಗೆಗೆ ನೆರವಾಗಲು ಹಾಗೂ ಅದರಿಂದ ದೇವರ ಅನುಗ್ರಹಕ್ಕೆ ಪಾತ್ರರಾಗಲು ತಮ್ಮಲ್ಲಿ ನಾವು ಪ್ರಾರ್ಥಿಸಿಕೊಳ್ಳುತ್ತಿದ್ದೇವೆ.

ಎಲ್ಲ ದೇಣಿಗೆಗಳಿಗೂ 1961ರ 80G ಆದಾಯ ತೆರಿಗೆ ಕಾಯಿದೆಯನ್ವಯ ವಿನಾಯಿತಿ ಇರುತ್ತದೆ. ಚೆಕ್, ಡ್ರಾಫ್ಟ್, ಮನಿಆರ್ಡರ್‌ಗಳನ್ನು ''Ramakrishna Math, Ramanathapuram'' ಎಂಬ ಹೆಸರಿನಲ್ಲಿ ತೆಗೆದು ನಮಗೆ ಕಳುಹಿಸಿಕೊಡಬಹುದಾಗಿದೆ. ಇದೇ ರೀತಿ, RTGS ಮೂಲಕ ಕೆಳಗೆ ನೀಡಿರುವ ಖಾತೆಗೆ ಹಣವನ್ನು ವರ್ಗಾಯಿಸಬಹುದು. **ಹಣವನ್ನು ವರ್ಗಾಯಿಸಿದ ಬಳಿಕ ತಮ್ಮ ಹೆಸರು, ವಿಳಾಸ ಹಾಗೂ PAN ನಂಬರ್ ಇವನ್ನು ನಮಗೆ ತಿಳಿಸಿಕೊಡಬಾಕಾಗಿ ವಿನಂತಿ.**

Account name	: Ramakrishna Math
Account Number	: 6426034057
Bank	: Indian Bank
IFS Code	: IDIB000R051
Branch	: Ramanathapuram

ಇತಿ ಭಗವತ್ಸೇವೆಯಲ್ಲಿ, ತಮ್ಮ,

ಸ್ವಾಮಿ ಸುತಪಾನಂದ

ಅಧ್ಯಕ್ಷರು



SRI RAMAKRISHNA ADVAITA ASHRAMA

Ashrama Road, Kalady -683574, Dist. Ernakulam, Kerala
Email: kalady@rkmm.org Ph: 0484-2462345/2461071

ಭಕ್ತರು ಹಾಗೂ ಹಿತೈಷಿಗಳಲ್ಲಿ ಒಂದು ವಿಜ್ಞಾಪನೆ



ಕಾಲಡಿಯು ಶಿವನ ಅವತಾರವಾದ, ಮಹಾನ್ ಆಧ್ಯಾತ್ಮಿಕ ವ್ಯಕ್ತಿಯೂ, ಅದ್ವೈತ ವೇದಾಂತದ ಸಂಸ್ಥಾಪಕರೂ ಆದ **ಆದಿ ಶಂಕರಾಚಾರ್ಯ**ರ ಜನ್ಮಸ್ಥಳವಾಗಿದೆ. ಆಶ್ರಮವು ಪೂರ್ಣಾನದಿಯ ದಡದಲ್ಲಿದೆ. 1936ರಲ್ಲಿ ಆರಂಭವಾದ ಈ ಆಶ್ರಮವು 1941ರಲ್ಲಿ ಬೇಲೂರು ಮಠದ ರಾಮಕೃಷ್ಣ ಮಠಕ್ಕೆ ಸೇರ್ಪಡೆಗೊಂಡಿತು. ಸ್ವಾಮಿ ಬ್ರಹ್ಮಾನಂದರ ಶಿಷ್ಯರಾಗಿದ್ದ ಸ್ವಾಮಿ ಆಗಮಾನಂದರು ಈ ಆಶ್ರಮದ ಸ್ಥಾಪಕ ಅಧ್ಯಕ್ಷರಾಗಿದ್ದರು. ಆಶ್ರಮವು ಆರಂಭವಾದ ನಂತರ ಅದು ಕೇರಳದಲ್ಲಿ ಆಧ್ಯಾತ್ಮಿಕತೆ, ಸಾಮಾಜಿಕ ಅಭಿವೃದ್ಧಿ ಹಾಗೂ ಸೇವಾಕಾರ್ಯಗಳ ಒಂದು ಮುಖ್ಯ ಕಾರ್ಯಕ್ಷೇತ್ರವೆನಿಸಿದೆ. ಕಳೆದ 77 ವರ್ಷಗಳಿಂದ ನಾವು ಸಮಾಜ ಕಲ್ಯಾಣ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅಮೂಲ್ಯ ಸೇವೆಯನ್ನು ಅನವರತ ಸಲ್ಲಿಸುತ್ತಿದ್ದೇವೆ.

ಆಶ್ರಮವು ವಿವಿಧ ಶೈಕ್ಷಣಿಕ ಸಂಸ್ಥೆಗಳ, ವಿದ್ಯಾರ್ಥಿನಿಲಯ, ಸಮಾಜ ಕಲ್ಯಾಣ ಕೇಂದ್ರ, ಕಂಪ್ಯೂಟರ್ ಹಾಗೂ ಬೆರಳಚ್ಚು ತರಬೇತಿ ಕೇಂದ್ರಗಳ ಮೂಲಕ ವೈವಿಧ್ಯಮಯವಾದ ಸಮಾಜಸೇವಾ ಕಾರ್ಯಗಳನ್ನು ನಡೆಸುತ್ತಿದೆ. ಈ ಆಶ್ರಮದ ಆವರಣದಲ್ಲಿ ವಿಶ್ವಭಾವೈಕ್ಯ ಮಂದಿರ, ಸಭಾಂಗಣಗಳು ಹಾಗೂ ಶಾಲೆಗಳಿವೆ. (ಶಾಲೆಯಲ್ಲಿ ಕಿಂಡರ್‌ಗಾರ್ಟನ್ ನಿಂದ +2 ವರೆಗಿನ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅವರಿಗೆ ಶಾಲಾವಾಹನ, ಕ್ರೀಡಾಂಗಣ, ಗ್ರಂಥಾಲಯ ಮೊದಲಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.) 1966ರಿಂದ ಆಶ್ರಮವು ಬುಡಕಟ್ಟು ವಿದ್ಯಾರ್ಥಿನಿಲಯವನ್ನು ನಡೆಸುತ್ತಿದೆ. ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಒಂದು ಕಂಪ್ಯೂಟರ್ ಹಾಗೂ ಬೆರಳಚ್ಚು ತರಬೇತಿ ಕೇಂದ್ರವನ್ನೂ ಆಶ್ರಮ ನಡೆಸುತ್ತಿದ್ದು, ಅದು ಅವರಿಗೆ ಸರ್ಕಾರಿ ಹಾಗೂ ಖಾಸಗಿ ಕಂಪೆನಿಗಳಲ್ಲಿ ಉದ್ಯೋಗ ಪಡೆಯಲು ನೆರವಾಗುತ್ತಿದೆ. ಮುವಾಟ್ಟುಪುಳ ಎಂಬಲ್ಲಿ ಈ ಆಶ್ರಮದ ಉಪಕೇಂದ್ರವೂ ಕಾರ್ಯ ನಿರ್ವಹಿಸುತ್ತಿದೆ.


ಈ ಮೇಲಿನ ಚಟುವಟಿಕೆಗಳನ್ನು ನಡೆಸಿಕೊಂಡು ಬರಲು ಆಶ್ರಮವು ಪ್ರಧಾನವಾಗಿ ನಿಮ್ಮಂತಹ ಭಕ್ತರ ಹಾಗೂ ಹಿತೈಷಿಗಳ ಆರ್ಥಿಕ ನೆರವನ್ನೇ ಆಶ್ರಯಿಸಬೇಕಾಗಿದೆ. ಹಲವು ಬಾರಿ ದಾನ-ದತ್ತಿಗಳ ಕೊರತೆ, ಹಣದುಬ್ಬರ ಮುಂತಾದ ಕಾರಣಗಳಿಂದ ಆರ್ಥಿಕ ಕೊರತೆಯ ಪರಿಸ್ಥಿತಿಯುಂಟಾಗಿದೆ. ಈ ಕಾರಣಗಳಿಂದ ತಾವು ನಮ್ಮ ಉದಾತ್ತ ಸೇವಾಕಾರ್ಯಗಳಿಗೆ ನೆರವಾಗುವಂತೆ, ಉದಾರವಾಗಿ ಧನಸಹಾಯ ಮಾಡಲು ಹಾಗೂ ತಮ್ಮ ಬಂಧು-ಮಿತ್ರರಿಗೂ ಈ ದಿಕ್ಕಿನಲ್ಲಿ ಪ್ರೇರಣೆ ನೀಡಲು ತಮ್ಮನ್ನು ಕಳಕಳಿಯಿಂದ ವಿನಂತಿಸಿಕೊಳ್ಳುತ್ತಿದ್ದೇವೆ.

ಕ್ರ . ಸಂ.	ಚಟುವಟಿಕೆ	ವಾರ್ಷಿಕ ವೆಚ್ಚವನ್ನು ಪೂರೈಕೆ ಮಾಡಲು ತಗಲುವ ಕನಿಷ್ಠ ಧನಸಹಾಯ
1.	**ನಿತ್ಯ ಸೇವಾಕಾರ್ಯಗಳು** – ಶ್ರೀರಾಮಕೃಷ್ಣರ ಪೂಜೆ, ಜಯಂತಿ ಉತ್ಸವಗಳು, ಆಶ್ರಮ ನಿವಾಸ-ನಿರ್ವಹಣೆ, ನಿತ್ಯ ಅನ್ನದಾನ ಹಾಗೂ ಸಾಧುಸೇವೆ.	25 ಲಕ್ಷ ರೂ.
2.	**ಶೈಕ್ಷಣಿಕ** – ಶಾಲಾ ಚಟುವಟಿಕೆಗಳ ನಿರ್ವಹಣೆ, ಕಟ್ಟಡಗಳ ನಿರ್ವಹಣೆ, ಶಾಲಾ ಚಟುವಟಿಕೆಗಳ ಆಧುನೀಕರಣ ಹಾಗೂ ಉನ್ನತೀಕರಣ, ಬಡ ವಿದ್ಯಾರ್ಥಿಗಳಿಗೆ ನೆರವು ನೀಡುವ ನಿಧಿ, ಸ್ಕಾಲರ್‌ಶಿಪ್ ಇತ್ಯಾದಿ.	10 ಲಕ್ಷ ರೂ.
3.	**ಸಮಾಜ ಅಭಿವೃದ್ಧಿ ಹಾಗೂ ಕಲ್ಯಾಣ ಸೇವಾಕಾರ್ಯಗಳು** – ಶ್ರೀರಾಮಕೃಷ್ಣ ಗುರುಕುಲಂ ವಿದ್ಯಾರ್ಥಿನಿಲಯದ ಖರ್ಚುವೆಚ್ಚಗಳು, ಪರಿಶಿಷ್ಟ ವರ್ಗ ಕಲ್ಯಾಣ, ಪರಿಶಿಷ್ಟ ಜಾತಿ ತರಬೇತಿ ಕೇಂದ್ರ, ಕಂಪ್ಯೂಟರ್ ಹಾಗೂ ಬೆರಳಚ್ಚು ತರಬೇತಿ ಕೇಂದ್ರ, ಬಡವರಿಗೆ ಹಾಗೂ ವಿಧವೆಯರಿಗೆ ಆರ್ಥಿಕ ನೆರವು ಇತ್ಯಾದಿ.	15 ಲಕ್ಷ ರೂ.
4.	**ಹೊಸ ಜನರೇಟರ್ ಖರೀದಿ** – ಮಂದಿರ, ಆಫೀಸು, ಗುರುಕುಲ ವಿದ್ಯಾರ್ಥಿನಿಲಯ, ಸಾಧು ನಿವಾಸ ಹಾಗೂ ಅತಿಥಿ ಗೃಹ ಇವುಗಳಿಗೆ ಹೆಚ್ಚುವರಿ ವಿದ್ಯುತ್ ಪೂರೈಕೆಗಾಗಿ.	6 ಲಕ್ಷ ರೂ.

ತಮ್ಮ ದೇಣಿಗೆಯನ್ನು ನೀವು ಚೆಕ್/ಡಿ.ಡಿ.(''Sri Ramakrishna Advaita Ashrama'' ಹೆಸರಿನಲ್ಲಿ), ಇಲೆಕ್ಟ್ರಾನಿಕ್ ವರ್ಗಾವಣೆ ಮೂಲಕ ಕಳುಹಿಸಬಹುದು. (Canara Bank, Kalady IFSC Code CNRB0002921 Account Number 2921101005444.) ದೇಣಿಗೆಯನ್ನು ಕಳುಹಿಸಿದ ಬಳಿಕ ತಮ್ಮ ಹೆಸರು, ಪೂರ್ಣ ವಿಳಾಸ, ಪ್ಯಾನ್ ನಂಬರ್ ಇವನ್ನು kalady@rkmm.org ಈ ವಿಳಾಸಕ್ಕೆ ಇ-ಮೇಲ್ ಮೂಲಕ ಕಳುಹಿಸಿಕೊಡಬೇಕು. ನೀವು ನೀಡುವ ದೇಣಿಗೆಯು ಆದಾಯ ತೆರಿಗೆ ಕಾಯಿದೆಯ u/s 80G ತೆರಿಗೆ ವಿನಾಯಿತಿ ಪಡೆಯಲು ಅರ್ಹ ವಾಗಿರುತ್ತದೆ. ರೂ.25,000/- ಕ್ಕೂ ಹೆಚ್ಚಿನ ಮೊತ್ತವನ್ನು ದತ್ತಿಯನ್ನಾಗಿ ಪರಿಗಣಿಸಿ ಸ್ವೀಕರಿಸಲಾಗುವುದು.

ಭಗವಾನ್ ಶ್ರೀರಾಮಕೃಷ್ಣರು ನಿಮ್ಮ ಎಲ್ಲ ಕಾರ್ಯಚಟುವಟಿಕೆಗಳಲ್ಲಿ ತಮ್ಮ ಕೃಪೆಯನ್ನು ಹರಿಸಲಿ ಎಂಬುದೇ ನಮ್ಮ ಹೃತ್ಪೂರ್ವಕ ಪ್ರಾರ್ಥನೆ.

ಭಗವತ್ಸೇವೆಯಲ್ಲಿ ತಮ್ಮ,
ಸ್ವಾಮಿ ಶ್ರೀವಿದ್ಯಾನಂದ
ಅಧ್ಯಕ್ಷರು



ಭಗವಂತನ ಸ್ವರೂಪ

ಆಧ್ಯಾತ್ಮಿಕ ಹಾದಿ ಒಂದು ರೀತಿಯಲ್ಲಿ ಕತ್ತಲಲ್ಲಿ ಪರದಾಡಿದಂತೆ. ಏನೂ ಕಾಣಿಸುತ್ತಿಲ್ಲ; ಏನೂ ಕಾಣದೆ ಸುಮ್ಮನೆ ನಿಂತರೆ ಕತ್ತಲೆ ಮಾಯವಾಗುವುದಿಲ್ಲ. ಮುಂದಕ್ಕೆ ಚಲಿಸಲೇಬೇಕು. ಕಣ್ಣೆಂಬ ಇಂದ್ರಿಯ ವಿಫಲವಾದಾಗ ಕೈ ಕೆಲಸಮಾಡುತ್ತದೆ. ಪರದಾಡುವಾಗಲೂ ಅಪಾಯ ತಪ್ಪಿದ್ದಲ್ಲ. ಏನಾದರೊಂದು ಆಧಾರ ಸಿಕ್ಕಿದರೆ ಸಾಕೆಂದು ಪರಿತಪಿಸುತ್ತೇವೆ. ಆಧ್ಯಾತ್ಮಿಕ ಜಗತ್ತಿನಲ್ಲೂ ಹೀಗೆಯೇ. ನಮಗೇನೂ ಆಧ್ಯಾತ್ಮಿಕ ಅನುಭವವಾಗಿಲ್ಲ. ಈಗ ಉಂಟಾಗುತ್ತಿರುವ ಅನುಭವ ಪ್ರಪಂಚವೆಲ್ಲ ನಮ್ಮ ಅರಿವನ್ನು ಮುಸುಕಿಬಿಟ್ಟಿದೆ. ಸಾಗಬೇಕಾದ ಗುರಿ ಎಷ್ಟು ದೂರ, ಯಾವ ದಿಕ್ಕಿನಲ್ಲಿ ಸಾಗಬೇಕು, ಹೇಗೆ ಸಾಗಬೇಕು, ಎಲ್ಲಿ ಎಡವಿ ಬೀಳುವ ಸಾಧ್ಯತೆಯಿದೆ — ಇದೊಂದೂ ಗೊತ್ತಿಲ್ಲದೆ, ಕತ್ತಲಲ್ಲಿ ಪ್ರಯಾಣ ಹೊರಟಂತೆ ದೇವರನ್ನರಸಿ ಹೊರಟಿದ್ದೇವೆ. ಯಾರೋ ಹೇಳಿದ, ಎಲ್ಲೋ ಕೇಳಿದ ಅಥವಾ ಇನ್ನೆಲ್ಲೋ ಓದಿದ ಅರಿವು ಮಾತ್ರ ನಮ್ಮ ದಾರಿದೀಪ. ಅದೆಷ್ಟು ವಿಶ್ವಾಸಾರ್ಹವೋ, ಎಲ್ಲಿಯತನಕ ದೀಪದ ಎಣ್ಣೆ ಉಳಿಯವುದೋ ಗೊತ್ತಿಲ್ಲ. ಒಟ್ಟಿನಲ್ಲಿ ನಮ್ಮ ಯಾನ, ಅಜ್ಞಾತ ನೆಲೆಯ ಶೋಧ ಆರಂಭವಾಗಿದೆ. ಯಾವಾಗ ಗುರಿ ತಲುಪುವೆವೋ, ಅಥವಾ ನಿಜವಾಗಿ ಗುರಿ ತಲುಪುವೆವೋ ಇಲ್ಲವೋ – ಗೊತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿರುವ ಸಾಧಕನು ಈ ಹಿಂದೆ ಆಧ್ಯಾತ್ಮಿಕ ಅನುಭವಗಳನ್ನು ಪಡೆದ ಮಹಾತ್ಮರ ಮಾತುಗಳನ್ನು ಪರಿಶೀಲಿಸುವುದರಿಂದ ವಿಶೇಷ ಪ್ರಯೋಜನವಿದೆ.

ಭಗವಂತನ ಸ್ವರೂಪ : ಅದು ಅನಿರ್ವಚನೀಯ

ಆಶ್ಚರ್ಯದ ಸಂಗತಿಯೆಂದರೆ, ದೇವರನ್ನು ಕಾಣದ ಹಾಗೂ ಅರಿಯದ ನಾವು ಅವನನ್ನು ಕುರಿತು ಅನುಭವದ ಮಾತಾಗಿ ಹೇಗೆ ಏನನ್ನೂ ಹೇಳಲಾರೆವೋ, ಅದೇ ರೀತಿ ದೇವರನ್ನು ಕಂಡವರೂ ಏನೊಂದನ್ನೂ ಹೇಳಲಾಗದು! ಪ್ರಪಂಚದ ಧಾರ್ಮಿಕ–ಆಧ್ಯಾತ್ಮಿಕ ಇತಿಹಾಸವನ್ನು ಅವಲೋಕಿಸಿದರೆ, ಆಧ್ಯಾತ್ಮಿಕ ಸತ್ಯಗಳನ್ನು ಕಂಡು ಅನುಭವಿಸಿದ ಅಥವಾ ದೇವರನ್ನು ಕಂಡದ್ದಾಗಿ ಹೇಳಿದ ಮಹಾತ್ಮರುಗಳಲ್ಲಿ ಹಲವರ ಹೆಸರುಗಳು ಕೇಳಿಬರುತ್ತವೆ. ಅವರೆಲ್ಲ ತಮಗಾದ ದರ್ಶನ, ಅನುಭವಗಳನ್ನು ಮಾತಿನ ಮೂಲಕ ವಿವರಿಸಲು ಪ್ರಯತ್ನಪಟ್ಟಿದ್ದಾರೆ. ಇಲ್ಲಿ 'ಪ್ರಯತ್ನಪಟ್ಟಿದ್ದಾರೆ' ಎಂಬುದು ಬಹಳ ಮುಖ್ಯ. ಏಕೆಂದರೆ ಎಲ್ಲ ಮಹಾತ್ಮರ, ಎಲ್ಲ ಶಾಸ್ತ್ರಗಳ, ಎಲ್ಲ ಧರ್ಮಗಳ ಏಕಾಭಿಪ್ರಾಯವೇನೆಂದರೆ: ದೇವರಿರುವುದು ಸತ್ಯವಾದರೂ, ದೇವರನ್ನು ಕಾಣುವುದು ಸಾಧ್ಯವಾದರೂ, ಅವನು ಹೇಗಿದ್ದಾನೆ ಎಂಬುದನ್ನು ಮಾತಿನ ಮೂಲಕ ವರ್ಣಿಸಲಾಗದು. 'ದೇವರನ್ನು ಕಂಡರೂ ವರ್ಣಿಸಲಾಗದು' ಎಂಥ ಮಾತು! ಈ ಮಾತಿನ ಹಿಂದಿರುವ ತಾರ್ಕಿಕ ಬಿಕ್ಕಟ್ಟನ್ನು ಅರಿತುಕೊಳ್ಳುವುದು ಅತ್ಯಂತ ಕಷ್ಟದ ಕೆಲಸ. ಹಲವೆಡೆ ಕೇಳಿಬರುವ ಇಂಥ ಕೆಲವು ಮಾತುಗಳನ್ನು ಮೊದಲು ಗಮನಿಸೋಣ.

'ಅಲ್ಲಿಗೆ ಕಣ್ಣು ಹೋಗುವುದಿಲ್ಲ , ಮಾತು ಹೋಗುವುದಿಲ್ಲ, ಮನಸ್ಸು ಹೋಗುವುದಿಲ್ಲ. ಇದನ್ನು ನಾವರಿಯೆವು, ಇದನ್ನು ಹೇಗೆ ತಿಳಿಸಬೇಕೋ ಅರಿಯುವೆವು. ನಾವು ಏನು ತಿಳಿದಿದ್ದೇವೋ ಏನು ತಿಳಿದಿಲ್ಲವೋ ಅದೆಲ್ಲಕ್ಕಿಂತಲೂ ಅದು ಬೇರೆಯೇ ಆಗಿದೆ' ಎಂದು ಕೇನೋಪನಿಷತ್ತು ಹೇಳುತ್ತದೆ.[೧] 'ಯಾವುದರಿಂದ ಮಾತುಗಳು ಮನಸ್ಸಿನೊಂದಿಗೆ ಅದನ್ನು ಹೊಂದಲಾರದೆ ಹಿಂದಿರುಗುವುದೋ' ಎಂದು ತೈತ್ತಿರೀಯ ಉಪನಿಷತ್ತು ಹೇಳುತ್ತದೆ.[೨] ಇದೇ ರೀತಿ ಇತರ ಉಪನಿಷತ್ತುಗಳಲ್ಲಿ ಬ್ರಹ್ಮದ ಸ್ವರೂಪವನ್ನು ಹೇಳುವಾಗ 'ಅನಿರ್ದೇಶ್ಯಂ' ('ಇದು ಹೀಗೆ ಎಂದು ನಿರ್ದೇಶಿಸಿ ಹೇಳಲಾಗದು') 'ಅವ್ಯಪದೇಶ್ಯಂ' (ವಿವರಿಸಿ ಹೇಳಲಾಗದಂಥದು) ಎಂದೆಲ್ಲ ಹೇಳಲಾಗಿದೆ. ಬ್ರಹ್ಮವನ್ನು ಕುರಿತು ಮಾತಿನಲ್ಲಿ ಹೇಳಬಹುದಾದ್ದೆಂದರೆ ಇಷ್ಟೆ: 'ಅದನ್ನು ಕುರಿತು ಏನೂ ಹೇಳಲಾಗದು'

---

೧ ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ।
ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್ ॥
ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ। *(ಕೇನೋಪನಿಷತ್ತು, ೧.೩ –೪)*

೨ ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ।
(ತೈತ್ತಿರೀಯ ಉಪನಿಷತ್ತು, ೨.೪)

ಎಂದು. ಆದರೆ ಎಲ್ಲೆಡೆ '**ವಿದಿತ್ವಾ**' (ಅಂದರೆ 'ಅರಿತುಕೊಂಡು') '**ವಿದ್ವಾನ್**' ('ಅರಿತುಕೊಂಡವನು') '**ಯೋ ವೇದ**' ('ಯಾರು ತಿಳಿದಿದ್ದಾನೋ') ಎಂಬ ಮಾತುಗಳು ಹೇರಳವಾಗಿ ಬರುತ್ತವೆ. ಇಲ್ಲೆಲ್ಲ ಬ್ರಹ್ಮನನ್ನು ಅರಿತುಕೊಳ್ಳುವಯದು ಎಂದರೆ ಮನಸ್ಸು, ಬುದ್ಧಿ, ತರ್ಕಗಳ ಮೂಲಕ ಅರಿತಿದ್ದಾನೆ ಎಂದರ್ಥವಲ್ಲ ; ಅನುಭವಿಸಿ ಕಂಡುಕೊಂಡಿದ್ದಾನೆ — ಅದೂ ಇಂದ್ರಿಯ, ಮನಸ್ಸು, ಬುದ್ಧಿ ಇತ್ಯಾದಿಗಳಿಗೆ ಮೀರಿದ ಒಂದು ಅನುಭವವನ್ನು ಪಡೆದಿದ್ದಾನೆ ಎಂದೇ ಅರ್ಥ. ಆದ್ದರಿಂದ ಬ್ರಹ್ಮವನ್ನು, ಆತ್ಮವನ್ನು, ಅನುಭವ ಮಾಡಿಕೊಳ್ಳಬಹುದು; ಆದರೆ ಆ ಅನುಭವವನ್ನು ಮಾತಿನ ಮೂಲಕ ವಿವರಿಸಿ ಹೇಳಲಾಗದು — ಇದು ಒಟ್ಟು ಅಭಿಪ್ರಾಯ.

ಇನ್ನು ನಮ್ಮ ಶಾಸ್ತ್ರಗ್ರಂಥಗಳಲ್ಲಿಯೂ, ಸಾಧುಸಂತರ ನುಡಿಗಳಲ್ಲಿಯೂ ಕಂಡುಬರುವ ಭಗವಂತನ ವರ್ಣನೆಗಳಿಗೆ ಮಿತಿಯಿಲ್ಲವಲ್ಲ? ರಾಶಿರಾಶಿ ಗ್ರಂಥಗಳಲ್ಲಿ ವರ್ಣಿಸಲ್ಪಟ್ಟಿರುವ ದೇವರ ವಿಷಯವೆಲ್ಲ ವ್ಯರ್ಥವೆ, ಹಾಗಾದರೆ? ಒಂದೊಂದು ಸ್ತೋತ್ರ, ಹಾಡು, ಕೀರ್ತನೆ, 'ಸಹಸ್ರನಾಮ'ಗಳಲ್ಲೆಲ್ಲ ಬಗೆಬಗೆಯಾಗಿ ದೇವರ ವರ್ಣನೆ, ವಿವರಣೆ ಮಾಡಿದ್ದೆಲ್ಲ ಏನು? — ಈ ರೀತಿಯ ಪ್ರಶ್ನೆ ಕೇಳಬಹುದು. ನಿಜ, ಇಂಥ ಸಾಹಿತ್ಯಗಳಿಗೆ ಕೊನೆಯಿಲ್ಲ. ಆದರೆ ಅವುಗಳಲ್ಲಿ ಬಹುಪಾಲು ಸ್ತುತಿ, ಪ್ರಾರ್ಥನೆ, ನಾಮ ವೈವಿಧ್ಯಗಳು; ಅಥವಾ ನಿಷೇಧಾತ್ಮಕವಾದ (ಅಂದರೆ 'ಹೀಗಲ್ಲ', 'ಇದಲ್ಲ', 'ಇದರ ಆಚೆಗಿನದು' ಎಂಬಂತಹ) ವಿವರಣೆಗಳೇ ಅಧಿಕ. ಹೆಚ್ಚೆಂದರೆ ವೇದ, ಉಪನಿಷತ್ತು ಹಾಗೂ ಇತರ ಶಾಸ್ತ್ರ ಗ್ರಂಥಗಳ ಮರುನುಡಿ ಅಷ್ಟೇ ಇವೆ. ಖಚಿತವಾಗಿ ಭಗವಂತನ ಸ್ವರೂಪ ಹೀಗೆ ಎಂಬ ವಿವರಣೆ ಕಡಿಮೆ; ಇದ್ದರೂ ಅವು ಕಾವ್ಯಾತ್ಮಕವಾಗಿರುತ್ತವೆ, ಅಷ್ಟೆ.

ಶ್ರೀರಾಮಕೃಷ್ಣರು ಸಮಾಧಿಯಲ್ಲಿ ತಮಗಾದ ಅನುಭವವನ್ನು ತಮ್ಮ ಶಿಷ್ಯಂದಿರಿಗೆ ವಿವರಿಸಿ ಹೇಳಲು ಪ್ರಯತ್ನಿಸಿ, ಇನ್ನೇನು, 'ಸಮಾಧಿಯಲ್ಲಿ ಹೀಗಾಗುತ್ತದೆ' ಎನ್ನುವಷ್ಟರಲ್ಲಿ ಅವರ ಮನಸ್ಸು ಎಲ್ಲ ಪ್ರಾಪಂಚಿಕ ಮಿತಿಗಳನ್ನು ಮೀರಿ ಹೋಗಿ, ಕೂಡಲೇ ಅವರು ಸಮಾಧಿಯಲ್ಲಿ ಲಯವಾಗಿಬಿಡುತ್ತಿದ್ದರು. ಸಮಾಧಿಯಿಂದಿಳಿದು, ಕಣ್ಣೀರಿಸುತ್ತಾ ಅವರು ಹೇಳುತ್ತಿದ್ದರು: ''ನಾನೇನೂ ಹೇಳದಂತೆ ಜಗನ್ಮಾತೆ ನನ್ನ ಕತ್ತನ್ನು ಒತ್ತಿ ಹಿಡಿದು ಬಿಡುತ್ತಾಳೆ.'' ಬ್ರಹ್ಮನ ಅನಿರ್ವಚನೀಯತೆಯನ್ನು ಅವರು ವಿವರಿಸುವ ರೀತಿ ಹೀಗೆ.

ದೇವರ ನಿಜಸ್ವರೂಪ ನಮ್ಮ ಇಂದ್ರಿಯ, ಮನಸ್ಸು, ಬುದ್ಧಿಗಳಿಗಿಂತ ಎಷ್ಟೋ ಪಟ್ಟು ಸೂಕ್ಷ್ಮವಾದುದು; ಔನ್ನತ್ಯದಲ್ಲಿ ಯಾವ ಎಣಿಕೆಗೂ ನಿಲುಕದ್ದು. ಹಾಗಿರುವಾಗ, ಅತಿಸೂಕ್ಷ್ಮವಾದ ಪರಮಾಣುವನ್ನು ನಮ್ಮ ಕಣ್ಣು ಹೇಗೆ ನೋಡಲಾರದೋ ಹಾಗೆ - ಎಲ್ಲ ಸೂಕ್ಷ್ಮ ವಸ್ತುಗಳಿಗಿಂತಲೂ ಸೂಕ್ಷ್ಮವಾಗಿರುವ ಭಗವಂತನನ್ನು ನಮ್ಮ ಯಾವ ದೈಹಿಕ ಯಂತ್ರಗಳೂ ಗ್ರಹಿಸಲಾರವು. ಇಂಥ ಸನ್ನಿವೇಶದಲ್ಲಿ, ಮನಸ್ಸಿನ ಮೂಲಕ ನಡೆಯುವ ಮಾತಿನ ಮೂಲಕ ಭಗವಂತನನ್ನು ಹೇಗೆ ವಿವರಿಸಲಾದೀತು? ಅಂಥ ಭಗವಂತನನ್ನು ಕಾಣಲು ಸಾಮಾನ್ಯ ಕಣ್ಣು, ಸಾಮಾನ್ಯ ಮನಸ್ಸು ಸಾಲದು. ವಿಶೇಷ ಮನಸ್ಸು , ವಿಶೇಷ ಬುದ್ಧಿ ಬೇಕು. ಅಂಥ ಹೊಸ ದೃಷ್ಟಿ ಬರಬೇಕಾದರೆ ಆಧ್ಯಾತ್ಮಿಕ ಸಾಧನೆ ಅಗತ್ಯ; ದೈಹಿಕ-ಮಾನಸಿಕ ಪರಿಶುದ್ಧತೆ ಅಗತ್ಯ. ಆದ್ದರಿಂದ 'ಬ್ರಹ್ಮವು ಅನಿರ್ವಚನೀಯ' ಎನ್ನಲಾಗಿದೆ — ಸಾಮಾನ್ಯ ಇಂದ್ರಿಯ, ಮನಸ್ಸುಗಳಿಗೆ ನಿಲುಕಲಾರದ ವಸ್ತು ಎನ್ನಲಾಗಿದೆ.

ಅನಂತತೆ

ಯಾವುದೇ ಬಗೆಯ ಅಳತೆಗೆ ನಿಲುಕದ, ಎಲ್ಲವನ್ನೂ ಮೀರಿದ ಅಸ್ತಿತ್ವವನ್ನು ಹೊಂದಿರುವ, ವಸ್ತುವನ್ನು 'ಅನಂತ' ಎನ್ನುವುದು ವಾಡಿಕೆ. ಮಾತು, ಇಂದ್ರಿಯ, ಮನಸ್ಸು, ಬುದ್ಧಿ ಇವುಗಳನ್ನು ಮೀರಿದ ಸತ್ಯವೇ ಭಗವಂತ; ಅವನ ಗುಣ, ಲಕ್ಷಣ ಇಂಥದು ಎಂದು ವಿವರಿಸಲು ಸಾಧ್ಯವಿಲ್ಲ ಎಂದಿದ್ದರೂ, ಅವನನ್ನು 'ಅನಂತ'ವೆಂದು ಕೆಲವೆಡೆ ವಿವರಿಸಿದ್ದನ್ನು ಕಾಣುತ್ತೇವೆ.[೩] ಕಾಲದ ದೃಷ್ಟಿಯಿಂದ, ದೇಶದ ದೃಷ್ಟಿಯಿಂದ, ವಸ್ತುವಿನ ದೃಷ್ಟಿಯಿಂದ ವಿಭಜಿಸಲಾಗದ ಹಾಗೂ ಆದಿ-ಅಂತ್ಯಗಳಿಲ್ಲದ ವಸ್ತುವನ್ನೇ ಅನಂತವೆನ್ನಬೇಕು. ಅಂಥ ವಸ್ತು ಬ್ರಹ್ಮವೊಂದೇ; ಆದ್ದರಿಂದ ಅದೇ ಅಂತಿಮ ಸತ್ಯವೆಂದೂ, ಅದಕ್ಕೆ ಹೊರತಾದ ಇತರ ವಸ್ತುಗಳೆಲ್ಲವೂ ನಶ್ವರವಾದ್ದರಿಂದ ಅನಾತ್ಮವೆಂದೂ ತಿಳಿಯಬೇಕು. ಹೀಗೆ ಪರಮಾತ್ಮನ ಲಕ್ಷಣವನ್ನು ಅನಂತವೆನ್ನಲಾಗಿದೆ.

ಅನಂತವನ್ನು ವಿವರಿಸಲಾಗುವುದಿಲ್ಲ ಎಂಬುದು ನಿಜ. ಆದರೆ ಚಮತ್ಕಾರದ ಮಾತಿನ ಮೂಲಕ ಅದನ್ನು *ಸೂಚಿಸ*ಬಹುದು! ಕಾವ್ಯದ ಭಾಷೆಯಲ್ಲಿ ಈ ಪ್ರಯತ್ನವನ್ನು ಮಾಡುತ್ತವೆ ಉಪನಿಷತ್ತುಗಳು. 'ಅದು(ಅಂದರೆ ಬ್ರಹ್ಮವು, ಅಥವಾ ಪರಮಾತ್ಮನು) ಚಲಿಸುವುದಿಲ್ಲ, ಏಕವಾಗಿದೆ, ಮನಸ್ಸಿಗಿಂತ ವೇಗವಾಗಿದೆ, ಇಂದ್ರಿಯಗಳಿಗಿಂತ ವೇಗವಾಗಿ ಚಲಿಸಿ, ಅವು ತಲುಪುವ ಮೊದಲೇ ಅಲ್ಲಿದ್ದುಬಿಡುತ್ತದೆ. ಅದು ಚಲಿಸುತ್ತದೆ ಎಂದರೆ ಚಲಿಸುತ್ತದೆ; ಇಲ್ಲ ಎಂದರೆ ಇಲ್ಲ. ಅದು ದೂರ ಎಂದರೆ ಅತ್ಯಂತ ದೂರ, ಹತ್ತಿರ ಎಂದರೆ ಅತ್ಯಂತ ಹತ್ತಿರ. ಒಳಗಿದೆ ಎಂದರೆ ಎಲ್ಲದರ ಒಳಗಿದೆ; ಹೊರಗಿದೆ ಎಂದರೆ ಎಲ್ಲದರ ಹೊರಗಿದೆ'[೪] ಎಂಬ ಈ ವಿವರಣೆ ಅದೇ ರೀತಿ ಅನಂತವನ್ನು ಮಾತಿನ ಮೂಲಕ ಹಿಡಿದಿಡುವ, ಕಾವ್ಯಾತ್ಮಕವಾದ ಪ್ರಯತ್ನವಷ್ಟೇ. ನಮ್ಮ ಜೀವನ ಸರ್ವಸ್ವವನ್ನೂ ಮುಡಿಪಾಗಿಟ್ಟು ಆಧ್ಯಾತ್ಮಿಕ ಸಾಧನೆ ಮಾಡುವವನಿಗೆ ಮಾತ್ರ ಭಗವಂತನ ಅನಂತ ಅಸ್ತಿತ್ವದ ಅರಿವು ನಿಜವಾಗಿಯೂ ಉಂಟಾಗುವುದು ಎನ್ನುತ್ತದೆ ಉಪನಿಷತ್ತು. ಅಂಥ ಅರಿವು ಹಾಗೂ ಅನುಭವ ಬೇರೆಯಲ್ಲ.

ಶ್ರೀರಾಮಕೃಷ್ಣರು ಒಂದು ಉದಾಹರಣೆಯನ್ನು ಕೊಡುತ್ತಾರೆ: ''ಉಪ್ಪಿನ ಬೊಂಬೆ ಒಮ್ಮೆ ಸಮುದ್ರದ ಆಳವನ್ನು ಕಂಡುಹಿಡಿ

---

೩ **ಸತ್ಯಂ ಜ್ಞಾನಂ ಅನಂತಂ ಬ್ರಹ್ಮ ।** *(ತೈತ್ತಿರೀಯೋಪನಿಷತ್ತು, ೨.೧)*
೪ **'ಅನೇಜದೇಕಂ..' ಇತ್ಯಾದಿ.** *(ಈಶಾವಾಸ್ಯೋಪನಿಷತ್ತು, ೪-೫)*

ಯಲು ಹೋಯಿತು. ಅದರ ಆಳ ಎಷ್ಟಿದೆ ಎಂಬುದನ್ನು ಪರರಿಗೆ ತಿಳಿಸಬೇಕು ಅಂತ ಅದು ಮನಸ್ಸು ಮಾಡಿಕೊಂಡಿತ್ತು. ಆದರೆ ಅದಕ್ಕೆ ಹಾಗೆ ಮಾಡಲು ಸಾಧ್ಯವೇ ಆಗಲಿಲ್ಲ. ಇಳಿಯುವುದೇ ತಡ, ಕರಗಿಹೋಯಿತು. ಸಮುದ್ರದ ಆಳ ಎಷ್ಟು ಎಂಬುದನ್ನು ತಿಳಿಸುವುದಕ್ಕೆ ಉಳಿದುಕೊಂಡಿರುವರು ಯಾರು?''[೫]

ಅನಂತದ ಸ್ಪರ್ಶವನ್ನು ಪಡೆದವನು ಅನಂತವೇ ಆಗುತ್ತಾನೆ; ಬ್ರಹ್ಮನನ್ನು ಕಂಡವನು ಬ್ರಹ್ಮವೇ ಆಗುತ್ತಾನೆ ಎಂಬುದು ವೇದಗಳ ಮಾತು. ಈ ಕಾರಣಕ್ಕೆ ಶ್ರೀರಾಮಕೃಷ್ಣರು ಹೇಳುತ್ತಾರೆ, ''ಬ್ರಹ್ಮ ಏನು ಎಂಬುದನ್ನು ಬಾಯಿಂದ ವರ್ಣನೆ ಮಾಡಲಾಗುವುದಿಲ್ಲ. ಎಲ್ಲವೂ ಉಚ್ಛಿಷ್ಟವಾಗಿ ಹೋಗಿವೆ — ವೇದ, ಪುರಾಣ, ತಂತ್ರ, ಷಡ್ದರ್ಶನ ಎಲ್ಲಾ. ಇವೆಲ್ಲಾ ಬಾಯಿಂದ ಹೊರಹೊಮ್ಮಿರುವುದರಿಂದ, ನಾಲಗೆ ಉಚ್ಚರಿಸುವುದರಿಂದ ಉಚ್ಛಿಷ್ಟವಾಗಿದೆ. ಆದರೆ ಕೇವಲ ಒಂದು ವಸ್ತು ಮಾತ್ರ ಉಚ್ಛಿಷ್ಟವಾಗಿಲ್ಲ. ಅದೇ ಬ್ರಹ್ಮ. ಬ್ರಹ್ಮ ಎಂದರೆ ಏನು ಎಂಬುದನ್ನು ಯಾರಿಗೂ ಇದುವರೆಗೆ ವರ್ಣನೆ ಮಾಡಲಾಗಿಲ್ಲ.''[೬]

ಖಚಿತವಾದ ಜ್ಞಾನ

ಭಗವದ್ದರ್ಶನವನ್ನು ಪಡೆದವರು ಹೇಳುವ ಒಂದು ಅಭಿಪ್ರಾಯ ಎಲ್ಲೆಡೆ ಸಮಾನವಾಗಿದೆ: ಅವರ ಅರಿವು, ಅತೀತವಾದ ಜ್ಞಾನ ವಿಶೇಷವಾದದ್ದು. ಅದನ್ನು ಅರಿತವರು ಇನ್ನೇನನ್ನೂ ಅರಿಯಬೇಕಾಗಿಲ್ಲ, ಅವರಿಗೆ ಎಲ್ಲ ಜ್ಞಾನವೂ ಒದಗಿಬರುತ್ತದೆ. ಅಷ್ಟೇ ಅಲ್ಲ , ಅವರ ತಿಳುವಳಿಕೆ ಖಚಿತವಾದ ಹಾಗು ಸ್ಪಷ್ಟವಾದ ತಿಳುವಳಿಕೆ. 'ಬ್ರಹ್ಮಜ್ಞಾನವನ್ನು ಹೊಂದಿದವನು ತಪ್ಪುಹೆಜ್ಜೆಯನ್ನು ಎಂದಿಗೂ ಇಡಲಾರ' ಎನ್ನುತ್ತಿದ್ದರು, ಶ್ರೀರಾಮಕೃಷ್ಣರು. ಅವರ ಮನಸ್ಸು, ಬುದ್ಧಿ, ಇಂದ್ರಿಯಗಳೆಲ್ಲ ಆತ್ಮದರ್ಶನದಿಂದಾಗಿ ಪರಿಶುದ್ಧಗೊಂಡಿರುತ್ತವೆ. ಆದ್ದರಿಂದ ಅವರು ಎಲ್ಲಡೆ ಆತ್ಮನನ್ನೇ ಕಾಣುತ್ತಾರೆ. ದೇವರನ್ನು 'ನಿನಗಿಂತ ಸ್ಪಷ್ಟವಾಗಿ ನೋಡಿರುವೆ' ಎಂದು ಶ್ರೀರಾಮಕೃಷ್ಣರು ವಿವೇಕಾನಂದರಿಗೆ ಹೇಳಿದ ಮಾತಿನ ಅರ್ಥ ಇದೇ ಇರಬೇಕು. ಭಗವತ್ ಸಾಕ್ಷಾತ್ಕಾರ ಹೊಂದಿದವರು ಹಲವು ಬಾರಿ ಅಮಾನುಷವಾದ, ಸಾಮಾನ್ಯರಿಗೆ ಸಾಧ್ಯವಿಲ್ಲದ ಬೌದ್ಧಿಕ ಶಕ್ತಿ, ಮಾನಸಿಕ ಸಾಮರ್ಥ್ಯವನ್ನು ತೋರಿಸಿದ ಉದಾಹರಣೆಗಳು ಕಂಡುಬಂದಿವೆ. ಸಾಮಾನ್ಯರು ಇವುಗಳನ್ನು 'ಪವಾಡ', 'ಅತೀಂದ್ರಿಯ ಶಕ್ತಿ' ಎಂದು ವೈಭವೀಕರಿಸುತ್ತಾರೆ. ಈ ಪ್ರಪಂಚವನ್ನು ಮೀರಿಹೋಗಿ, ಸತ್ಯದ ನೈಜಸ್ವರೂಪವನ್ನು ಅರಿತವನಿಗೆ ಅಂಥ ಪವಾಡ, ಶಕ್ತಿ, ಸಿದ್ಧಿಗಳಿಂದ ಯಾವ ಲಾಭ ಬೇಕಾಗಿದೆ? ನಿತ್ಯ ಸತ್ಯವನ್ನು ಕಂಡ ಮಹಾತ್ಮನ ಅರಿವು ಎಲ್ಲ ಗೊಂದಲ, ಸಂದೇಹ, ವಿಕಲ್ಪಗಳಿಂದ ಹೊರತಾದ ಪರಿಶುದ್ಧ ಜ್ಞಾನ ಎಂಬುದೇ ಅತ್ಯಂತ ಮುಖ್ಯವಾದ ಸಂಗತಿ. '**ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ**' ಎಂದು ಭಗವದ್ಗೀತೆ ಹೇಳುತ್ತದೆ. ಎಲ್ಲ ಜ್ಞಾನಗಳೂ ಪವಿತ್ರ; ಅದಕ್ಕೆ ಸಮಾನವಾದ ವಸ್ತು ಬೇರೊಂದಿಲ್ಲ ಎಂದು ಈ ಮಾತಿನ ಅರ್ಥ. ಇದು ಸರಿಯಾಗಿ ಅನ್ವಯಿಸುವುದು ಆತ್ಮಜ್ಞಾನ ಅಥವಾ ಬ್ರಹ್ಮಜ್ಞಾನಕ್ಕೆ.

ಪರಿಪೂರ್ಣತೆ

ದೇವರನ್ನು ಕಂಡವರು ಹೇಳುವ ಇನ್ನೊಂದು ವಿಶೇಷತೆಯೇ, ಅಲ್ಲಿ ಎಲ್ಲವೂ ಪರಿಪೂರ್ಣ ಎಂಬ ಅಂಶ. ಆತ್ಮನಿಗೆ (ಅಥವಾ ದೇವರಿಗೆ) ಹೊರತಾದ ಪ್ರತಿಯೊಂದು ವಸ್ತುವೂ ಅಪೂರ್ಣ; ವಿನಾಶವುಳ್ಳದ್ದು ಹಾಗೂ ಸೀಮಿತವಾದ್ದು. ಸದಾ ಚಲಿಸುವ ಸ್ವಭಾವವುಳ್ಳ ಪ್ರಪಂಚದ ಎಲ್ಲ ವಸ್ತುಗಳೂ ಅಪೂರ್ಣವೇ. ನಿಜವಾದ ಪರಿಪೂರ್ಣತೆ ಪರಬ್ರಹ್ಮವೊಂದೇ. ಅದನ್ನು ಅರಿತವನು, ಅಂದರೆ ಆತ್ಮಸಾಕ್ಷಾತ್ಕಾರ ಹೊಂದಿದವನು ಪರಿಪೂರ್ಣನೇ ಆಗುತ್ತಾನೆ. ಇದಕ್ಕೆ ಭಿನ್ನವಾಗಿ '**ಓಂ ಪೂರ್ಣಮದಃ ಪೂರ್ಣಮಿದಂ**' ಎಂಬ ಶಾಂತಿಮಂತ್ರದಲ್ಲಿ 'ಆ ಜಗತ್ತು ಪೂರ್ಣ, ಈ ಜಗತ್ತೂ ಪೂರ್ಣ' ಎಂದು ಹೇಳಿರುವುದನ್ನು ಇಲ್ಲಿ ಗಮನಿಸಬೇಕು. ಆ ಪಾರಮಾರ್ಥಿಕ ಜಗತ್ತು ಪರಿಪೂರ್ಣ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈ ಜಗತ್ತನ್ನು ಪೂರ್ಣವೆಂದಿರುವುದೇಕೆ? ಲೌಕಿಕ ಜಗತ್ತು, ಲೌಕಿಕ ಸತ್ಯ - ಪೂರ್ಣ ಎಂದಾದಲ್ಲಿ ಪಾರಮಾರ್ಥಿಕವನ್ನು ಹುಡುಕಿ ಹೋಗುವ ಅಗತ್ಯವಾದರೂ ಏನಿದೆ? — ಈ ಎಲ್ಲ ಪ್ರಶ್ನೆಗಳೇಳುತ್ತವೆ. ಆದರೆ, ಪರಿಪೂರ್ಣ ಸತ್ಯದಿಂದಲೇ ಹುಟ್ಟಿದ ಈ ಜಗತ್ತು, ಆ ಸತ್ಯದ ಲಕ್ಷಣವನ್ನೇ ಹೊಂದಿದೆ; ಮಿತವಾದ, ಅಪೂರ್ಣವಾದ ಲಕ್ಷಣವೇನಿದ್ದರೂ ತೋರಿಕೆ. ನಿಜವಾಗಿ ಈ ಪ್ರಪಂಚದ ಒಳ-ಹೊರಗೆಲ್ಲ ತುಂಬಿರುವುದು ಆತ್ಮವೇ ಆಗಿದ್ದರೆ, ಅಂತಿಮವಾಗಿ ಈ ಲೋಕವೂ ಪರಿಪೂರ್ಣವೇ ಆಗಿದೆಯೆನ್ನಬೇಡವೆ? ಇಂತಹ ಸರ್ವವ್ಯಾಪಕ ಹಾಗೂ ಸಾರ್ವತ್ರಿಕ ದೃಷ್ಟಿಕೋನವನ್ನು ಹೊಂದಿದ್ದರೆ ಇಲ್ಲಿನ ವೈರುಧ್ಯ ಅಸಮಂಜಸವೆನಿಸದು. ಬ್ರಹ್ಮ ಸತ್ಯವಾಗಿದ್ದರೂ ಜಗನ್ಮಿಥ್ಯೆಯಾಗಬೇಕಿಲ್ಲ, ಬ್ರಹ್ಮವು ಸರ್ವತ್ರ ಇರುವುದರಿಂದ ಪ್ರಪಂಚದ ಒಳಹೊರಗೆ ವ್ಯಾಪ್ತವಾದ ಸತ್ಯವೇ ಆಗಿದೆಯೆನ್ನಬೇಕು. ಹೀಗೆ '**ಸರ್ವಂ ಖಲ್ವಿದಂ ಬ್ರಹ್ಮ**' ('ಈ ಎಲ್ಲವೂ ಬ್ರಹ್ಮವೇ ತಾನೆ?') ಎಂಬ ಛಾಂದೋಗ್ಯೋಪನಿಷತ್ತಿನ ವಾಕ್ಯ ಇಲ್ಲಿ ಪ್ರಸ್ತುತವಾಗುತ್ತದೆ. ಮಿಥ್ಯೆ, ಸೀಮಿತದೃಷ್ಟಿ ಹಾಗೂ ಅಜ್ಞಾನ ಕೇವಲ ಒಂದು ಹಂತದ ಅವಸ್ಥೆ. ಅದನ್ನು ದಾಟಿ ನಿಂತಾಗ ಎಲ್ಲವೂ ಸತ್ಯವಾಗಿರುತ್ತದೆ ಎಂಬುದು ನಿಜವಾದ ವೇದಾಂತದ ದೃಷ್ಟಿ. ಇಂಥ ಜ್ಞಾನವನ್ನು ಅನುಭವವಾಗಿ ಪಡೆದ ಮಹಾತ್ಮರ ಜೀವನವೂ ಪರಿಪೂರ್ಣತೆಯಿಂದ ತುಂಬಿ ತುಳುಕಾಡಿದ್ದನ್ನು ನಾವು ಗಮನಿಸಬೇಕು.

ಆಗಸ್ಟ್ ತಿಂಗಳ ಕಾರ್ಯಕ್ರಮಗಳು

೭	ಮಂಗಳವಾರ	ಏಕಾದಶಿ
೯	ಗುರುವಾರ	ಸ್ವಾಮಿ ರಾಮಕೃಷ್ಣಾನಂದ ಜಯಂತಿ
೨೨	ಬುಧವಾರ	ಏಕಾದಶಿ
೨೬	ಭಾನುವಾರ	ಸ್ವಾಮಿ ನಿರಂಜನಾನಂದ ಜಯಂತಿ

೫. ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೩೪
೬. ಅಲ್ಲೇ ಪು. ೩೩

ದೇವರಿಗಾಗಿ ವ್ಯಾಕುಲತೆ



❁ ಯಾವ ರೀತಿ ಮಗು ತನ್ನ ತಾಯಿಯನ್ನು ಕಾಣದೆ ದಿಗ್ಭ್ರಮೆಗೊಂಡು, ಅದರ ಬಾಯಿಗೆ ಸಂದೇಶ, ಮಿಠಾಯಿ ಯಾವುದು ಹಾಕಿದರೂ ಅದೊಂದೂ ಅದಕ್ಕೆ ಬೇಡವಾಗಿ ಏನು ಮಾಡಿದರೂ ತಾಯಿಯನ್ನು ಮರೆಯದೆ ಹೇಳುತ್ತದೆಯೊ, 'ಒಂದೂ ಬೇಡ, ನಾನು ತಾಯ ಹತ್ತಿರ ಹೋಗಬೇಕು' ಅಂತ, ಅದೇ ರೀತಿ ಯಾಗಿ ಭಗವಂತನಿಗಾಗಿ ಮನುಷ್ಯ ವ್ಯಾಕುಲ ಪಡಬೇಕು. ಆಹಾ! ಎಂಥ ಅವಸ್ಥೆ! ಮಗು ತನ್ನ ತಾಯಿಗಾಗಿ ಎಷ್ಟೊಂದು ವ್ಯಾಕುಲಪಡುತ್ತದೆ! ಯಾವುದರಿಂದಲೂ ಅದು ತನ್ನ ತಾಯಿಯನ್ನು ಮರೆಯದು. ಯಾರಿಗೆ ಈ ಜಗತ್ತಿನ ಸುಖೋಪಭೋಗಗಳೂ ರುಚಿಸವೊ, ಯಾರಿಗೆ ಬೇರೆ ಯಾವುವೂ ಬೇಕಾಗಿಲ್ಲವೊ, ಹಣ, ಹೆಸರು, ದೇಹಸುಖ, ಇಂದ್ರಿಯಸುಖ ಇವು ಯಾವುವೂ ಹಿಡಿಸವೊ, — ಆತ ಹೃತ್ಪೂರ್ವಕವಾಗಿಯೂ ಭಗವಂತನ ದರ್ಶನಕ್ಕಾಗಿ ಅತ್ಯಂತ ಕಾತರನಾಗುತ್ತಾನೆ. ಅಂಥವರಿಗಾಗಿಯೇ ಭಗವತಿ ತನ್ನ ಎಲ್ಲಾ ಕೆಲಸಗಳನ್ನು ಬಿಟ್ಟು ಓಡಿಬರಬೇಕಾಗುತ್ತದೆ.

❁ ವ್ಯಾಕುಲತೆಯೇ ಸರ್ವಸ್ವ. ಯಾವ ಮಾರ್ಗದಲ್ಲಾದರೂ ಹೋಗು — ನೀನು ಹಿಂದೂ, ಮುಸಲ್ಮಾನ, ಕ್ರಿಶ್ಚಿಯನ್, ಶಾಕ್ತ, ಬ್ರಾಹ್ಮ ಯಾವುದು ಬೇಕಾದರೂ ಆಗಿರು — ಆವಶ್ಯಕವಾಗಿ ಬೇಕಾಗಿರುವುದು ವ್ಯಾಕುಲತೆ. ಆತ ನಮ್ಮ ಅಂತರ್ಯಾಮಿ. ವ್ಯಾಕುಲತೆಯೊಂದಿದ್ದರೆ ನಾವು ತಪ್ಪು ದಾರಿ ಹಿಡಿದಿದ್ದರೂ ಚಿಂತೆಯಿಲ್ಲ , ಆತ ಮತ್ತೆ ನಮ್ಮನ್ನು ಒಳ್ಳೇ ಮಾರ್ಗಕ್ಕೆ ತಂದು ಸೇರಿಸಿಬಿಡುತ್ತಾನೆ.

❁ ವ್ಯಾಕುಲತೆ ಬೇಕು, ಯಾವ ರೀತಿಯಾಗಿ ಮಗು ತಾಯಿಯನ್ನು ಕಾಣದೆ ದಿಗ್ಭ್ರಮೆಗೊಂಡು ಆಕೆಗಾಗಿ ಅಳುವುದೊ, ಅದೇ ರೀತಿಯಾಗಿ ವ್ಯಾಕುಲನಾಗಿ ಭಗವಂತನಿಗಾಗಿ ಅತ್ತರೆ ಆಗ ಭಗವಂತ ಕೂಡ ದೊರೆತುಬಿಡುತ್ತಾನೆ.

❁ ಅರುಣೋದಯವಾದರೆ ಪೂರ್ವ ಹೊಂಬಣ್ಣವಾಗುತ್ತದೆ. ಆಗ ಗೊತ್ತಾಗುತ್ತದೆ, ಸೂರ್ಯೋದಯಕ್ಕೆ ಇನ್ನು ಹೆಚ್ಚು ಹೊತ್ತು ಇಲ್ಲ. ಅದೇ ರೀತಿ ಯಾರಲ್ಲಿಯೇ ಆಗಲಿ ಭಗವಂತನಿಗಾಗಿ ಅತ್ಯಂತ ಅಗಾಧವಾದ ವ್ಯಾಕುಲತೆ ಉಂಟಾಗಿರುವುದು ಕಂಡುಬಂದರೆ, ಆಗ ಚೆನ್ನಾಗಿ ಗೊತ್ತಾಗುತ್ತದೆ ಆ ವ್ಯಕ್ತಿ ಸಾಕ್ಷಾತ್ಕಾರಕ್ಕಾಗಿ ಇನ್ನು ಹೆಚ್ಚು ಕಾಲ ಕಾದಿರಬೇಕಾಗಿಲ್ಲ ಅಂತ.

❁ ಒಬ್ಬ ಶಿಷ್ಯ ಗುರುವನ್ನು ಕೇಳಿದ, 'ಪೂಜ್ಯರೆ. ದಯವಿಟ್ಟು ಹೇಳಿ, ಭಗವಂತನನ್ನು ಪಡೆಯುವುದು ಹೇಗೆ?' ಗುರು ಹೇಳಿದ, 'ಬಾ ನನ್ನೊಡನೆ, ನಿನಗೆ ತೋರಿಸಿಕೊಡುತ್ತೇನೆ.' ಹೀಗೆಂದು ಹೇಳಿ ಗುರು ಆತನನ್ನು ಸಂಗಡ ಕರೆದುಕೊಂಡು ಒಂದು ಕೆರೆಯ ಹತ್ತಿರಕ್ಕೆ ಹೋದ. ಇಬ್ಬರೂ ನೀರಿಗೆ ಇಳಿದರು. ಬಳಿಕ ಗುರು ಇದ್ದಕ್ಕಿದ್ದ ಹಾಗೆ ಶಿಷ್ಯನನ್ನು ನೀರಿನೊಳಕ್ಕೆ ಮುಳುಗಿಸಿ ಅದುಮಿ ಹಿಡಿದ. ಒಂದು ಸ್ವಲ್ಪ ಹೊತ್ತಿನ ನಂತರ ಆತನನ್ನು ಬಿಟ್ಟುಬಿಡಲಾಗಿ ಶಿಷ್ಯ ನೀರಿನಿಂದ ಮೇಲೆಕ್ಕೆ ಎದ್ದುಬಂದು ನಿಂತ. ಆಗ ಗುರು ಕೇಳಿದ, 'ನೀರಿನೊಳಗಿದ್ದಾಗ ನಿನಗೇನನ್ನಿಸುತ್ತಿತ್ತು?' ಶಿಷ್ಯ ಹೇಳಿದ, 'ಪ್ರಾಣ ಹೋಗುವುದರಲ್ಲಿತ್ತು; ಒಂದು ಗುಟುಕು ಉಸಿರಿಗಾಗಿ ಪ್ರಾಣ ಸುಮ್ಮನೆ ಒದ್ದಾಡುತ್ತಿತ್ತು.' ಆಗ ಗುರು ಹೇಳಿದ: 'ಯಾವಾಗ ನಿನ್ನ ಪ್ರಾಣ ಈ ರೀತಿ ಭಗವಂತನಿಗಾಗಿ ವ್ಯಾಕುಲಪಡುವುದೊ ಆಗ ತಿಳಿದುಕೊ – ನೀನು ಹೆಚ್ಚುಕಾಲ ಆತನ ದರ್ಶನಕ್ಕಾಗಿ ಕಾಯಬೇಕಾಗಿಲ್ಲ ಅಂತ.'

❁ ಸುಮ್ಮನೆ ಮೇಲೆಯೇ ತೇಲಿದರೆ ಏನು ದೊರೆಯುತ್ತದೆ? ಒಂದು ಸ್ವಲ್ಪ ಮುಳುಗು. ರತ್ನಗಳು ಬಹಳ ಆಳದಲ್ಲಿ ಬಿದ್ದಿವೆ. ನೀರಿನ ಮೇಲೆ ಕೈಕಾಲು ಹೊಡೆದರೆ ಏನಾಗುತ್ತದೆ? ಮಾಣಿಕ್ಯ ವಾಸ್ತವಿಕವಾಗಿ ಬಹಳ ಭಾರವಾದದ್ದು; ಅದು ನೀರಿನ ಮೇಲೆ ತೇಲದು; ಅದು ಮುಳುಗಿ ತಳಕ್ಕೆ ಹೋಗಿ ಕುಳಿತುಕೊಳ್ಳುತ್ತದೆ. ನಿನಗೆ ನಿಜವಾದ ರತ್ನ ಬೇಕಾಗಿದ್ದರೆ ನೀರಿನ ಆಳಕ್ಕೆ ಮುಳುಗಬೇಕು.

❁ ಆತನ ಸ್ಮರಣೆಮಾಡಿದರೆ ಸಕಲ ಪಾಪಗಳೂ ಭಸ್ಮವಾಗಿ ಹೋಗುತ್ತದೆ. ಮುಳುಗು ಹಾಕಲೇಬೇಕು. ಇಲ್ಲದಿದ್ದರೆ ರತ್ನ ದೊರೆಯದು. ಕೆಲಕೆಲವರಿಗೆ, ಮುಳುಗಲು ಇಚ್ಛೆ ಇಲ್ಲ. ಅವರು ಹೇಳುತ್ತಾರೆ: 'ಭಗವಂತ, ಭಗವಂತ ಅಂತ ತಲೆ ಚಚ್ಚಿಕೊಂಡು ಕೊನೆಗೆ ಹುಚ್ಚರಾಗಿ ಬಿಡೋಣವೇನು?' ಯಾರು ಭಗವಂತನ ಪ್ರೇಮದಿಂದ ಮತ್ತರಾಗಿದ್ದಾರೊ ಅವರ ಸಂಬಂಧವಾಗಿ ಅವರು 'ಇವರಿಗೆ ತಲೆ ಕೆಟ್ಟುಹೋಗಿದೆ' ಅಂತ ಹೇಳುತ್ತಾರೆ. ಆದರೆ ಈ ಜನರಿಗೆ ಗೊತ್ತಾಗದು; ಸಚ್ಚಿದಾನಂದ ಅಮೃತಸಾಗರ ಎಂಬುದು. ನಾನು ಒಮ್ಮೆ ನರೇಂದ್ರನನ್ನು ಕೇಳಿದೆ, 'ಒಂದು ಬಟ್ಟಲ ತುಂಬ ಸಕ್ಕರೆಪಾನಕ ಇದೆ, ನೀನು ಒಂದು ನೊಣ ಆಗಿದ್ದೀಯೆ ಅಂತ. ನೀನು ಎಲ್ಲಿ ಕುಳಿತು ಪಾನಕ ಕುಡಿಯುವೆ ಹೇಳು ನೋಡೋಣ?' ನರೇಂದ್ರ, 'ಬಟ್ಟಲ ಅಂಚಿನಲ್ಲಿ ಕುಳಿತು ಮುಖವನ್ನು ಮುಂದಕ್ಕೆ ಚಾಚಿ ಕುಡಿಯುತ್ತೇನೆ' ಅಂತ ಹೇಳಿದ. ನಾನು, 'ಹಾಗೇಕೆ ಮಾಡಬೇಕು? ಅದರ ಮಧ್ಯಕ್ಕೆ ಮುಳುಗಿ ಕುಡಿದರೆ ತಪ್ಪೇನು?' ಅಂತ ಕೇಳಿದೆ. ಆತ ಹೇಳಿದ, 'ಆಗ ಆ ಪಾನಕದಲ್ಲಿ ಸಿಕ್ಕಿಕೊಂಡುಬಿಟ್ಟು ಸತ್ತುಹೋಗಿಬಿಡುತ್ತೇನೆ' ಎಂದು ಹೇಳಿದ. ಅದಕ್ಕೆ ನಾನು ಹೇಳಿದೆ. 'ಮಗು, ಸಚ್ಚಿದಾನಂದ ಪಾನಕ ಅಂಥದೇನಲ್ಲ , ಅದು ಅಮೃತದ ಪಾನಕ. ಅದರಲ್ಲಿ ಮುಳುಗಿದರೆ ಮನುಷ್ಯ ಸಾಯುವುದಿಲ್ಲ , ಅಮರನಾಗಿಬಿಡುತ್ತಾನೆ.

ಶ್ರೀರಾಮಕೃಷ್ಣ ವಚನವೇದದಿಂದ



ಧರ್ಮ - ಕನ್ನಡಿಗರ ಮನೋಧರ್ಮ

ಪ್ರೊ. ಕೆ.ಬಿ. ಪ್ರಭುಪ್ರಸಾದ್

ಐತಿಹಾಸಿಕವಾಗಿ ತಿಳಿದುಬರುವಂತೆ ಕನ್ನಡನಾಡಿನ ಜನತೆ ಧಾರ್ಮಿಕರು, ಸುಸಂಸ್ಕೃತರು. ಸುದೀರ್ಘ ಕಾಲದಿಂದ ಬೆಳೆದು ಬಂದಿರುವ ಈ ಪರಂಪರೆ ಇಂದಿಗೂ ನಮ್ಮ ಜನರ ಜೀವನದಲ್ಲಿ ಹಾಸುಹೊಕ್ಕಾಗಿದೆ. ಈ ಧಾರ್ಮಿಕ ಪರಂಪರೆಯ ವೈಶಿಷ್ಟ್ಯವನ್ನು ಕುರಿತು ಬರೆದಿರುವ ಲೇಖಕರು ನಿವೃತ್ತ ಆಂಗ್ಲ ಪ್ರಾಧ್ಯಾಪಕರು. ಉತ್ತಮ ವಿದ್ವಾಂಸರೂ, ಲೇಖಕರೂ, ಗೀತರಚನಕಾರರೂ ಆಗಿರುವ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.

ಸೂರ್ಯಾಸ್ತದ ವರ್ಣವೈಭವವೆಲ್ಲ ಕರಗಿ ನೀಲಮಿಶ್ರಿತ ಬೆಳಗಲ್ಲಿ ಲೀನವಾಗುತ್ತಿರುವ ಸಮಯ. ಸಂಧ್ಯೆಯ ಪ್ರಶಾಂತ ವಾತಾವರಣದಲ್ಲಿ ಶ್ರೀರಾಮಕೃಷ್ಣಾಶ್ರಮದ ಆವರಣದಿಂದ ಬಾಲಕರ ಸಾಮೂಹಿಕ ಪ್ರಾರ್ಥನೆ ಕೇಳಿಬರುತ್ತಿತ್ತು:

ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ ॥
ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ
ಸೋಽಯಂ ವೋ ವಿದಧಾತು ವಾಂಛಿತಫಲಂ ತ್ರೈಲೋಕ್ಯನಾಥೋ ಹರಿಃ ॥

ಸರ್ವಧರ್ಮ ಸಮನ್ವಯಾಚಾರ್ಯ ಶ್ರೀರಾಮಕೃಷ್ಣ ಪರಮಹಂಸರ ಮಂದಿರದಲ್ಲಿ ಹಾಡಲು ತಕ್ಕ ಪ್ರಾರ್ಥನೆ ಇದು. ಒಂದು ವಿಶೇಷವೆಂದರೆ ಇದರಲ್ಲಿ ಬರುವ ಸರ್ವಧರ್ಮಸಮನ್ವಯದ ಕಲ್ಪನೆ ಕನ್ನಡಿಗರದು. ಹೊಯ್ಸಳ ರಾಜ ವಿಷ್ಣುವರ್ಧನನ ಕಾಲದ ಬೇಲೂರಿನ ಶಾಸನವೊಂದರಲ್ಲಿ ಕೆತ್ತಿದ ಶ್ಲೋಕ ಇದು. ಇದರ ಕವಿ ವೈಷ್ಣವನಾದುದರಿಂದ ಆತ ತ್ರೈಲೋಕ್ಯನಾಥನನ್ನು ಹರಿ ಎಂದು ಕರೆದಿದ್ದಾನೆ. ಶೈವರಿಗೆ ಶಿವ. ಅವರವರಿಗೆ ಅವರವರ ಇಷ್ಟದೈವ. ಈ ಪ್ರಾರ್ಥನೆ ಹೊಮ್ಮಿದ ಹೃದಯದಲ್ಲಿ ವೈಷ್ಣವ ಧರ್ಮನಿಷ್ಠೆ ಇರುವುದರ ಜೊತೆಗೆ ಇತರ ಧರ್ಮಗಳ ಬಗೆಗೂ ಮನ್ನಣೆ ಇದೆ. 'ದೇವನೊಬ್ಬ ನಾಮ ಹಲವು' ಎಂಬ ತಿಳಿವಳಿಕೆ ಇರುವವರಲ್ಲಿ ಈ ಬಗೆಯ ವೈಶಾಲ್ಯ ಸಹಜ.

೧೨ನೇ ಶತಕದ ಕೈದಾಳ ಶಾಸನದಲ್ಲಿ ಮೂರುಗರೆ ನಾಡಿನ ದೊರೆ ಗೂಳಿ ಬಾಚಿದೇವ, ಜೈನ-ಬೌದ್ಧ-ಶೈವ-ವೈಷ್ಣವ-ನಾಲ್ಕು ಧರ್ಮದವರಿಗೂ ಅವರವರ ದೇವಾಲಯಗಳನ್ನು ಕಟ್ಟಿಸಿ, ದಾನವಿತ್ತು, ಚತುಸ್ಸಮಯ ಧರ್ಮೋದ್ಧಾರ ಧೌರೇಯನೆಂದು ಗೌರವಿಸಲ್ಪಟ್ಟಿದ್ದಾನೆ.

ಕೆಲವು ವರ್ಷಗಳ ಹಿಂದೆ ಒಂದು ಪ್ರಸಂಗ ನಡೆಯಿತು. ಅಂಗಡಿಯಿಂದ ೨೫ ಕೆ.ಜಿ. ಅಕ್ಕಿಯನ್ನು ಕೊಂಡು ಮನೆಗೆ ಒಯ್ಯಲು ಕೂಲಿಯವನೊಬ್ಬನನ್ನು ಕರೆದು, ''ಏನು ಕೊಡಬೇಕಪ್ಪಾ ಸರಸ್ವತಿಪುರದ ಮನೆಗೆ ಹೊತ್ತು ಸಾಗಿಸಲು?'' ಎಂದು ಕೇಳಿದೆ. ಅವನಾಗಲೆ ಮೂಟೆ ಹೊತ್ತಾಗಿತ್ತು. ''ಮೊದಲೆ ಹೇಳಿ

ಬಿಡಪ್ಪಾ. ಆಮೇಲೆ ಜಗಳ ಬೇಡ'' ಎಂದೆ. ಅವ ಚಕಿತನಾಗಿ, ''ಜಗಳಾ! ಜಗಳ ಯಾರಾಡ್ತಾರೆ ಬುದ್ದೀ — ಬನ್ನಿ ಬನ್ನಿ — ಮಾಮೂಲು ಅದೇನು ಕೊಡ್ತೀರೊ ಕೊಡಿ,'' ಅಂತ ಹೇಳುತ್ತಾ ನಡೆದೇಬಿಟ್ಟ. ಅವನ ಮೈಮೇಲೆ ಒಂದು ಕೊಳಕು ಚಡ್ಡಿ ಬಿಟ್ಟರೆ ಒಂದು ತುಂಡು ಬಟ್ಟೆಯೂ ಇರಲಿಲ್ಲ. ಮುಖ, ಮೈ, ತಲೆ ಬೆವರು, ಧೂಳುಗಳಿಂದ ತುಂಬಿತ್ತು. ಆದರೆ ಅವನ ಉತ್ಸಾಹ-ಪ್ರಸನ್ನತೆಗಳನ್ನು ನೋಡಿ ಸಂತೋಷವಾಯಿತು. ದಾರಿಯಲ್ಲಿ ನಡೆಯುತ್ತಾ ನಮ್ಮ ಮಾತುಕತೆ ಶುರುವಾಯಿತು. ''ದಿನಾ ಎಷ್ಟು ಬರುತ್ತಯ್ಯಾ ಕೂಲಿ?'' ಎಂದು ಕೇಳಿದೆ. ಆತ ಇಷ್ಟು ಎಂದು ಹೇಳದೆ, ''ಬರ್ತದೆ ಬುದ್ದೀ ನಮ್ಮ ಜೀವ್ನಕ್ಕೆ ಸಾಕಾಗೋಷ್ಟು. ಅಲ್ದೆ ಎಷ್ಟ್ ಬಂದ್ರೆ ತಾನೆ ತೃಪ್ತಿ ಇರ್‍ತಾದಾ,'' ಅಂದ. ಒಳ್ಳೆ ವೇದಾಂತೀನೆ ಸಿಕ್ಕನಲ್ಲ ಅಂತ ಮನಸ್ಸಿನಲ್ಲಿ ಅಂದುಕೊಂಡು ಅವನ ಸಂಸಾರದ ಬಗ್ಗೆ ಕೇಳಿದೆ. ಹಳ್ಳಿಯಲ್ಲಿರೊ ಹೆಂಡತಿ-ಮಕ್ಕಳಿಗೆ ವಾರ ವಾರವೂ ಒಂದಷ್ಟು ಹಣ ಕಳಿಸುತ್ತ ತಾನು ಪೇಟೆ ಅಂಗಡಿ ಜಗುಲಿಯ ಮೇಲೆ ಮಲಗೋದು, ಬೀದಿ ಬದಿಯಲ್ಲಿ ಮಾಡೊ ಇಡ್ಲಿ ಮುಂತಾದ್ದು ತಿಂದು ಹೇಗೋ ಇರೋದು. ಒಟ್ಟಿನಲ್ಲಿ ನೆಮ್ಮದಿಯಿಂದ ಇದ್ದಾನೆ ಎಂದು ಅರ್ಥವಾಯಿತು. ಆದರೆ ಅದು ಹಣದ ಗಳಿಕೆಯಿಂದ ಬಂದ ನೆಮ್ಮದಿಯಲ್ಲ. ಅವನ ಮನೋಧರ್ಮದಿಂದ ಉಂಟಾದುದು ಎಂದು, ಅವನು ಕೊಟ್ಟ ಒಂದು ಆಶ್ಚರ್ಯಕರವಾದ ಸಾದೃಶ್ಯದಿಂದ ತಿಳಿಯಿತು ಅವನು ಹೇಳಿದ: ''ಎಂಗೋ ನಡೀತದೆ ಬುದ್ದೀ. ಶಿವ ನಡಿಸ್ತಾನೆ. ಈ ಜೀವ್ನಾ ಏನ್ ಸಾಸ್ವತವಾ. ಇಂಗೇ ದುಡಿತಿರೋದು. ಶಿವ ಕರ್‍ದಾ ಅಂದ್ರೆ ಈ ಅಕ್ಕಿಮೂಟೆ ಬಿಸಾಕ್ದಂಗೆ ಬಿಸಾಕಿ ನಡೀತಿರಾದು, ಅಲ್ವಾ ಬುದ್ದೀ? ನಾನು ಏನೂ ತಿಳೀದ ಮುಕ್ಕ! ನಾ ಒಂದು ಮಾತ ಏಳಿದ್ರೆ ಕ್ವಾಪಾ ಮಾಡ್ಕಾಬ್ಯಾಡಿ. ಸಮುದ್ರಾದಾಗೆಷ್ಟು ನೀರು ಇದ್ರೆ ನಮಗೇನು, ನನ್ನೊಡೆಯಾ. ನೀರ್‍ಗೆ ಅಂತ ಓದಿ ಅನ್ನಿ. ನಾ ಎಷ್ಟ ನೀರ ತಂದೇನು? ನನ್ ಬಗಸೆ ಇರಾಷ್ಟೆ ಅಲ್ಲವ್ರಾ. ಇಂಗಿರೋವಾಗ ಸುಮ್ನೆ ಒದ್ದಾಡ್ತೀವಿ. ಏನಾ ಬುದ್ದೀ ನಾ ಏಳಾದು ತೆಪ್ಪಾ?'' ಕೇಳುತಾ ನಾನು ನಿಬ್ಬೆರಗಾದೆ. ಮನೆಯೊಳಗೆ ಮೂಟೆ ತಂದಿಟ್ಟ ಅವನಿಗೆ ನಾನೇ ಹೇಳಿದುದಕ್ಕಿಂತಾ ಒಂದು ರೂಪಾಯಿ ಹೆಚ್ಚು ಕೊಟ್ಟೆ. ಕಡಿಮೆ ಆಯಿತು-ಹೆಚ್ಚಾಯಿತು-ಎಂಬ ಒಂದೂ ಭಾವವಿಲ್ಲದೆ ಆತ ನಗುತ್ತಾ ಕೂಲಿ ಇಸಗೊಂಡು, ''ಬರ್ತೀನಿ ಬುದ್ದೀ'' ಎನ್ನುತ್ತಾ ಹೊರಟು ಹೋದ. ಹಿಗ್ಗಲಿಲ್ಲ, ಕುಗ್ಗಲಿಲ್ಲ. ಕಡುಬಡವ, ಅನಿಶ್ಚಿತವಾಗಿ ಬರುವ ದಿನಗೂಲಿಯಿಂದ ಜೀವನ ನಡೆಸುವವ, ಅವಿದ್ಯಾವಂತ, ಅನಕ್ಷರಸ್ಥ. ತೀರಾ ತೀರಾ ಸಾಮಾನ್ಯ ಮನುಷ್ಯನ ಮಾತು, ಮನಗಳಲ್ಲಿ ಅದೆಂಥಾ ಜೀವನ ತತ್ತ್ವ! ಈ ತಿಳಿವಳಿಕೆ ಹೇಗೆ ಬಂತು! ನಮ್ಮ ಜನರ ಮನದಾಳದಲ್ಲಿ ಕಾಣುವ ಸಂಸ್ಕೃತಿಯ ಈ ಬೇರು ಪರಂಪರಾಗತವಾಗಿದೆ. ಬಡ ಕೂಲಿಕಾರ. ಬಡವರು ಸದಾ ಬಡವರಾಗೇ ಇರಬೇಕೆಂದು ಅರ್ಥವಲ್ಲ. ಅವರು ವಿದ್ಯಾವಂತರಾಗಿ, ಸಾಕಷ್ಟು ಸ್ಥಿತಿವಂತರಾಗಿ, ಉತ್ತಮ ಬದುಕನ್ನು ಕಾಣಬೇಕು, ನಿಜ. ಆದರೆ ಹೇಗೆ ಇದ್ದರೂ ಇಂಥಾ ಮನೋಧರ್ಮ ಇರುವುದು ದೊಡ್ಡದು.

'ಕನ್ನಡ ಶಾಸನ ಸಾಹಿತ್ಯ ಸಂಚಯ' ಎಂಬ ಪುಸ್ತಕದ ಪುಟಗಳನ್ನು ತಿರುವಿ ಹಾಕುತ್ತಿರುವಾಗ ಒಂದು ಶಾಸನಪದ್ಯ ನಮ್ಮ ಗಮನವನ್ನು ಸೆಳೆಯಿತು. ಕನ್ನಡಿಗರ ಮನೋಧರ್ಮವನ್ನು ಅದು ಹಿಡಿದಿಟ್ಟಂತೆ ಕಂಡಿತು. 'ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿಸು, ಸೆರೆಯೊಳ್ ಸಿಲುಕಿದ (ನಿರಪರಾಧಿಗಳೂ ನಿಸ್ಸಹಾಯಕರೂ ಆದ) ಅನಾಥರಂ ಬಿಡಿಸು, ಮಿತ್ರರಿಗೆ ಇಂಬುಕೆಯ್, ನಂಬಿದರ್ಗೆ ಎರೆವೆಟ್ಟಾಗಿರು, ಶಿಷ್ಟರಂ ಪೊರೆ', ಎಂದು ವಿಜಯನಗರದ ಪ್ರೌಢ ಪ್ರತಾಪ ದೇವರಾಯನ ಮಂತ್ರಿ ಲಕ್ಷ್ಮೀಧರ ಕೂಸಾಗಿದ್ದಾಗ ಆತನ ತಾಯಿ ನಿತ್ಯ ಹಾಲು ಕುಡಿಸುವಾಗ ಒಳಲೆಯಿಂದ ಬಾಯೊಳಗೆ ಹಾಕುತ್ತಿದ್ದ ಒಂದೊಂದು ಗುಟುಕಿಗೂ, ಹೀಗೆ ಒಂದೊಂದು ಮಾತನ್ನು ಹೇಳುತ್ತ ಕೂಸಿನ ಕಿವಿಗೆ ಹಾಕುತ್ತಿದ್ದಳಂತೆ. ಇದು ಆ ಪದ್ಯ. ಮೈ ಪುಷ್ಟಿಗೆ ಹಾಲು, ಹೃದಯದ ಪುಷ್ಟಿಗೆ ಇಂಥ ಹಿತವಚನ! ತಾಯ ಇಂಥ ಹಾರೈಕೆಯಂತೆ ಕನ್ನಡದ ಮಕ್ಕಳು ಧರ್ಮಬುದ್ಧಿಯನ್ನು ಮೈಗೂಡಿಸಿಕೊಂಡು ಬೆಳೆಯುತ್ತಿದ್ದುವು ಎನ್ನುವುದಕ್ಕೆ ಇದೊಂದು ನಿದರ್ಶನ. ಕವಿಯ ಆಶಯ — ಮುಂದೆ ಸಮಸ್ತ ನಾಡಿನ ಅಮಾತ್ಯನಾಗುವವನಿಗೆ ಶೈಶವದಿಂದಲೇ ಇಂಥ ತರಬೇತಿ ಆವಶ್ಯಕ — ಎನ್ನುವುದು. ಹೀಗೆ ಶಿಶುವಾಗಿರುವಾಗಲೆ ಹಾಲಿನೊಡನೆ ರಕ್ತಗತವಾದ ತಾಯಿಯ ಸಂದೇಶದಿಂದ ಪುಷ್ಟಿಗೊಂಡು ಬೆಳೆದ ಕನ್ನಡನಾಡಿನ ಮಕ್ಕಳು ಕನ್ನಡ ಕುಲಕೆ ರನ್ನದ ಕನ್ನಡಿಯೆನೆ ವಿಶ್ವವಿದಿತ ವೃತ್ತಶ್ರೀ ಸಂಪನ್ನನಾಗಿ ಒಳಗೂ ಹೊರಗೂ ನಿರ್ಮಲನಾಗಿ ಬಾಳಿದ ಮಂತ್ರಿ ಲಕ್ಷ್ಮೀಧರನಂತೆ ಧರ್ಮವಂತರಾಗಿ ಬಾಳಿದ ನಿದರ್ಶನಗಳು ಹಲವಾರು.

ಈ ಮೂರೂ ಚಿತ್ರಗಳಲ್ಲಿ ಕನ್ನಡಿಗರ ಮನೋಧರ್ಮ ಸೊಗಸಾಗಿ ಅಭಿವ್ಯಕ್ತವಾಗಿದೆ. ದೈವಭಕ್ತಿ, ಧರ್ಮಶ್ರದ್ಧೆ ಮಾತ್ರವಲ್ಲದೆ, ಸರ್ವಧರ್ಮಸಮನ್ವಯ ದೃಷ್ಟಿ ಮೊದಲ ಶ್ಲೋಕ ಘೋಷದ ಚಿತ್ರದಲ್ಲಿ ಕಂಡರೆ, ತೃಪ್ತಿ-ಜೀವನೋಲ್ಲಾಸ ಇರುವ ಧರ್ಮಯುಕ್ತವಾದ ಮನೋಭಾವ ಎರಡನೆ ಚಿತ್ರದಲ್ಲಿ, ಎಲ್ಲ ಬಗೆಯಿಂದಲೂ ಪರೋಪಕಾರಕ್ಕಾಗಿಯೆ ಬಾಳನ್ನು ಸಂಪೂರ್ಣವಾಗಿ ಸವೆಸಬೇಕೆಂಬ ಸೇವಾಪೇಕ್ಷೆ ಮೂರನೆ ಚಿತ್ರದಲ್ಲೂ ಕಾಣುತ್ತೇವೆ. ಭಕ್ತಿಭಾವ, ಜೀವನಕಲೆ, ಸೇವಾಕಾಂಕ್ಷೆ – ಈ ಮೂರರಲ್ಲೂ ಕನ್ನಡಿಗರು ರಿಕ್ತರಲ್ಲ. ಇದು ಆರೋಗ್ಯಕರವಾದ ಮನೋಧರ್ಮ.

ಎಷ್ಟೇ ಆಗಲಿ ಪುಣ್ಯವತಿಯಾದ ಭಾರತ ಜನನಿಯ ತನುಜಾತೆಯಲ್ಲವೆ ಕರ್ನಾಟಕ ಮಾತೆ! ಭಾರತೀಯ ಹಲವಾರು ಮಕ್ಕಳಲ್ಲಿ ಹೆಚ್ಚಾಗಿ ತಾಯಿಯನ್ನೇ ಹೋಲುವ ಮಗಳೆಂದರೆ ಕನ್ನಡಾಂಬೆಯೆ, ಉಪನಿಷತ್ ದ್ರಷ್ಟಾರರು, ಶ್ರೀರಾಮ, ಶ್ರೀಕೃಷ್ಣ, ಶಂಕರ, ರಾಮಾನುಜ, ನಾನಕ, ಕಬೀರ, ಶ್ರೀಕೃಷ್ಣಚೈತನ್ಯ, ಶ್ರೀರಾಮಕೃಷ್ಣ ಪರಮಹಂಸ, ವಿವೇಕಾನಂದ, ಶ್ರೀ ಅರವಿಂದ, ಶ್ರೀರಮಣಮಹರ್ಷಿ — ಹೀಗೆ ಎಲ್ಲ ಹಿರಿಯ ಚೇತನಗಳ ದಿವ್ಯ ಪ್ರಭಾವ ಭಾರತದ ಯಾವ ಭಾಗದಿಂದಲಾದರೂ ಬರಲಿ, ಕನ್ನಡಿಗರು ತೆರೆದ

ಹೃದಯದಿಂದ ಅದನ್ನು ಬರಮಾಡಿಕೊಳ್ಳುವುದು ಇಲ್ಲಿಯ ನೆಲದ ಗುಣ. ಅತ್ಯಂತ ಪ್ರಾಚೀನ ಕಾಲದಿಂದಲೂ ಇದು ದಿವ್ಯ ದಾರ್ಶನಿಕರ ತಪೋಭೂಮಿ. ಆಧ್ಯಾತ್ಮಿಕ ಸಾಧಕರ ಸಾಧನಾರಂಗ, ಅಲ್ಲದೆ ಮಧ್ವಾಚಾರ್ಯ, ಬಸವೇಶ್ವರ, ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮೇಶ್ವರ, ವ್ಯಾಸರಾಯರು, ಪುರಂದರದಾಸ, ಕನಕದಾಸರು, ವಿದ್ಯಾರಣ್ಯರು ಹೀಗೆ ಹಲವಾರು ಯತಿವರೇಣ್ಯರು, ಶರಣರು, ಸಂತರು ಕಾಲಕಾಲಕ್ಕೆ ಇಲ್ಲಿಯೆ, ಈ ನೆಲದಲ್ಲೇ ಜನ್ಮತಾಳಿ ಧರ್ಮದ ಧ್ವಜವನ್ನು ಎತ್ತಿ ಮೆರೆದರು.

ಭಾರತದ ಧಾರ್ಮಿಕ ಪರಂಪರೆಯಲ್ಲಿ ಕನ್ನಡನಾಡಿನ ಕೊಡುಗೆ ವಿಶಿಷ್ಟವಾದುದು. ಎಂಟುನೂರು ವರ್ಷಗಳಷ್ಟು ಹಿಂದೆಯೇ ಭಕ್ತಿಭಂಡಾರಿ ಬಸವಣ್ಣನವರು ಉಂಟುಮಾಡಿದ ಧರ್ಮಜಾಗೃತಿ, ವೈಚಾರಿಕ ಕ್ರಾಂತಿ, ಸರ್ವಸಮತಾ ತತ್ತ್ವದ ಮೇಲೆ ರಚಿಸಿದ ಸಮಾಜ, ಮಹತ್ತರವಾದ ಕೊಡುಗೆ. ಕರ್ನಾಟಕದ ಶರಣರ ಮತ್ತು ದಾಸರ ಭಕ್ತಿ ಪರಂಪರೆ ಸ್ಮರಣೀಯವಾದ ಕೊಡುಗೆ.

ಧರ್ಮ ಎಂಬುದು ವಿಶಾಲವಾದ ಅರ್ಥವ್ಯಾಪ್ತಿಯುಳ್ಳ ಪದ, ಎಲ್ಲಕ್ಕೂ ಆಧಾರವಾದುದು. ಎಲ್ಲರನ್ನೂ ಒಗ್ಗೂಡಿಸುವಂತಹದು. ಜಾತಿಯಂತೆ ಒಡೆಯುವ, ವಿಭಜಿಸುವ ವ್ಯವಸ್ಥೆ ಅಲ್ಲ. ಸೃಷ್ಟಿಯ ಸಕಲ ವ್ಯಾಪಾರಗಳನ್ನೂ ನಿಯಂತ್ರಿಸುವ 'ಋತ'. ಧರ್ಮ ಎಂದರೆ ಜಾತಿ ಎಂದು ತಿಳಿಯುವುದು ತಪ್ಪು. ಧರ್ಮ ವಿಶಾಲವಾದ ನೆಲ ಇದ್ದ ಹಾಗೆ. ಜಾತಿ–ಮತ ಅದರ ಮೇಲೆ ಅವರವರ ಅಗತ್ಯಕ್ಕೆ–ಅಭಿರುಚಿಗೆ ತಕ್ಕಂತೆ ಕಟ್ಟಿದ ಮನೆಗಳು. ಮನೆಗಳ ಒಳಗಿನ ಮತ್ತು ತಳಪಾಯದ ನೆಲ ಧರ್ಮವೆ. ಈ ಧರ್ಮವೇ ಕನ್ನಡಿಗರ ಸಂಸ್ಕೃತಿಯ ಜೀವಾಳ. ಒಂದು ತತ್ತ್ವವಾಗಿ ಅಲ್ಲ. ವ್ಯಕ್ತಿ ಹಾಗೂ ಸಮಾಜದ ನಿತ್ಯದ ಬದುಕಿನಲ್ಲಿ ಹಾಸುಹೊಕ್ಕಾದ ಮಾನವೀಯ ಮನೋಧರ್ಮವಾಗಿ. ಜೀವನದ ಎಲ್ಲ ಕ್ಷೇತ್ರಗಳಲ್ಲೂ ಧರ್ಮವನ್ನಳವಡಿಸಿಕೊಂಡು ಕನ್ನಡಿಗರು ಬೆಳೆದರು. ಸಾಹಿತ್ಯ, ಶಿಲ್ಪ, ಸಂಗೀತ, ನೃತ್ಯ ಎಲ್ಲಕ್ಕೂ ಧರ್ಮವೇ ಸ್ಫೂರ್ತಿ, ಪಥ ಮತ್ತು ಗುರಿ.

ಕನ್ನಡಿಗರದು ಸಮನ್ವಯ ಮನೋಧರ್ಮ. ಅತಿ ಪ್ರಾಚೀನವಾದ ನಾಗ, ಅನಂತರ ಕಾಲಕ್ರಮದಲ್ಲಿ ಬಂದ ಕಾಪಾಲಿಕ, ಶಾಕ್ತೇಯ, ಶೈವ, ವೈಷ್ಣವ, ಜೈನ, ಬೌದ್ಧ, ಇಸ್ಲಾಂ ಮತ್ತು ಕ್ರೈಸ್ತ ಎಲ್ಲ ಧರ್ಮಗಳಿಗೂ ಆಶ್ರಯವನ್ನು ಕೊಟ್ಟಿತು. ಆದಿ ಶಂಕರರನ್ನು ಆಕರ್ಷಿಸಿತು. ಶ್ರೀರಾಮಾನುಜರಿಗೆ ಆಶ್ರಯವಿತ್ತಿತು. ಬಸವಾದಿ ಶರಣರಿಗೆ, ಮಧ್ವಾಚಾರ್ಯ, ವ್ಯಾಸರಾಯರಾದಿಯಾಗಿ ಹರಿಭಕ್ತ ಶ್ರೇಷ್ಠರಿಗೆ, ದಾಸರಿಗೆ ಜನ್ಮವಿತ್ತು ಪುಣ್ಯಭೂಮಿ ಎನಿಸಿತು. ಮತ–ಧರ್ಮ ಬೇರೆ ಬೇರೆ ಆಗಬಹುದು. ಆರಾಧಿಸುವ ದೈವ, ಧಾರ್ಮಿಕ ಸಂಪ್ರದಾಯಗಳು ಬೇರೆ ಬೇರೆ ಆಗಬಹುದು. ಆದರೆ ಅವುಗಳೆಲ್ಲ ಒಂದೆ ಸತ್ಯದ ಗುರಿಗೆ ಕೊಂಡೊಯ್ಯುವ ಬೇರೆ ಬೇರೆ ದಾರಿಗಳು ಅಷ್ಟೆ. ಇಂತಹ ಸಮಭಾವ ಕನ್ನಡಿಗರಲ್ಲಿ ಪರಂಪರಾಗತವಾಗಿ ಬಂದುದು.



ಅವರವರ ದರುಶನಕೆ ಅವರವರ ದೇಶದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ ।
ಅವರವರ ಭಾವಕ್ಕೆ ಅವರವರ ಅರ್ಚನೆಗೆ
ಅವರವರಿಗೆಲ್ಲ ದೇವ ನೀನೊಬ್ಬನೆ ॥

ಭಕ್ತ ಕವಿ, ಶರಣ, ಮುಪ್ಪಿನ ಷಡಕ್ಷರಿಯ ಈ ಲಲಿತ–ಸುಂದರವಾದ ಹಾಡು, ಅದರ ಭಾವನೆ ಕನ್ನಡಗರ ಮನಕ್ಕೆ ಹಿಡಿದ ಕನ್ನಡಿ.

ಸರ್ವಧರ್ಮ ಸಮನ್ವಯ ಮಾತ್ರವಲ್ಲ, ಇಹ–ಪರ, ತ್ಯಾಗ–ಭೋಗಗಳ ಸಮನ್ವಯ ಬದುಕಿನಲ್ಲಿ ಸಹಜವಾಗಿರಬೇಕು ಎಂಬುದು ಕನ್ನಡಿಗರ ಆಶಯ. ಪಂಪ, ರತ್ನಾಕರರ ಕಾವ್ಯಗಳಲ್ಲೂ, ಶರಣರ ವಚನಗಳಲ್ಲೂ ಇದು ಅಭಿವ್ಯಕ್ತವಾಗಿದೆ. ತ್ಯಾಗವಿಲ್ಲದ– ಸಂಯಮವಿಲ್ಲದ ಭೋಗ ಅಲ್ಪವಾದುದು. ಅಲ್ಪವಾದ ಸುಖಕ್ಕಿಂತ ಮಹತ್ತಾದ ಸುಖವನ್ನು ಅಪೇಕ್ಷಿಸುವವರಾದರೂ ಲೌಕಿಕದ ಬಗ್ಗೆ ಹುಸಿ ವೈರಾಗ್ಯದ ತಿರಸ್ಕಾರವಿಲ್ಲ.

'ಬೆಳಗುವೆನಿಲ್ಲಿ ಜಿನಾಗಮಮಂ', ಎಂಬ ಆತ್ಮವಿಶ್ವಾಸ. ಪಾರಮಾರ್ಥಿಕದಂತೆ ಲೌಕಿಕವೂ ಬೆಳಗಬೇಕೆಂಬ ಧ್ವನಿ. ಎರಡರಲ್ಲೂ ಬೆಳಗುವ ದೀಪ ಧರ್ಮವಾದುದರಿಂದ ಇದು ಸಾಧ್ಯ. ಈ ಮನೋಧರ್ಮದ ಸಾಧಕನಿಗೆ 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ.' 'ಇಲ್ಲಿಯೂ ಸಲ್ಲುವ, ಅಲ್ಲಿಯೂ ಸಲ್ಲುವ' ದಿಟದ ನಾಣ್ಯ ಆಗುವುದೇ ಜೀವನದ ಗುರಿ. ಅಲ್ಲಿಯೂ ಸಲ್ಲುವಂತೆ ಇಲ್ಲಿ ಬಾಳಬೇಕು.

ಹೀಗೆ ಬಾಳಬೇಕಾದರೆ 'ದಯವೇ ಧರ್ಮದ ಮೂಲ' ಆಗಬೇಕು. ಹುಟ್ಟಿನಿಂದ ಯಾರೂ ಉತ್ತಮ ಕುಲದವರಾಗುವುದಿಲ್ಲ. ದೇವರಲ್ಲಿ ಅಚಲವಾದ ಭಕ್ತಿ, ಸಹಜೀವಿಗಳಲ್ಲಿ ಪ್ರೀತಿ, ಅನುಕಂಪ, ತ್ರಿಕರಣಶುದ್ಧವಾದ ಶೀಲ ಸಂಪತ್ತುಗಳಿದ್ದು, ಸಕಲ ಜೀವಾತ್ಮರಿಗೆ ಲೇಸನೇ ಬಯಸುವವರೇ ಕುಲಜರು. ಧರ್ಮ ಚರ್ಚಾ ವಿನೋದಕ್ಕೂ, ಬೌದ್ಧಿಕ ರಂಜನೆಗೂ ಇರುವಂತಹ ಬರಿಯ ತತ್ತ್ವ ಸಿದ್ಧಾಂತವಲ್ಲ. ಬಾಳಿನಲ್ಲಿ ಆಚರಿಸುವ ಜೀವಂತ ಮೌಲ್ಯ.

ಧಾರ್ಮಿಕ ಶ್ರದ್ಧೆಯನ್ನು ಪೋಷಿಸಿ, ಉಳಿಸಿಕೊಂಡು ಬರುವುದರಲ್ಲಿ ದೇವಾಲಯಗಳು, ಮಠಗಳು ಪ್ರಮುಖ ಪಾತ್ರವನ್ನು

ವಹಿಸಿದವು. ಧರ್ಮ ಹಾಗೂ ಸಂಸ್ಕೃತಿಯ ಸ್ಫೂರ್ತಿ ಕೇಂದ್ರಗಳಾಗಿದ್ದ ಕನ್ನಡ ದೇವಾಲಯಗಳ ಪರಂಪರೆ ಬಹು ಪ್ರಾಚೀನವಾದುದು. ಅದ್ವಿತೀಯವಾದ ಚೆಲುವುಳ್ಳ ಮೂರ್ತಿ ಶಿಲ್ಪ, ಭವ್ಯವಾದ ಸೌಧ, ಶಿಲ್ಪಗಳಿಂದ ಭಕ್ತರ ಚಿತ್ತವನ್ನು ದಿವ್ಯತೆಯ ಕಡೆ ಆಕರ್ಷಿಸುತ್ತಿದ್ದ ಹಲವಾರು ದೇಗುಲಗಳನ್ನು ನಿರ್ಮಾಣ ಮಾಡುವುದೇ ನಾಡರಸರ ಧನಸಂಪತ್ತನ್ನು ಸಾರ್ಥಕಗೊಳಿಸುವ ಧರ್ಮಕಾರ್ಯವೆನಿಸಿತ್ತು. ಭಾವುಕ ಜನರ ಭಕ್ತಿವೃದ್ಧಿಯನ್ನು ಈ ದೇಗುಲಗಳೂ, ಧರ್ಮಸಾಹಿತ್ಯ ಪ್ರಸಾರವನ್ನು ಮಠಗಳೂ ಚೆನ್ನಾಗಿ ಮಾಡಿದವು. ಭಕ್ತಿಗಿಂತ ಆಡಂಬರವೇ ಮುಖ್ಯವಾಗಿ, ಅಜ್ಞಾನ, ಅಂಧಶ್ರದ್ಧೆಯಿದ್ದ ಜನತೆಯನ್ನು ಧರ್ಮದ ಹೆಸರಿನಲ್ಲಿ ಶೋಷಣೆ ಮಾಡುವ ಅರ್ಚಕ ವರ್ಗದವರ ದುರಾಚಾರಗಳಿಗೆ ಕೆಲವು ದೇಗುಲಗಳು ಆಸ್ಪದ ಕೊಟ್ಟದ್ದೂ ಉಂಟು. ಹಾಗೆಯೆ ಮಹಾತ್ಮರ ಕಾಲದಲ್ಲಿ ನಿರ್ಮಲ ಜಲವಾಗಿ ಬೆಳಗುವ ಧರ್ಮ ಉಳಿದ ಕಾಲ



ದಲ್ಲಿ ಅರ್ಥವಿಲ್ಲದ ಆಚರಣೆ, ಮೂಢನಂಬಿಕೆ, ಪುರೋಹಿತ ವರ್ಗದ ಅನಾಚಾರ, ಜಾತೀಯತೆಗಳ ಪಾಚಿಗಟ್ಟಿದ ಕೊಳವಾಗುವುದೂ ನಿಜ. ಬಸವಾದಿ ಶರಣರಂತಹ ವಿಚಾರವಂತರು ಜಾತೀಯತೆಯ ವಿಷಯವನ್ನು ಹೋಗಲಾಡಿಸಿ ವಿಶಾಲವಾದ ವಿಶ್ವಧರ್ಮವನ್ನು ನೆಲೆಗೊಳಿಸಲು ಮಾಡಿದ ಪ್ರಯತ್ನಗಳೆಲ್ಲ ನಂತರದ ಶತಮಾನಗಳಲ್ಲಿ ವಿಫಲವಾಗಿ ಜಾತೀಯತೆಯ ತೊಡಕಿಗೆ ಮತ್ತೆ ಮತ್ತೆ ಬೀಳುವುದೊಂದು, ಮಾನವರ ತಿದ್ದಲಾಗದ ದೌರ್ಬಲ್ಯವೊ ಎಂದೆನಿಸುವ ಹಾಗೆಯೂ ಆಯಿತು.

ಧಾರ್ಮಿಕ ಹಬ್ಬಗಳೂ ರಥೋತ್ಸವಗಳೂ ಜನತೆಯ ದೈವಭಕ್ತಿ, ಧಾರ್ಮಿಕ ಶ್ರದ್ಧೆಗಳ ಅಭಿವ್ಯಕ್ತಿ ಸಾಧನವಾಗಿರುವುದಲ್ಲದೆ ಸಾಮಾಜಿಕ, ಸಾಂಸ್ಕೃತಿಕ ಸಂಪರ್ಕ ಸಾಧನಗಳಾಗಿ ಜನರಲ್ಲಿ ಭಾವೈಕ್ಯತೆಯನ್ನೂ ಜೀವನೋತ್ಸಾಹ, ಉಲ್ಲಾಸಗಳನ್ನೂ ಪೋಷಿಸುತ್ತಾ ಬಂದಿವೆ.

ಕನ್ನಡಿಗರ ಮನೋಧರ್ಮದಲ್ಲಿ ಧಾರ್ಮಿಕ ಮತ್ತು ನೈತಿಕ ಮೌಲ್ಯಗಳೆರಡೂ ಹಾಸು ಹೊಕ್ಕಾಗಿ ಹೆಣೆದುಕೊಂಡಿವೆ. ೧೩ನೆ ಶತಕದ ಒಂದು ಶಾಸನದಲ್ಲಿ ರಟ್ಟ ಲಕ್ಷ್ಮೀದೇವನ ಆಳ್ವಿಕೆಯಲ್ಲಿ 'ಅಪರಾಧಗಳೇ ಇರಲಿಲ್ಲ ಎಂದ ಮೇಲೆ ದಂಡದ ಮಾತೇಕೆ?' ಎಂದು ಬರೆದಿದೆ. ಹಾಲು-ಹೈನು, ಕಾಳು-ಕಡ್ಡಿ ಸಮೃದ್ಧಿಯಿತ್ತು. ತೆರಿಗೆ ಹೆಚ್ಚಾಗಿರಲಿಲ್ಲ ಎಂಬ ಮಾತೂ ಬಂದಿದೆ.

ಕನ್ನಡನಾಡಿನಲ್ಲಿ ಮಾವು-ಮಲ್ಲಿಗೆಗಳು ಸಮೃದ್ಧವಾಗಿದ್ದರೂ ಅವುಗಳನ್ನು ಮಾಗಿದ ಅರೆಯರಳಿದ-ಸಕಾಲದಲ್ಲೆ ರಸಿಕರಾದ ಕನ್ನಡಿಗರು ಉಪಯೋಗಿಸುತ್ತಾರೆ. ಆದ್ದರಿಂದ ಅವು ಕೊಳೆತು ಹಾಳಾಗಿ ಹೋಗುವ ಸಂದರ್ಭವೇ ಬರುವುದಿಲ್ಲ ಎಂದು ಆದಿಕವಿ ಪಂಪ ತನ್ನ ಕಾವ್ಯದಲ್ಲಿ ತನ್ನ ನಾಡಿನವರ ರಸಿಕತೆಯನ್ನು ಕೊಂಡಾಡಿದ್ದಾನೆ. ಸಮೃದ್ಧಿ-ರಸಿಕತೆ ಎರಡೂ ಇದ್ದರೂ ಭೋಗಲೋಲುಪರಾಗದೆ ಕನ್ನಡಿಗರು ಧರ್ಮವಿನೋದಿಗಳೂ ಹಾಗೆಯೆ ದಾನವಿನೋದಿಗಳೂ ಆಗಿದ್ದರೆಂಬುದಕ್ಕೆ ಹಲವಾರು ಶಾಸನಗಳ ಉಲ್ಲೇಖವಿದೆ. ಸತ್ಯ, ತ್ಯಾಗ, ದಾನ ಗುಣವುಳ್ಳವರಾಗಿ, ರಕ್ಷಣೆ ಬೇಡಿ ಬಂದವರನ್ನು ಪ್ರಾಣ ಕೊಟ್ಟಾದರೂ ರಕ್ಷಿಸುವ ಸ್ವಭಾವದವರಾಗಿರುವ ಕನ್ನಡಿಗರದು ಕೊಟ್ಟ ಮಾತಿಗೆ ತಪ್ಪದ ನಿಷ್ಠೆ. ಪರಮತ ಸಹಿಷ್ಣುತೆ, ದಯೆ, ಔದಾರ್ಯ, ಅತಿಥಿ ಸತ್ಕಾರಾಕಾಂಕ್ಷೆ, ಸ್ವಾಮಿನಿಷ್ಠೆ — ಇವೇ ಅವರ ಬದುಕಿನಲ್ಲಿ ಪ್ರಧಾನವಾಗಿ ಹೊಳೆಯುವ ಜೀವನ ಮೌಲ್ಯಗಳು. ಶಾಸನಗಳಲ್ಲೆಲ್ಲ ಕನ್ನಡಿಗರ ಉದಾರವಾದ ದಾನ-ದತ್ತಿಗಳ ಮಾತೇ! ದಾನದಲ್ಲಿ ನಾಲ್ಕು ಬಗೆಯಂತೆ. ೧) ಪ್ರವಾಸಿಗಳಿಗೆ, ವಿದ್ಯಾರ್ಥಿಗಳಿಗೆ, ಮತ್ತು ದೀನರಿಗೆ ಅನ್ನದಾನ, ೨) ಪೀಡಿತರಿಗೆ ಸಂರಕ್ಷಣೆಯ ಅಭಯದಾನ ೩) ರೋಗಿಗಳಿಗೆ ಔಷಧಿ ದಾನ ೪) ಎಲ್ಲರಿಗೂ ವಿದ್ಯಾದಾನ. ಅರಸರು, ಅಧಿಕಾರಿಗಳು, ಮಹಾಜನರು ಈ ದಾನಗಳನ್ನು ಸಂತೋಷದಿಂದ, ಶ್ರದ್ಧೆಯಿಂದ ಮಾಡುತ್ತಿದ್ದರಂತೆ.

ಅರಸರು, ಅಧಿಕಾರಿಗಳು, ಮಹಾಪುರುಷರ ಮಾತಿರಲಿ ಅವಿದ್ಯಾವಂತರು, ಅನಕ್ಷರಸ್ಥರು ಎಂದೆನಿಸಿಕೊಂಡು ಸಾಮಾನ್ಯ ಹಳ್ಳಿಗರಲ್ಲೂ ಸಮನ್ವಯ ಮನೋಧರ್ಮ ಸ್ವಾಭಾವಿಕವಾಗಿರುವುದನ್ನು ಹಲವಾರು ಜಾನಪದ ಗೀತೆಗಳಲ್ಲಿ ಕಾಣಬಹುದು. ಧಾರ್ಮಿಕ ಶ್ರದ್ಧೆ, ದೈವಭಕ್ತಿ, ಅವರ ಜೀವನದ ಉಸಿರು. ಬಾಳಿನ ಎಲ್ಲ ಆಗುಹೋಗುಗಳಿಗೂ ಶಿವನಿಚ್ಛೆಯೇ ಕಾರಣ ಎಂಬ ದೃಢವಾದ ನಂಬುಗೆ. ತಿರುಪತಿ ತಿಮ್ಮಪ್ಪ, ಮಲೆಯ ಮಾದೇಶ್ವರ, ಶ್ರೀಶೈಲದ ಮಲ್ಲಯ್ಯ, ಸವದತ್ತಿ ಎಲ್ಲವ್ವ, ಗಣಪತಿ, ರಾಮದೇವರು, ಹನುಮಪ್ಪ, ಸರಸೋತಿ, ಗೌರಮ್ಮ, ದುರ್ಗಮ್ಮ ಮೊದಲಾಗಿ ಅನೇಕ ದೇವ, ದೇವತೆಗಳ ಉಪಾಸನೆ, ಮೂಢನಂಬಿಕೆಗಳು, ಭೀತಿಯಿಂದಾದ ಭಕ್ತಿ — ಇವೇ ಬಹುಮಟ್ಟಿಗೆ ಜನಪದ ಜೀವನದಲ್ಲಿ ಕಾಣುವುವಾದರೂ, ವಿವಿಧ ಹಂತಗಳಲ್ಲಿರುವ ಆಧ್ಯಾತ್ಮಿಕ ಸಾಧಕರನ್ನು ಗುರುತಿಸಬಹುದು. ಒಟ್ಟಿನಲ್ಲಿ ಅವರ ಮನೋಧರ್ಮದಲ್ಲಿ ಧಾರ್ಮಿಕ ಶ್ರದ್ಧೆ ಆಳವಾಗಿ ಬೇರೂರಿರುವುದು ಸುವ್ಯಕ್ತ.

ಸಂಸಾರ ದಂದುಗ ಹಿಂಗಾದೊ ಶಿವರಾಯ
ಹಿಂಗುದಕೆ ದಾರಿ ಶರಣರದ । ತಿಳಿಕೊಂಡು
ಗೆದಿಬೇಕ ಇದ್ದು ಸಂಸಾರ ॥

ಸಂಸಾರದ ದಂದುಗ ಹಿಂಗದೆಂಬ ಹತಾಶೆಯೇಕೆ? ಶರಣರು ತೋರಿದ ದಾರಿಯಲಿ ನಡೆದು ಸಂಸಾರದಲ್ಲಿ ಇದ್ದೂ ಅದನ್ನು ಗೆಲ್ಲಬೇಕು ಎಂಬ ನಿಲುವು ಧೀರವಾದುದು, ಸರಿಯಾದುದು.

ಮಾದೇವ ನಿನ ಹೊರ್ತು ನಾನ್ಯಾರ್‍ನೂ ನಂಬಿಲ್ಲ
ನಾ ಮಾಡೆನೆಂಬ ಅಳವಿಲ್ಲ । ಮಲ್ಲಯ್ಯ
ನೀ ನಡಸು ನನ್ನ ಸರುವೆಲ್ಲ ॥

ಮಂದಿ ಮಂದಿ ಎಂದು ಮಂದಿ ನಂಬಲಿ ಹೋದೆ
ಮಂದಿ ಬಿಟ್ಟಾರು ನಡುನೀರ । ಮಲ್ಲಯ್ಯ
ತಂದೆ ನನ ಕೈಯ ಬಿಡಬೇಡ ॥

ಈ ಶ್ರದ್ಧೆ, ನಿಷ್ಠೆ ಸಂಪೂರ್ಣ ಶರಣಾಗತಿಯ ನಿಲವು ಇದ್ದರೆ ಸಂಸಾರ ದಂದುಗವೆಲ್ಲವೂ ಹಗುರವಾಗುವುದು.

ನಾರಾಯಣ ನಿನ್ನ ನಾಮದ ಬೀಜವ
ನಾನೆಲ್ಲಿ ಬಿತ್ತಿ ಬೆಳೆಯುವೆ । ನಿನ ನಾಮ
ನಾಲಿಗಿ ಮ್ಯಾಲ ಬೆಳೆದೇನೊ ॥

ಅಕ್ಕವ್ವ ಸರಸೋತಿ ಬಾಗ್ಲಾಗ ಯಾಕ್ನಿಂತಿ
ಕೊಡತೀನಿ ಬಾರ ನಿನಗಿಂಬ । ನನ್ನಮನದ
ಜಗುಲೀ ಮ್ಯಾಗ ಒರಗವ್ವ ॥

ಎನ್ನುವ ಜಾನಪದಕ್ಕೆ ದೇವರು, ಧರ್ಮ ಎಂಬುವು ಮೇಲೆ ಹೇರಿಕೊಂಡ ಉಪಾಧಿ ಅಲ್ಲ , ಅಂಟಿಸಿಕೊಂಡ ಮೂಢನಂಬಿಕೆ ಅಲ್ಲ. ತಮ್ಮ ಮೈ-ಮನಗಳನ್ನು ಆವರಿಸಿಕೊಂಡು ಸ್ವಭಾವದಲ್ಲಿ ಸವಿಯಾಗಿ ಬೆರೆತು, ಮನೋಧರ್ಮದಲ್ಲಿ ಒಂದಾದ ದೃಢ ವಿಶ್ವಾಸ, ಪ್ರಚಲಿತ ಚೇತನ. ದೇವರ ಬಗೆಗೆ ಈ ಸಾಮಾನ್ಯರ ಎದೆ ಮಿಡಿತ ಬಹು ಸುಂದರವಾದದು. ದೇವರು ಎಲ್ಲೋ ಕುಳಿತು ದರ್ಬಾರು ಮಾಡುವ, ಅಧಿಕಾರ ಚಲಾಯಿಸುವ ಸಾಮ್ರಾಟನಲ್ಲ. ಅವನು ನಿತ್ಯಜೀವನದ ನಂಟು. ಆತ್ಮೀಯ ಮಿತ್ರ ಎಂಬಷ್ಟು ಸಲುಗೆ! ಹಬ್ಬ ಹರಿದಿನಕ್ಕೆ ಬಂದು ಹೋಗುವ ಅಳಿಯ, ಭಾವ ನೆಂಟ ಆ ಶಿವ. ಗೌರಿ, ಗಿರಿಜೆ ಈ ನೆಲದ ಗಿರಿರಾಜನ ಪ್ರೀತಿಯ ಮಗಳು. ಕೈಲಾಸದ ಶಿವನನ್ನೇ ಮದುವೆಯಾಗಬೇಕೆಂದು ಆಶಿಸಿ, ಸಂಕಲ್ಪಿಸಿ ತಪಸ್ಸು ಮಾಡಿ, ಆತನೆ ಒಲಿದು ತನ್ನೆಡೆಗೆ ಬರುವಂತೆ, ಮಾಡಿದವಳು. ಒಲಿದು ಬಂದ ಶಿವ, ಗಿರಿಜೆಯನ್ನು ತನಗೆ ಮದುವೆ ಮಾಡಿಕೊಡಿರೆಂದು ಗಿರಿರಾಜನನ್ನು ಬೇಡುತ್ತಾನೆ. ಹರಿಬ್ರಹ್ಮಾದಿ ಸಕಲ ದೇವತೆಗಳು, ಮುನಿಜನರು ಗಿರಿಜಾಕಲ್ಯಾಣಕ್ಕೆ ಬರುತ್ತಾರೆ. ಹೀಗೆ ಕೈಲಾಸದೊಂದಿಗೆ ನಮ್ಮ ಬೀಗತನ ಆರಂಭವಾಗುತ್ತದೆ. ಇಹ ಮತ್ತು ಪರಗಳ ಈ ಮಧುರ ಸಂಬಂಧದ ಕಲ್ಪನೆಯೆ ಭವ್ಯ ವಾದುದು.

ಲೋಕವ್ಯಾಪಿಯೂ ಲೋಕಾತೀತನೂ ಆಗಿರುವ ಭಗವಂತ ನನ್ನು ಈ ಸಹಜ ಸಾಧಕರು ಎಲ್ಲೆಲ್ಲಿಯೂ ಕಾಣುತ್ತ ಆನಂದಿಸು ತ್ತಾರೆ:

ಹೂವಿನ್ಯಾಗ ಹುದುಗ್ಯಾನ ಮಾಲ್ಯಾಗ ಮಲಗ್ಯಾನ
ಮೊಗ್ಯಾಗ ಕಣ್ಣು ತೆರೆದಾನ । ಲಿಂಗಯನ
ನೋಡಟಗಿ ನಿದ್ದಿ ಬಯಲಾಗಿ ॥

ಅನುಭಾವಿಗಳಾದ ಇವರು ಸಾಮಾನ್ಯರಾಗಿ ಕಾಣುವ ಗುಪ್ತ ಯೋಗಿಗಳು.

ಶಿವಶರಣರ, ಹರಿದಾಸರ ಅನುಭಾವ ಗೀತೆಗಳಂತೂ ಈ ಲೋಕದಲ್ಲಿ ಹೇಗ ಬಾಳಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳ ಬೇಕು, ಹೇಗೆ ಸಂಸಾರದಲ್ಲಿದ್ದುಕೊಂಡೇ ಪಾರಮಾರ್ಥವನ್ನೂ ಸಾಧಿಸಿಕೊಳ್ಳಬೇಕು ಎಂಬುದನ್ನು ಹೃದ್ಯವಾಗಿ ತಿಳಿಯಪಡಿಸುತ್ತವೆ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ
ಇದೇ ನಮ್ಮ ಕೂಡಲ ಸಂಗನನೊಲಿಸುವ ಪರಿ

ಎಂಬ ಬಸವಣ್ಣನವರ ಸರಳ ಸುಂದರ ವಚನ — ನೀತಿಸೂತ್ರ ಕನ್ನಡಿಗರ ಚೊಕ್ಕ ಬದುಕಿನ ಸಮಗ್ರ ಆದರ್ಶವನ್ನು ಅಭಿವ್ಯಕ್ತ ಗೊಳಿಸುತ್ತದೆ.

ಕಲ್ಲಾಗಿ ಇರಬೇಕು ಕಠಿಣ ಭವತೊರೆಯೊಳಗೆ
ಬಿಲ್ಲಾಗಿ ಇರಬೇಕು ಬಲ್ಲವರೊಳಗೆ ।

ಸತ್ಸಂಗದಲ್ಲಿ ವಿನಯವಾಗಿ ಬಲ್ಲವರಲ್ಲಿ ಬೆಲ್ಲವಾಗಿ, ಮತಾಬ್ಧಿ ಯಲ್ಲಿ ಮೀನಾಗಿ ಆತ್ಮ ಶೋಧನೆಯಲ್ಲಿ ಶುದ್ಧನಾಗಿ ಇರಬೇಕು ಎನ್ನುತ್ತಾರೆ ಪುರಂದರದಾಸರು. ಜೀವನದ ಬಗ್ಗೆ ಸರಿಯಾದ ತಿಳಿ ವಳಿಕೆಯಿಟ್ಟುಕೊಂಡವರಿಗೆ ದುಃಖದ ಬೇಗೆ ತಾಕುವುದಿಲ್ಲ. ಬಾಳು: ಮಕ್ಕಳಾಗಿ ಮನೆ ಕಟ್ಟಿದಂತೆ; ಆಟ ಸಾಕೆಂದು ಅಳಿಸಿ ಪೋದಂತೆ. ಆದ್ದರಿಂದ ಮೋಹಕ್ಕೆ ಬೀಳದೆ ಭಕ್ತಿಯಿಂದ ಭಗವನ್ನಾಮಸಂಕೀ ರ್ತನೆ ಮಾಡುತ್ತಾ ಮಾಡಬೇಕಾದ ಕರ್ತವ್ಯಗಳನ್ನು ಚ್ಯುತಿಯಿಲ್ಲ ದಂತೆ ಸಮರ್ಪಕವಾಗಿ ಮಾಡುತ್ತ ಸದಾ ಸಂತೋಷದಿಂದಿರುವುದೇ ಜೀವನ ಕಲೆ. ಜಪ-ತಪ, ಆಡಂಬರದ ಪೂಜೆ, ನೇಮ-ನಿಷ್ಠೆ ಇವೆಲ್ಲ ಕೇವಲ ಬೂಟಾಟಿಕೆಯಾಗಬಾರದು. ಎಲ್ಲಕ್ಕೂ ಮುಖ್ಯ ವಾದುದು ಹೃದಯಶುದ್ಧಿ, ಭಕ್ತಿ ಮತ್ತು ಅಹಂಕಾರರಹಿತವಾದ ಸೇವೆ. ಪರಿಶುದ್ಧವಾದ ಹೃದಯದಲ್ಲಿ ಪ್ರೇಮವೊಂದೇ ದಿಟ. ವೈರಕ್ಕೆ ಎಡೆಯಿಲ್ಲ.

ವಿಷವಿಕ್ಕಿದವಗೆ ಷಡ್ರಸವನುಣಿಸಲಿ ಬೇಕು
ಹಿಂದೆ ನಿಂದಿಪರನ್ನು ವಂದಿಸುತಲಿರಬೇಕು
ಕೊಂಡೊಯ್ದು ಬಡಿಯುವರ ಕೊಂಡಾಡಬೇಕು

ಇದು ಹರಿದಾಸರ ಕಿವಿ ಮಾತು. ಶರಣರು, ಭಕ್ತಿ ಕವಿಗಳೂ ಇದೇ ಮನೋಭಾವದವರು. ಇತ್ತೀಚಿನ ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ', ಕುವೆಂಪುರವರ ಭಕ್ತಿ-ಅಧ್ಯಾತ್ಮ ಗೀತೆಗಳು,

ಕೈಲಾಸಂ ನಾಟಕಗಳು, ಪರಂಪರಾಗತವಾಗಿ ಬಂದಿರುವ ಕನ್ನಡಿಗರ ಮನೋಧರ್ಮವನ್ನೂ ಎತ್ತಿಹಿಡಿಯುವ ಜೀವನದ ಹಿರಿಯ ಮೌಲ್ಯಗಳನ್ನೂ ಆಯಾ ಕಾಲಕ್ಕನುಗುಣವಾದ ಹೊಸ ಹೊಸ ರೀತಿಯಲ್ಲಿ ಆಯಾ ಕವಿಗಳ ವಿಶಿಷ್ಟ ಅಭಿವ್ಯಕ್ತಿಯಲ್ಲಿ ಪ್ರಕಟಿಸಿವೆ.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ।
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಗೆ
ಎಲ್ಲರೊಳಗೊಂದಾಗು – ಮಂಕುತಿಮ್ಮ ॥

ಹೀಗೆ ವಿನಯ, ಸೌಜನ್ಯ, ಸಹನೆ, ಅನುಕಂಪೆ, ಸೇವಾಕಾಂಕ್ಷೆ, ಸಹಬಾಳ್ವೆಯ ಗುಣಗಳು ಕನ್ನಡಿಗರಲ್ಲಿ ಹಿರಿಯ ಪರಂಪರೆಯಾಗಿ ಮೈಗೂಡಿದ್ದವು. ಅದೇ ಆದರ್ಶದ ಬೆಳಕಿನಲ್ಲಿ ನಡೆಯಬೇಕೆನ್ನುವವರು ನಾವು.

ಈ ಆದರ್ಶ ಮುಖ್ಯವಷ್ಟೆ ಅಲ್ಲ. ವಾಸ್ತವದಲ್ಲಿ ಮಾನವ ಸಹಜವಾದ ದುರ್ಗುಣ–ದೋಷ–ದೌರ್ಬಲ್ಯಗಳೂ ಇವೆ. ಧರ್ಮವನ್ನು ಮರೆತ ಜಾತೀಯ ವೈಷಮ್ಯ ಎಲ್ಲ ಕಾಲದಲ್ಲೂ ಇದ್ದೇ ಇದೆ. ಪ್ರಮಾಣದಲ್ಲಿ ವ್ಯತ್ಯಾಸ ಅಷ್ಟೆ. ಇಂದು — ಈ ವಿಜ್ಞಾನ ಯುಗದಲ್ಲೂ— ಕನ್ನಡನಾಡಿನಲ್ಲಷ್ಟೇ ಅಲ್ಲ ಸಮಸ್ತ ಭಾರತದಲ್ಲಿ, ಇಡೀ ಜಗತ್ತಿನ ಎಲ್ಲ ಕಡೆ ಧರ್ಮದ ಹೆಸರಿನಲ್ಲಿ ಕ್ಷುದ್ರವಾದ ಕೋಮುದ್ವೇಷದ — ಮೂಲಭೂತ ವಾದದ — ವರ್ಣದ್ವೇಷದ ವಿಷ ವ್ಯಾಪಿಸಿದೆ. ಯುವಜನರ ಮನವನ್ನು ಕದಡಿ ಬಗ್ಗಡ ಮಾಡಿದೆ. ದೊಡ್ಡವರನ್ನು ತಿದ್ದುವುದು ಅಸಾಧ್ಯ. ಕಿರಿಯ ಪ್ರಾಯದವರೂ ಈ ದುರ್ಭಾವನೆಗಳಿಗೆ ಒಳಗಾಗಿರುವುದೇ ಆತಂಕವುಂಟುಮಾಡಿದೆ.

ಮತೀಯ ವೈಷಮ್ಯದ ಕಲಹಗಳಿಗೆ ಮುಖ್ಯವಾದ ಕಾರಣಗಳು ಎರಡು: ಒಂದು, ಅತಿರೇಕದ ಸ್ವಾರ್ಥ ಮತ್ತು ಸಂಕುಚಿತ ದೃಷ್ಟಿ. ಎರಡನೆಯದು: ಧರ್ಮದ ಹೆಸರಿನಲ್ಲಿ ಸರಿಯಾದ ತಿಳಿವಳಿಕೆ ಇಲ್ಲದಿರುವುದು. ಜಾತಿಯ ಹೆಸರಿನಲ್ಲಿ ಏನು ಮಾಡಲೂ ಹೇಸದ ದುರಭಿಮಾನಿಗಳಿಗೆ ತಮ್ಮ ಧರ್ಮವೇ ಚೆನ್ನಾಗಿ ತಿಳಿಯದು. ಅಧಿಕಾರ, ಸ್ಥಾನ, ಧನ ಮುಂತಾದ್ದನ್ನು ನ್ಯಾಯವೊ ಅನ್ಯಾಯವೊ ಹೇಗಾದರೂ ಸಂಪಾದಿಸಬೇಕೆಂಬ ದುಷ್ಟ–ಸ್ವಾರ್ಥ ಸಾಧಕರು ಪ್ರತಿಯೊಂದಕ್ಕೂ ಜಾತಿಯ ಬಣ್ಣ ಬಳಿಯುತ್ತಾರೆ. ಇದರಲ್ಲಿ ವಿದ್ಯಾವಂತರೆನಿಸಿಕೊಂಡವರದೇ (ತಿಳಿವಳಿಕೆ ಮಾತ್ರ ಇಲ್ಲದವರದೇ) ಪ್ರಧಾನ ಪಾತ್ರ. ಇಂಥ ಮುಂದಾಳುಗಳನ್ನು ಹಲವು ಜನ ಹುಂಬರು ವಿವೇಚಿಸದೆ ಕುರಿಮಂದೆಯ ಹಾಗೆ ಅನುಸರಿಸುತ್ತಾರೆ. ತಮ್ಮ ಜಾತಿಯ ಹಕ್ಕುಗಳಿಗಾಗಿ, ತಮ್ಮ ಜಾತಿಗೆ ಸಲ್ಲಬೇಕೆಂಬ ನ್ಯಾಯಕ್ಕಾಗಿ ಹೋರಾಡುತ್ತಿದ್ದೇವೆ ಎಂಬ ತಪ್ಪು ಭಾವನೆಯಲ್ಲಿ, ಧರ್ಮ(?)ಕ್ಕಾಗಿ ಪ್ರಾಣ ತೆತ್ತು ಹುತಾತ್ಮರಾಗುತ್ತಿದ್ದೇವೆ ಎಂಬ ಹುಚ್ಚು–ಭ್ರಮೆಯಲ್ಲಿ ಹಿಂಸಾಚಾರಕ್ಕೂ ಇಳಿಯುತ್ತಾರೆ. ಈ ಅಮಾನವೀಯ ಕ್ರೌರ್ಯ–ಹಿಂಸೆಗಳ ಹುಚ್ಚು ಕುಣಿತ ನೋಡಿ ಧರ್ಮ, ಮಾನವೀಯ ದಯೆ (ಪ್ರೇಮ–ಅನುಕಂಪೆಗಳೆ ಆಧಾರವಾಗಿರುವ ಪ್ರತಿಯೊಂದು ಧರ್ಮ) ಕಳಂಕಿತವಾಗಿ ಲಜ್ಜೆಯಿಂದ ಮರೆಗೆ ನಿಲ್ಲುತ್ತದೆ. ಹೀಗೆ ರಕ್ತ ಹರಿಸುವವರ ಧರ್ಮಕ್ಕೆ ಕೆಟ್ಟ ಹೆಸರು ಬರುತ್ತದೆ. ಆ ಧರ್ಮದ ಬಹುಜನ ಒಳ್ಳೆಯವರಿಗೂ ಇದರ ಶಾಖ, ಕೇಡು ತಟ್ಟುತ್ತವೆ.

ಇದು ಒಂದು ದುರಂತವಾದರೆ ಮತ್ತೊಂದು ಅನಿಷ್ಟ, ಧರ್ಮದ ಹೆಸರಿನಲ್ಲಿ ಸ್ವಧರ್ಮೀಯರಿಂದಲೇ ಶೋಷಣೆ. ಧರ್ಮದ ಹೆಸರಿನಲ್ಲಿ , ಜಾತಿಯ ಹೆಸರಿನಲ್ಲಿ ಪ್ರತಿಯೊಂದು ಸಮಾಜದಲ್ಲೂ ಮುಂದುವರಿದವರು ಎಂಬ ಜನ ಸುಲಭವಾಗಿ ನಂಬಿ ಮೋಸ ಹೋಗುವ, ಮುಗ್ಧರಾದ, ಇತರರನ್ನು ಎಲ್ಲ ರೀತಿಯಿಂದಲೂ ನಿರಂತರವಾಗಿ ಶೋಷಿಸುತ್ತಲೇ ಇರುತ್ತಾರೆ. ಜಾತೀಯತೆಯ ಪಿಡುಗು ನಿವಾರಣೆಯಾಗಿ ಆರೋಗ್ಯ ಪೂರ್ಣವಾದ ಹೊಸ ಯುಗ ಆರಂಭವಾಗುವುದಕ್ಕೆ ಕನ್ನಡಿಗರು ವಿಶಾಲವಾದ ಮಾನವೀಯ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ಕನ್ನಡಿಗರ ಸಾಂಸ್ಕೃತಿಕ ಪರಂಪರೆಯಲ್ಲೇ ಇದು ಅಂತರ್ಗತವಾಗಿರುವುದರಿಂದ ಅಷ್ಟೇನೂ ಕಷ್ಟಪಡಬೇಕಾದ ಅಗತ್ಯವಿಲ್ಲ. ಶಿವಶರಣರು, ಹರಿದಾಸರು ನಡೆದು ಪಥವನ್ನು ಸಿದ್ಧ ಮಾಡಿಟ್ಟುಬಿಟ್ಟಿದ್ದಾರೆ. ಅದು ವೈಚಾರಿಕವಾದ ಭಕ್ತಿ ಪಥ. ಆಗ ನಮ್ಮ ಪ್ರಾಚೀನ ಮಹಾಕಾವ್ಯಗಳಲ್ಲಿ , ಶಾಸನಗಳಲ್ಲಿ ಪ್ರತಿಪಾದಿತವಾಗಿರುವ ಆದರ್ಶ ಮನೋಧರ್ಮ ನಮ್ಮದಾಗುತ್ತದೆ. ನಮ್ಮ ಹಿರಿಯರು ಕಂಡ ಆದರ್ಶದ ಹೊಂಗನಸು ನನಸಾಗಿ ಎಲ್ಲರ ಬಾಳೂ ಬೆಳಕಾಗಿ ಕನ್ನಡಿಗರ ಮನೋಧರ್ಮ ವಿಶ್ವಕ್ಕೇ ಕೈದೀಪವಾಗುತ್ತದೆ.

ಬೆಳಕನ್ನು ತನ್ನಿ

ಕೋಣೆ ಕತ್ತಲೆಯಾಗಿದ್ದರೆ, "ಅಯ್ಯೋ! ಕತ್ತಲೆ, ಕತ್ತಲೆ" ಎಂದು ಅರಚುತ್ತೀರೇನು? ಬೆಳಕನ್ನು ತರಲು ಇರುವ ಏಕಮಾತ್ರ ಮಾರ್ಗವೆ, ಒಂದು ದೀಪವನ್ನು ಹತ್ತಿಸುವುದು. ಆಗ ಕತ್ತಲೆ ತಕ್ಷಣ ಮಾಯವಾಗುವುದು. ಈಗ ನಿಮಗೆ ಅತೀತವಾದ ಜ್ಯೋತಿಯನ್ನು ತಿಳಿದುಕೊಳ್ಳಲು ಏಕಮಾತ್ರ ಮಾರ್ಗವೇ, ನಿಮ್ಮ ಅಂತರಾಳದಲ್ಲಿರುವ ಆಧ್ಯಾತ್ಮಿಕ ಜ್ಯೋತಿಯನ್ನು ಹಚ್ಚುವುದು. ಆಗ ಪಾಪದ ಮತ್ತು ಅಶುದ್ಧ ಭಾವನೆಯ ಅಂಧಕಾರವೆಲ್ಲ ಮಾಯವಾಗುವುದು. ನಿಮ್ಮ ಉತ್ತಮ ಸ್ವಭಾವವನ್ನು ಕುರಿತು ಯೋಚಿಸಿ, ಕೀಳು ಸ್ವಭಾವವನ್ನು ಕುರಿತು ಯೋಚಿಸಬೇಡಿ.


ಧರ್ಮವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೊಂದೇ ಮಾರ್ಗ. ಪ್ರತಿಯೊಬ್ಬರೂ ಅದನ್ನು ಕಂಡುಹಿಡಿಯಬೇಕು.. ಈ ಪ್ರಪಂಚದಲ್ಲಿರುವ ವಿಶ್ವಾತ್ಮನೊಂದಿಗೆ ಯಾವುದು ನಮ್ಮನ್ನು ಒಂದುಗೂಡಿಸುವುದೋ ಅದೇ ನಿಜವಾದ ಜ್ಞಾನ.

— ಸ್ವಾಮಿ ವಿವೇಕಾನಂದ

ಆನಂದದ ಹುಡುಕಾಟ

ಸ್ವಾಮಿ ರಾಮಕೃಷ್ಣಾನಂದ

ಶ್ರೀರಾಮಕೃಷ್ಣ ಪರಮಹಂಸರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ರಾಮಕೃಷ್ಣಾನಂದರು (೧೮೬೩-೧೯೧೧) ಸ್ವಾಮಿ ವಿವೇಕಾನಂದರ ಆಣತಿಯಂತೆ ತಮ್ಮ ಗುರುದೇವನ ಜೀವನ, ಸಂದೇಶ ಹಾಗೂ ವೇದಾಂತದ ಆದರ್ಶಗಳನ್ನು ದಕ್ಷಿಣ ಭಾರತದಲ್ಲಿ ಪಸರಿಸಲು ಚೆನ್ನೈಗೆ ಬಂದು, ಅಲ್ಲೊಂದು ಕೇಂದ್ರವನ್ನು ತೆರೆದರು. ದಕ್ಷಿಣದಲ್ಲಿ ರಾಮಕೃಷ್ಣ ಭಾವಧಾರೆಯನ್ನು ಹರಡುವಲ್ಲಿ ಅವರ ಪಾತ್ರ ಹಿರಿದು. ತಮ್ಮ ಅವಿರತ ಪ್ರಯತ್ನದಿಂದಲೂ ಕಠಿಣ ತಪಸ್ವೀ ಜೀವನದಿಂದಲೂ, ಕರ್ಮ-ಭಕ್ತಿ-ಜ್ಞಾನಗಳ ಸಮನ್ವಯದ ಆದರ್ಶವನ್ನು ಹೊಸ ಪೀಳಿಗೆಯ ಯುವಕರ ಮುಂದಿಡುವ ಮೂಲಕ, ಅವರು ಎಲ್ಲೆಡೆ ಭಗವದ್ಭಾವದ ಹೊಸ ಚಳವಳಿಗೆ ನಾಂದಿಯಾದರು. ಆಗಸ್ಟ್ ೯ರಂದು ಅವರ ಜಯಂತಿಯನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅವರ 'Search after Happiness' ಎಂಬ ಲೇಖನದ ಅನುವಾದನವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.



ಸ್ವಾಮಿ ರಾಮಕೃಷ್ಣಾನಂದರು

ಅತಿಶ್ರೇಷ್ಠ ಜೀವಿಯಾದ ಮಾನವನಿಂದ ಹಿಡಿದು ಅತಿಚಿಕ್ಕ ಸೂಕ್ಷ್ಮಜೀವಿಯ ವರೆಗಿನ ಪ್ರತಿಯೊಂದು ಪ್ರಾಣಿಯೂ ಸುಖವನ್ನರಸಿ ಹೋಗುತ್ತಿವೆ. ಕೆಲವರು ತಮ್ಮ ತೋಳುಬಲವನ್ನೇ ನಂಬಿದ್ದಾರೆ; ಸುಖಕ್ಕಾಗಿ ಅವರು ಹೋರಾಡುತ್ತಾರೆ. ಕೆಲವರು ಪ್ರಕೃತಿಯನ್ನು ಮೀರಿ ಹೋಗಿ, ವಿಶ್ವವನ್ನು ಪೋಷಿಸುವ ಅಗೋಚರ ಶಕ್ತಿಗಳ ಮೂಲಕ ತಮ್ಮ ಆಸೆಗಳನ್ನು ಪೂರೈಸಿಕೊಂಡು ಸುಖವನ್ನು ಹೊಂದಲು ಯತ್ನಿಸುತ್ತಾರೆ. ಆದರೆ ಎಲ್ಲರೂ ತಮ್ಮ ಐದು ಇಂದ್ರಿಯಗಳ ಮೂಲಕ ಬಾಹ್ಯಜಗತ್ತಿನಲ್ಲಿ ಸುಖವನ್ನು ಅರಸುತ್ತಿರುವರು. ಸ್ವರ್ಗದಲ್ಲಿರುವ ಸುಖವೂ ಇಂಥದೇ. ಈ ಸುಖವೆಂಬುದು ಮಾನವನ ಐದು ಇಂದ್ರಿಯಗಳು ಭೌತಿಕ ಜಗತ್ತಿನೊಂದಿಗೆ ಒಂದಾಗುವುದರ ಪರಿಣಾಮವಷ್ಟೇ ಆಗಿದೆ. ಯಾವಾಗ ಅವುಗಳು ಹಾಗೆ ಒಂದಾಗುವುವೋ, ಆಗ ಅವು ಸಮಭಾವದಲ್ಲಿದ್ದರೆ, ಅದರ ಪರಿಣಾಮವೇ ಸುಖ. ಹಾಗಿಲ್ಲದೆ ಇದ್ದರೆ ಅದರ ಪರಿಣಾಮವೇ ದುಃಖ.

ಬಾಹ್ಯಜಗತ್ತಿನಲ್ಲಿ ಸುಖವನ್ನು ಹುಡುಕುವ ಎಲ್ಲರ ಅನುಭವವೂ ಇದೇ ಆಗಿದೆ. ಯಾವಾಗಲೂ ಮಾನವನು ಹೋರಾಡಬೇಕು, ಕಷ್ಟವನ್ನು ಅನುಭವಿಸಬೇಕು. ಒಂದಿಷ್ಟು ಸುಖಕ್ಕಾಗಿ ಅವನು ಅಪಾರ ದುಃಖವನ್ನು ಅನುಭವಿಸಬೇಕಾಗುವುದು. ಅಲ್ಪವನ್ನು ಗಳಿಸುವುದಕ್ಕಾಗಿ ಅವನು ಹಲವು ವಸ್ತುಗಳನ್ನು ತ್ಯಜಿಸಬೇಕಾಗುವುದು. ಸ್ವರ್ಗದಲ್ಲಿಯೂ ಇದೇ ರೀತಿ. ಸುಖಕ್ಕಾಗಿ ನಡೆಸುವ ಹುಡುಕಾಟ ಅತ್ಯಂತ ಘೋರವಾದ ಬಂಧನ; ಸ್ವರ್ಗ ಕೂಡ ಬಂಧನವೇ - ಏಕೆಂದರೆ ಅಲ್ಲಿಯೂ ಮಾನವನು ಶಾಶ್ವತವಾಗಿ ಇರಲಾರ. ನಿಮ್ಮನ್ನೇ ನೀವು ಪ್ರಶ್ನಿಸಿಕೊಳ್ಳಿ. ನಿಮಗೆ ಸ್ವಾತಂತ್ರ್ಯ, ಶಾಂತಿ, ನೆಮ್ಮದಿ, ಆನಂದ ಬೇಕೆ? ಇದೆಲ್ಲವೂ ಬೇಕೆಂದು ನೀವು ಕ್ಷಣದಲ್ಲೇ ಉತ್ತರಿಸುವಿರಿ. ಎಲ್ಲರಿಗೂ ಶಾಂತಿ ಬೇಕಾಗಿದೆ. ಆದರೆ ಇಲ್ಲೆಲ್ಲೂ ಶಾಂತಿ ಕಾಣಿಸದಾಗಿದೆ. ನಿಮ್ಮ ಕಾಲ ಮೇಲೆ ನೀವು ನಿಲ್ಲಬೇಕಾದರೆ ನೀವು ಹೋರಾಡಬೇಕಾಗುವುದು. ನಮ್ಮ ದೇಹದ ಪ್ರತಿಯೊಂದು ಕ್ರಿಯೆಯೂ ಹೋರಾಟವನ್ನೇ ಸೂಚಿಸುತ್ತವೆ.

ಸುಖ, ಸಂಪತ್ತು, ಆಸೆ — ಈ ದಾಹಗಳನ್ನು ಮೀರಿರುವ, ಅವನ್ನು ದಾಟಿ ಹೋಗಿರುವ ಅವಸ್ಥೆಯನ್ನೇ ಮುಕ್ತಿ ಎನ್ನುತ್ತೇವೆ. ಈ ಮೂರೂ ಮನುಷ್ಯನನ್ನು ಬಂಧಿಸುತ್ತವೆ, ಅವನನ್ನು ಜನನ - ಮರಣಗಳ ಸಂಸಾರಚಕ್ರಕ್ಕೆ ಕಟ್ಟಿ ಹಾಕುತ್ತವೆ. ಅದರಲ್ಲಿ ಬಂಧಿತವಾದ ಜೀವವು ಕೆಲವೊಮ್ಮೆ ಮೇಲಕ್ಕೆ ಹೋಗುವುದು, ಕೆಲವೊಮ್ಮೆ

ಕೆಳಕ್ಕೆ ಹೋಗುವುದು. ಅದು ಒಂದೆಡೆ ನಿಂತು ವಿರಮಿಸಲಾರದು. ಇದರಿಂದ ಅದಕ್ಕೆ ಬಿಡುಗಡೆಯಿಲ್ಲವೆ? ಖಂಡಿತ ಇದೆ. ನನ್ನನ್ನು ಕೆಳಕ್ಕೆ ತಳ್ಳುವ ಯಾರೋ ನಿಜಕ್ಕೂ ಮೇಲಿದ್ದಾರೆ. ಆ ಶಕ್ತಿ ನಿರಂಕುಶ ವ್ಯಕ್ತಿಯೆ? ಅಲ್ಲ; ಅವನು ನನ್ನ ನಿಜವಾದ ತಂದೆ; 'ನಿಜವಾದ' ಎಂದರೆ ಶಾಶ್ವತವಾಗಿ ಇರುವವನು ಎಂದರ್ಥ. ಶೂನ್ಯದಿಂದ ಯಾವುದೂ ಉದ್ಭವವಾಗದು; ಯಾವುದಾದರೂ ಇನ್ನೊಂದು ವಸ್ತುವಿನಿಂದಲೇ ಏನಾದರೂ ಹುಟ್ಟಬೇಕು. ಆದ್ದರಿಂದ ನನ್ನ ನಿಜವಾದ ತಂದೆ ಶಾಶ್ವತವಾದ ತಂದೆಯೇ ಆಗಿರಬೇಕು. ಈ ಜಗತ್ತಿಗೆ ನಾನು ನಗ್ನವಾಗಿ ಬಂದಿರುವೆ; ಯಾವುದೇ ಜಾತಿ, ಪಂಗಡಗಳಿಲ್ಲದೆ ಬಂದಿರುವೆ. ನನ್ನನ್ನು ಇಲ್ಲಿಗೆ ಆ ಶಕ್ತಿಯೇ ಕರೆ ತಂದಿದೆ. ಹಾಗಿದ್ದರೆ, ಆತನೊಂದಿಗೆ ನನ್ನ ಸಂಬಂಧವೇನು? ಪ್ರಭುವಿಗೆ ಸೇವಕನಂತೆ, ತಂದೆಗೆ ಮಗನಂತೆ. ಆದರೆ ಅವನು ನನ್ನ ಶಾಶ್ವತ ತಂದೆ; ಅವನೊಂದಿಗೆ ನನ್ನ ಸಂಬಂಧ ಶಾಶ್ವತ. ಆದ್ದರಿಂದ ನನ್ನ ನಿಜವಾದ ತಂದೆಗೆ ವಿಧೇಯನಾಗಿರುವುದು ನನ್ನ ಕರ್ತವ್ಯ; ತಾತ್ಕಾಲಿಕ ತಂದೆಗಲ್ಲ. ನನ್ನ ತಾತ್ಕಾಲಿಕ ತಂದೆ ನನ್ನ ಶಾಶ್ವತ ತಂದೆಯ ಇಚ್ಛೆಗೆ ವಿರುದ್ಧವಾಗಿ ನಡೆದುಕೊಂಡರೆ, ನಾನು ಪ್ರಹ್ಲಾದನಂತೆ ಅವನನ್ನು ಧಿಕ್ಕರಿಸಬೇಕಾಗುವುದು.

ತನ್ನ ತಂದೆಯ ಬಳಿ ಒಂದು ಕೋಟಿ ರೂಪಾಯಿ ಇದೆಯೆಂದು ತಿಳಿದವನು ಎಷ್ಟೊಂದು ಆನಂದಪಡುತ್ತಾನೆ! ಆದ್ದರಿಂದ ನನ್ನ ತಂದೆಯು ಇದೇ ವಿಶ್ವದ ಪ್ರಭು ಎಂಬ ತಿಳುವಳಿಕೆ ನನಗೆ ಬಂದಾಗ ನಾನು ಎಷ್ಟೊಂದು ಸಂತಸಪಡಬೇಡ! ಕುದುರೆಯ ಮರಿ ಕುದುರೆಯಾಗಿಯೆ ಹುಟ್ಟುತ್ತದೆ; ಕತ್ತೆಯ ಮರಿ ಕತ್ತೆಯಾಗಿಯೇ ಹುಟ್ಟುತ್ತದೆ. ಅದ ರೀತಿ, ದೇವರ ಮಗು ದೇವರಾಗಿಯೇ ಜನಿಸುತ್ತದೆ. ಆದ್ದರಿಂದ, ಭಗವಂತ ನನ್ನ ತಂದೆಯಾಗಿದ್ದರೆ, ನಾನೂ ಸಾಕ್ಷಾತ್ ದೇವರಂತೆಯೇ ಅತ್ಯುತ್ತಮನೂ, ಆನಂದಮಯನೂ ಆಗಿರಬೇಕು. ಇದನ್ನು ಅರಿತುಕೊಂಡಿದ್ದರೆ, ನಾನು ಮಹತ್ತಿನ ಕಾರಣಕ್ಕಾಗಿ ಎಲ್ಲವನ್ನೂ ತ್ಯಜಿಸಬೇಕು. ಪ್ರಾಪಂಚಿಕ ಸಂಬಂಧಗಳ ಕಾರಣದಿಂದ ಅಲ್ಪತನದಿಂದ ಕೂಡಿದ ಪ್ರೀತಿಗೆ ನನ್ನನ್ನು ನಾನು ಬಂಧಿಸಿಕೊಳ್ಳಬಾರದು. ನನಗೆ ನಿಜವಾದ ಆನಂದ ಬೇಕಿದ್ದರೆ, ನಾನು ಪ್ರಪಂಚದ ಅಲ್ಪ ಸುಖವನ್ನು ತ್ಯಜಿಸಬೇಕು. ಭಗವಂತನು ಚೈತನ್ಯವಾಗಿದ್ದಾನೆ; ಆದ್ದರಿಂದ ಅವನನ್ನು ನಾನು ಚೈತನ್ಯದಲ್ಲೇ ಹುಡುಕಬೇಕು. ಅವನು ಪ್ರಜ್ಞೆಯಾಗಿದ್ದಾನೆ; ಆದ್ದರಿಂದ ಅವನನ್ನು ನನ್ನ ಪ್ರಜ್ಞೆಯಲ್ಲಿಯೇ ನಾನು ಅರಸಬೇಕು. ಪ್ರಜ್ಞೆಯು ದೇಹವನ್ನು ಬಿಟ್ಟಾಗ, ದೇಹವು ಮೇಜು ಅಥವಾ ಕುರ್ಚಿಯಂತಾಗುವುದು. ನಿಮ್ಮ ದೇಹವನ್ನು ಜಡವಸ್ತುವಾದ ಕುರ್ಚಿಗಿಂತ ಭಿನ್ನವಾಗಿಸುವುದೇ ನಿಮ್ಮ ಪ್ರಜ್ಞೆ. ಆದರೆ ನಿಮ್ಮ ದೇಹವೇ ನೀವೆಂದು ಅದರೊಂದಿಗೆ ಎಷ್ಟರಮಟ್ಟಿಗೆ ಗುರುತಿಸಿಕೊಂಡಿದ್ದೀರಿ ಎಂದರೆ, ಅದೊಂದು ಭಾರವೆಂದು ನಿಮಗೆ ಅನ್ನಿಸುವುದಿಲ್ಲ. ನಿಮ್ಮ ಬೆನ್ನ ಹಿಂದೆ ಭಾರವಿದ್ದರೆ, ಅದು ನಿಮ್ಮ ಅನುಭವಕ್ಕೆ ಬಂದೇ ಬರುವುದು. ಆದರೆ ದೇಹದ ಭಾರ ನಿಮ್ಮ ಗಮನಕ್ಕೆ ಬರುವುದಿಲ್ಲ. ಸತ್ತ ನಂತರ ದೇಹವನ್ನು ಎತ್ತಿ ನೋಡಿದರೆ, ಅದು ಭಾರವಿದೆಯೆಂದು ನಿಮಗೆ ಗೊತ್ತಾಗುವುದು. ಆದ್ದರಿಂದ, ದೇಹದ ಭಾರವನ್ನು ಇಷ್ಟೊಂದು ಸುಲಭವಾಗಿ ನೀವು ಎತ್ತಿಕೊಂಡು ಓಡಾಡುವುದರಿಂದ ನಿಮಗೆಷ್ಟು ಶಕ್ತಿಯಿದೆ ಎಂಬುದು ಗೊತ್ತಾಗುವುದು. ಆತ್ಮನು ಈ ಭಾರವನ್ನು ಹುಲ್ಲಿನಷ್ಟು ಹಗುರವಾಗಿ ಎತ್ತಿಕೊಂಡು ಓಡಾಡುವುದು.

ದೇವರು ಪ್ರಜ್ಞೆಯಿರುವ ಒಂದು ಅಸ್ತಿತ್ವವಾಗಿದ್ದರೆ, ಅವನನ್ನು ಪ್ರಜ್ಞೆಯಲ್ಲೇ ಅರಸಬೇಕು; ಆತ್ಮದಲ್ಲಿಯೇ ಅರಸಬೇಕು. ಆದ್ದರಿಂದ ನೀವು ನಿಮ್ಮ ಅಂತರಂಗಕ್ಕೆ ಹೋಗಬೇಕು; ಜಡವಸ್ತುವಿನ ಕಡೆಗಲ್ಲ. ಏಕೆಂದರೆ ಜಡವಸ್ತುವಿಗೆ ಪ್ರಜ್ಞೆಯಿರದು. ಮೊದಲು ಭಗವಂತನನ್ನು ನಿಮ್ಮೊಳಗೇ ನೀವು ಕಂಡುಕೊಳ್ಳಬೇಕು. ಚೈತನ್ಯವು ಚೈತನ್ಯದಲ್ಲಿ ಮಾತ್ರವೇ ಇರುವುದು. ಎಲ್ಲಿ ಚೈತನ್ಯವಿರುವುದೋ ಅಲ್ಲಿ ಜಡವಸ್ತು ಇರಲಾರದು. ಆದ್ದರಿಂದ, ನೀವು ಚೈತನ್ಯವನ್ನು ಹುಡುಕುವುದಿದ್ದರೆ, ಅದನ್ನು ಚೈತನ್ಯದಲ್ಲೇ ಹುಡುಕಬೇಕು. ಈ ಚೈತನ್ಯ ಎಲ್ಲಿದೆ? ಅಂತರಂಗದಲ್ಲಿದೆ. ಆದ ಕಾರಣ, ಭಗವಂತನನ್ನು ನಿಮ್ಮ ಅಂತರಂಗದಲ್ಲೇ ಹುಡುಕಬೇಕು. ದೇವರು ಪ್ರತಿಯೊಂದು ಜೀವಿಯ ಅಂತರಂಗದಲ್ಲೂ ನೆಲೆಸಿದ್ದಾನೆ. ಅಂಥ ಮಹಾನ್ ದೇವರು ಜೀವಿಸುವುದಾದರೂ ಎಲ್ಲಿ? ಅವನು ಮಾನವನಲ್ಲೇ ಜೀವಿಸಿದ್ದಾನೆ. ಅಂದರೆ, ಅವನು ಜೀವಿಸಿರುವುದು ಚೈತನ್ಯದಲ್ಲಿ ಎಂದರ್ಥ. ಇದೇ ನಿಜವಾದ ದೇವಾಲಯ. ಹೊರಜಗತ್ತಿನಲ್ಲಿ ಹಲವಾರು ದೇವಾಲಯಗಳಿರಬಹುದು. ಆದರೆ ಅವೆಲ್ಲ ಈ ದೇವಾಲಯದ ಛಾಯಾಚಿತ್ರಗಳಷ್ಟೆ. ದೇವಾಲಯಗಳಲ್ಲಿ ಐದು ಗೋಡೆಗಳಿವೆ – ಮಾನವನಲ್ಲಿ ಪಂಚಕೋಶಗಳಿರುವಂತೆ. ಗರ್ಭಗೃಹದಲ್ಲಿರುವ ದೇವರ ಬಳಿಗೆ ಹೋಗಲು ಈ ಕೋಶಗಳನ್ನು ಹಾದು ಹೋಗಬೇಕು. ಅದು ದೇವರು ನೆಲೆಸಿರುವ ಪೀಠ. ಅವನ ಬಳಿಗೆ ಹೋಗಲು ದೊಡ್ಡ ಗೋಡೆಗಳನ್ನು ಹಾದು ಹೋಗಬೇಕು, ಹೊರಗೆ ಅವನನ್ನು ಕಾಣಲಾಗದು. ಅದೇ ರೀತಿ, ಭಗವಂತನನ್ನು ಹೊರಜಗತ್ತಿನಲ್ಲಿ ನೀವು ಕಾಣಲಾರಿರಿ. ಏಕೆಂದರೆ ಅವನು ಯಾವಾಗಲೂ ಹೃದಯದೊಳಗೆ ಅವಿತುಕೊಂಡಿರುತ್ತಾನೆ.

ದೇವರು ನನ್ನೊಳಗೆ ಇರುವುದಾದರೆ, ನಾನು ಅವನ ಬಳಿಗೆ ಸುಲಭವಾಗಿ ಹೋಗಬಲ್ಲೆ. ಅದಕ್ಕಾಗಿ ನಾನು ಟಿಕೆಟ್ ಖರೀದಿಸಬೇಕಾಗಿಲ್ಲ. ನನ್ನ ಕಡೆಯಿಂದ ಅದಕ್ಕಾಗಿ ನಾನು ವಿಶೇಷ ಪ್ರಯತ್ನಪಡಬೇಕಾಗಿಲ್ಲ. ಆದರೂ ವಾಸ್ತವವಾಗಿ, ಇದು ಜಗತ್ತಿನಲ್ಲಿ ಅತ್ಯಂತ ಕಷ್ಟದಾಯಕವಾದ ಕೆಲಸ. ನಿಮ್ಮ ಅಂತರಂಗಕ್ಕೆ ಹೋಗುವ ಶಕ್ತಿ ನಿಮ್ಮಲ್ಲಿದ್ದರೆ, ಇಡೀ ವಿಶ್ವವನ್ನೇ ನೀವು ಆಕ್ರಮಿಸಿದಂತೆ. ಇಡೀ ಜಗತ್ತನ್ನೇ ಆಕ್ರಮಿಸಿದವರು, 'ಮಹಾನ್ ಅಲೆಕ್ಸಾಂಡರ್'ನೋ, 'ಮಹಾನ್ ನೆಪೋಲಿಯನ್'ನೋ ಅಲ್ಲ. ಅವರ ಆಕ್ರಮಣ ಕೇವಲ ತಾತ್ಕಾಲಿಕ. ಹಾಗೆ ನಿಜವಾಗಿ ಮಾಡಿದವನು ಒಬ್ಬಾತ ಬಡಗಿಯ ಮಗ; ಒಬ್ಬಾತ ಗೋವಳ.* ಅವರೇ ನಿಜವಾಗಿ

* ಏಸುಕ್ರಿಸ್ತ ಮತ್ತು ಶ್ರೀಕೃಷ್ಣ.

ಜಗತ್ತನ್ನು ಆಳುವವರು; ಅವರಿಗೆ ಅದು ಹೇಗೆ ಸಾಧ್ಯವಾಯಿತೆಂದರೆ, ಅವರು ತಮ್ಮ ಅಂತರಂಗಕ್ಕೆ ಇಳಿದರು.

ಹೀಗೆ ಅಂತರಂಗದೊಳಕ್ಕೆ ಇಳಿಯುವುದೆಂದರೇನು? ಅಂದರೆ, ಪ್ರಾಪಂಚಿಕ ಆಸಕ್ತಿಗಳಿಂದ, ಹಂಬಲಗಳಿಂದ, ಎಲ್ಲ ಬಗೆಯ ಆಸೆ ಆಕಾಂಕ್ಷೆಗಳಿಂದ ದೂರ ಹೋಗುವುದೆಂರ್ಥ. ಕೆಲವರ ಪ್ರಕಾರ ಧ್ಯಾನವೆಂದರೆ ಕನಸು ಕಾಣುವುದಕ್ಕಿಂತ ಬೇರೇನೂ ಅಲ್ಲ; ಸುಮ್ಮನೆ ಹಾಗೆ ಕೆಲಸ ಮಾಡದೆ ಕುಳಿತುಕೊಳ್ಳುವ ಬದಲು ಮನುಷ್ಯ ಏನಾದರೂ ಮಾಡಲಿ. ಎಲ್ಲರೂ ಕೆಲಸ ಮಾಡಬೇಕು. ಆದರೆ ಜಗತ್ತಿನಲ್ಲಿ ಅತ್ಯಂತ ಕಷ್ಟದಾಯಕವಾದ ಕೆಲಸವೇನು? ಕೆಲಸ ಮಾಡುವುದನ್ನು ಬಿಡುವುದೆ, ಅಥವಾ ಕೆಲಸದಲ್ಲಿ ತೊಡಗಿರುವುದೆ? ಎಷ್ಟು ಜನ ಕೆಲಸ ಮಾಡುವುದನ್ನು ಬಿಡಬಲ್ಲರು? ಯಾರೂ ಬಿಡಲಾರರು. ಹಸಿವೇ ನಿಮ್ಮನ್ನು ಹಿಂದಕ್ಕೆಳೆಯುವುದು. ಒಂದೆಡೆ ದೀರ್ಘಕಾಲ ನೀವು ಕುಳಿತುಕೊಳ್ಳಲಾರಿರಿ. ಮಾನವನೆಂದರೆ ಶ್ರೀಯುತ ಇಂಥವನು ಹಾಗೂ ಇಂಥವನು; ಅವನ ಸ್ವಭಾವವೇ ಕೆಲಸಮಾಡುವುದು; ಆದರೆ ಅವನ ಹಿಂದಿರುವ ಚೈತನ್ಯ ಎಲ್ಲ ಕೆಲಸಗಳನ್ನೂ ಮೀರಿ ನಿಂತಿದೆ. ನಾನು ನಿಮಗೆ ಹೇಳುವುದೇನೆಂದರೆ, ಈ ಸಣ್ಣ ಮಾನವನೊಳಗಿರುವ ಮಹಾನ್ ಮಾನವನನ್ನು ನಿಮ್ಮ ಅಂತರಂಗದಲ್ಲಿ ಅರಸಿ ಎಂದು. ಆದರೆ ಇದು ಅತ್ಯಂತ ಕಠಿಣವಾದ ಕೆಲಸ. ಏಕೆಂದರೆ, ಹಾಗೆ ಮಾಡುವಾಗ ನೀವು ನಿಮ್ಮ ಎಲ್ಲ ಅಲ್ಪ ಭಾವನೆಗಳನ್ನು ತ್ಯಜಿಸಬೇಕಾಗುವುದು. ಜನರು ಕೇಳುತ್ತಾರೆ: ನೀವೇಕೆ ಅಂತರಂಗಕ್ಕೆ ಇಳಿಯುತ್ತೀರಿ? ಅಲ್ಲಿ ಎಲ್ಲವೂ ಕತ್ತಲು. ಸೂರ್ಯ, ಚಂದ್ರ, ನಕ್ಷತ್ರಗಳಿಂದ ಬೆಳಗುತ್ತಿರುವ ಪ್ರಪಂಚದಲ್ಲಿ ನೀವು ಇರಬಾರದೇಕೆ? ಹೀಗೆ ನೂರಕ್ಕೆ ತೊಂಬತ್ತೊಂಬತ್ತು ಮಂದಿ ಮನುಷ್ಯರು ಬಾಹ್ಯಜಗತ್ತಿನಲ್ಲಿ ತಮ್ಮ ಪಾಡಿಗೆ ತಾವು ಇರಬಯಸುತ್ತಾರೆ. ಈ ರೀತಿ ಅವರು ಭೌತಿಕ ಜಗತ್ತಿನಲ್ಲೇ ಮುಂದುವರಿಯುತ್ತಾರೆ. ಆದ್ದರಿಂದಲೇ ಗೀತೆಯಲ್ಲಿ ಹೀಗೆ ಹೇಳಲಾಗಿದೆ: ''ಸಾವಿರಾರು ಜನರ ನಡುವೆ ಕೆಲವರು ಮಾತ್ರ ತನ್ನ ಅಂತರಂಗಕ್ಕೆ ಇಳಿದು ನೋಡುತ್ತಾರೆ, ಅಂಥವರ ನಡುವೆ ಕೆಲವರು ಮಾತ್ರ ನನ್ನನ್ನು ಕಾಣುತ್ತಾರೆ.''

ಕೆಲವರೇನೋ ಅಂತರಂಗಕ್ಕೆ ಇಳಿಯಬಲ್ಲರು; ಆದರೆ ಅಲ್ಲಿ ಅವರು ಭಯಂಕರ ಶತ್ರುವನ್ನು ಎದುರಿಸಬೇಕಾಗುವುದು – ಅದೇ, ಮನಸ್ಸು. ಅರ್ಜುನ ಕೂಡ ಹೇಳುತ್ತಾನೆ: ''ಮನಸ್ಸು ಚಂಚಲ ಹಾಗೂ ಕೊನೆಗೊಳಿಸುವ ಸ್ವಭಾವದಿಂದ ಕೂಡಿದ್ದು, ಅದನ್ನು ನಿಗ್ರಹಿಸುವುದೆಂದರೆ ವಾಯುವನ್ನು ನಿಗ್ರಹಿಸುವಷ್ಟು ಕಠಿಣ.'' ಇದಕ್ಕೆ ವಿರುದ್ಧವಾಗಿ ನೀವು ಹೋರಾಡಬೇಕು. ಹೇಗೆ ಹೋರಾಡುವುದು? ಅದಕ್ಕೆ ನೀವು ಮನಸ್ಸನ್ನು ಶುದ್ಧೀಕರಿಸಬೇಕು. ಮನಸ್ಸನ್ನು ಶುದ್ಧಗೊಳಿಸುವುದು ಹೇಗೆ? ದೇವರ ಮೇಲೆ ಭಕ್ತಿಯನ್ನು ಬೆಳೆಸಿಕೊಳ್ಳಬೇಕು. ಭಕ್ತಿಯ ಮೂಲಕ ನಾವು ಎಲ್ಲವನ್ನೂ ಸಾಧಿಸಬಹುದು. ದೇವರನ್ನು ಪೂರ್ಣ ಹೃದಯದಿಂದ ಪ್ರೀತಿಸಿದರೆ ತ್ಯಾಗ ಮಾಡುವುದು ಅತ್ಯಂತ ಸುಲಭ. ಪ್ರೀತಿಯೆಂಬುದು ಸಹಜವಾದ ಕ್ರಿಯೆ. ಎಂಥ ಮೂರ್ಖನೂ ಪ್ರೀತಿಸಬಲ್ಲ. ನಿಮ್ಮ ಪ್ರೀತಿಯನ್ನು ನೀವು ಚೈತನ್ಯದ ಕಡೆಗೆ ಹರಿಸಿದರೆ, ಅದು ನಿಮ್ಮನ್ನು ಚೈತನ್ಯದತ್ತ ಕರೆದೊಯ್ಯುವುದು. ಪ್ರಾಪಂಚಿಕ ಆಸಕ್ತಿಗಳೇ ನಿಮ್ಮನ್ನು ಹಾರುವ ಬೆಲೂನುಗಳನ್ನು ಕಟ್ಟಿಹಾಕಿದಂತೆ ಕಟ್ಟಿ ಹಾಕಿರುವುದು. ನಿಮ್ಮ ಪ್ರಾಪಂಚಿಕ ಸಂಬಂಧಗಳಿಗೆ, ಹಣ, ಆಸೆ ಆಕಾಂಕ್ಷೆ ಇತ್ಯಾದಿಗಳಿಗೆ ನೀವು ಬಂಧಿಸಲ್ಪಟ್ಟಿದ್ದೀರಿ. ಈ ಎಲ್ಲ ಬಂಧನಗಳನ್ನು ಕಿತ್ತೆಸೆಯಿರಿ, ಕೂಡಲೇ ನೀವು ಮೇಲಕ್ಕೆ ಹೋಗುವಿರಿ. ಹಸಿವಿನಿಂದ ಕಂಗೆಟ್ಟ ಮಗು ತಾಯಿಯ ಬಳಿಗೆ ಓಡಿಹೋಗುವಂತೆ ನೀವು ದೇವರ ಮೇಲೆ ಪ್ರೀತಿಯನ್ನು ವೃದ್ಧಿಗೊಳಿಸುತ್ತ ಹೋಗಬೇಕು. ಆಗ ನೀವು ದೇವರ ಬಳಿಗೆ ಓಡಿಹೋಗುವಿರಿ; ಅವನನ್ನು ಕಂಡುಕೊಳ್ಳುವಿರಿ. ಆಗ ಏನಾಗುವುದು? ಇಡೀ ಪ್ರಪಂಚದಲ್ಲಿ ನೀವೇ ಅತ್ಯಂತ ಸುಖಿಗಳಾಗುವಿರಿ. ನೀವು ಚಿಕ್ಕ ಮಗುವಿನಂತಾಗುವಿರಿ. ತಾಯಿ, ತಂದೆಯರು ತಮ್ಮ ಮಗುವಿನ ಗುಲಾಮರಂತೆ. ಮಗು ಯಾವುದೇ ಗಮನವಿಲ್ಲದೆ ಜವಾಬ್ದಾರಿಯಿಲ್ಲದೆ, ಎಲ್ಲಿಗೆ ಬೇಕಾದರೂ ಓಡಾಡಬಹುದು; ಆದರೆ ಹೆತ್ತವರು ಅದನ್ನು ನೋಡಿಕೊಳ್ಳಬೇಕಾಗುವುದು. ಅಂತೆಯೇ ನೀವು ಭಗವಂತನ ಮಗುವಾದರೆ, ನೀವು ದೇವರಿಗಿಂತಲೂ ಹೆಚ್ಚಿನ ಆನಂದವನ್ನು ಹೊಂದುವಿರಿ.

ಇನ್ನೊಂದು ಮಾರ್ಗವಿದೆ – ಅದೇ ವಿಚಾರಮಾರ್ಗ. ಆದರೆ ಇದು ಅತ್ಯಂತ ಕಠಿಣ. ಕೆಲವೇ ಬುದ್ಧಿಶಾಲಿಗಳು ಈ ಮಾರ್ಗವನ್ನು ಅನುಸರಿಸಬಲ್ಲರು. ಎಲ್ಲರೂ ಉಪದೇಶಿಸಿರುವುದು ಭಕ್ತಿಯನ್ನು. ಕ್ರಿಸ್ತ, ಮಹಮ್ಮದ್ ಎಲ್ಲರೂ ಭಕ್ತಿಮಾರ್ಗವನ್ನೇ ಉಪದೇಶಿಸಿದ್ದಾರೆ. ಕೆಲವರು ಮಾತ್ರ ಜ್ಞಾನಮಾರ್ಗವನ್ನು ಉಪದೇಸಿದ್ದಾರೆ — ಬುದ್ಧ ಹಾಗೂ ಶಂಕರ. ಬುದ್ಧನು ಶುದ್ಧ ಜ್ಞಾನವನ್ನು ಬೋಧಿಸಿದ. ಅವನು ಬೋಧಿಸಿದ್ದು ಎಷ್ಟೊಂದು ಕಷ್ಟವಾದದ್ದೆಂದರೆ, ಕೆಲವರು ಮಾತ್ರವೇ ಅದನ್ನು ಅರ್ಥಮಾಡಿಕೊಳ್ಳಬಲ್ಲರು. ಬುದ್ಧನು ತೀರಿಕೊಂಡ ಬಳಿಕ ಎಲ್ಲರೂ ಅವನ ಬೋಧನೆಗಳನ್ನು ತಪ್ಪಾಗಿ ಅರ್ಥಮಾಡಿಕೊಂಡರು. ಶಂಕರರು ಖಚಿತವಾದ ಮಾರ್ಗವನ್ನು ಉಪದೇಶಿಸಿದರು. ಮೊದಲು ನಿಮ್ಮ ಮನಸ್ಸನ್ನು ನೀವು ಶುದ್ಧೀಕರಿಸಿಕೊಳ್ಳಬೇಕು ಎಂದು ಅವರು ಹೇಳುತ್ತಾರೆ. ಹೀಗೆ ಮಾಡಲು ನಾಲ್ಕು ವಿಧಾನಗಳಿವೆ: ಸತ್ಯ ಮತ್ತು ಅಸತ್ಯವನ್ನು ವಿವೇಚಿಸಿ ತಿಳಿದು, ಎರಡನ್ನೂ ಪ್ರತ್ಯೇಕಿಸುವುದು. ವಿಜ್ಞಾನದ ಮೂಲಕ ಹಾಗೂ ಇತರ ಗ್ರಂಥಗಳ ಅಧ್ಯಯನದಿಂದ ಇದನ್ನು ಮಾಡಬಹುದು. ಆದರೆ ಆಧುನಿಕ ವಿಜ್ಞಾನ ನಿಮಗೆ ಇದನ್ನು ನೀಡಲಾರದು. ನೀವು ವೈದಿಕ ವಿಜ್ಞಾನವನ್ನು ಅಧ್ಯಯನ ಮಾಡಿ ಜಡವಸ್ತುವಿನಿಂದ ಆತ್ಮನನ್ನು ಬೇರ್ಪಡಿಸಲು ಕಲಿಯಬೇಕು. ಎರಡನೆಯದಾಗಿ, ಪ್ರಾಪಂಚಿಕ ಸುಖವನ್ನು ತ್ಯಜಿಸಬೇಕು. ನೀವು ಇಂದ್ರಿಯಗಳನ್ನು ನಿಗ್ರಹಿಸಬೇಕು. ಎಲ್ಲ ಬಗೆಯ ಕಷ್ಟಗಳನ್ನೂ ಸಹಿಸುತ್ತ, ಅವುಗಳ ನಿವಾರಣೆಗೆ ಗಮನ ಕೊಡಬಾರದು. ಪ್ರಾಪಂಚಿಕ ಸುಖಗಳ ಕಡೆಗೆ ಸತ್ತವರಂತಿರಬೇಕು. ಶಾಸ್ತ್ರಗಳ ಮೇಲೆ ಹಾಗೂ ಶಾಸ್ತ್ರಗಳನ್ನು ವಿವರಿಸಬಲ್ಲರ ಮೇಲೆ ನಿಮಗೆ

ಶ್ರದ್ಧೆಯಿರಬೇಕು. ಈ ಪ್ರಪಂಚವನ್ನು ನಿಮ್ಮ ಮನೆಯೆಂದು ಭಾವಿಸಬಾರದು. ನೀವು ಚೈತನ್ಯವಾಗಿದ್ದೀರಿ; ಚೈತನ್ಯದ ಧಾಮಕ್ಕೆ ಮರಳುವ ದಾರಿಯನ್ನು ನೀವು ಅರಸಬೇಕು.

ನಿಜವಾದ ಧರ್ಮವು ಸ್ವರ್ಗಕ್ಕೆ ಹೋಗುವ ದಾರಿಯನ್ನು ಕಲಿಸುವುದಿಲ್ಲ; ದೇವರ ಬಳಿಗೆ ಹೋಗುವ ದಾರಿಯನ್ನು ಕಲಿಸುತ್ತದೆ. ಹೀಗೆ ಮಾಡಲು ಈ ಅಲ್ಪ ಆತ್ಮನನ್ನು ತ್ಯಜಿಸಿ, ಅನಂತ ಆತ್ಮವನ್ನು ಕಂಡುಕೊಳ್ಳಬೇಕು. ಈ ಅನಂತ ಆತ್ಮವೇ ದೇವರು. ಮಾನವನು ಇಂದ್ರಿಯಸುಖವನ್ನು ಅರಸಬಾರದು; ದೇವರ ಬಳಿಗೆ ಅವನನ್ನು ಕರೆದೊಯ್ಯುವ ಮಾರ್ಗವನ್ನು ಅರಸಬೇಕು. ಎಲ್ಲ ಮಾನವರಲ್ಲೂ ಇಂದ್ರಿಯಸುಖದ ಬಯಕೆ ಸಹಜವಾಗಿಯೇ ಇರುವುದು. ಆದರೆ ಇದು ಮೃಗೀಯ ಬಯಕೆಯಾಗಿರಬಾರದು. ಆಸೆಯೆಂಬುದು ಒಳಿತೇ; ಆದರೆ ಅದು ತಪ್ಪು ದಾರಿ ಹಿಡಿಯಬಾರದು ಅಷ್ಟೆ. ನಮ್ಮ ಆರೋಗ್ಯವನ್ನು ನಾವು ಚೆನ್ನಾಗಿ ಕಾಪಾಡಿಕೊಳ್ಳಬೇಕು. ಏಕೆಂದರೆ, ಈ ದೇಹದ ಮೂಲಕ ನಾವು ದೇವರನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ನಾನೇಕೆ ಊಟ ಮಾಡಬೇಕು? ನಾನೇಕೆ ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸಬೇಕು? ಈ ಕಾರ್ಯಗಳು ನನ್ನ ದೇಹವನ್ನು ಕಾಪಾಡುವುವು; ಈ ಮೂಲಕ ನಾನು ದೇವರನ್ನು ಸಾಕ್ಷಾತ್ಕರಿಸಿಕೊಳ್ಳಬಲ್ಲೆ. ಈ ಕಣ್ಣುಗಳನ್ನು ನಾನೇಕೆ ಕಾಪಾಡಿಕೊಳ್ಳಬೇಕು? — ಭಗವಂತನ ಅನನ್ಯ ಸೌಂದರ್ಯವನ್ನು ಕಾಣುವುದಕ್ಕಾಗಿ.

ಪ್ರತಿಯೊಬ್ಬ ಜೀವಾತ್ಮನ ಕರ್ತವ್ಯವೇನು? ಪ್ರತಿಯೊಬ್ಬ ಮಾನವನ ಕರ್ತವ್ಯವೆಂದರೆ ಒಬ್ಬ ಕೆಲಸಗಾರನಾಗುವುದೆ? ಅಲ್ಲ; ಪ್ರತಿಯೊಬ್ಬನೂ ಸತ್ಯವನ್ನು ಕಂಡುಕೊಳ್ಳಲು ಹೋರಾಡಬೇಕು. ಸತ್ಯವನ್ನು ಕಂಡವರು ಆ ಸತ್ಯವು ಎರಡಿಲ್ಲದೆ ಏಕವೆಂದರು. ಮಾನವನ ಅಂತರಂಗದಲ್ಲಿ ನಿಜವಾದ ದೇಗುಲವಿದೆ. ಪಂಚ ಕೋಶಗಳೇ ಈ ದೇಗುಲದ ಐದು ಗೋಡೆಗಳು. ಹೃದಯವೇ ಗರ್ಭಗೃಹ. ಅಲ್ಲಿಯೇ ಭಗವಂತನು ನೆಲೆಸಿದ್ದಾನೆ. ಪ್ರತಿಯೊಬ್ಬ ಮಾನವನ ಗುರಿ ಹಾಗೂ ಮಾರ್ಗ ಎರಡೂ ಭಗವಂತನ ಸಾಕ್ಷಾತ್ಕಾರವೇ ಆಗಿರಬೇಕು. ಆದರೆ ಅವನ ಹಾಗೂ ಸತ್ಯದ ನಡುವೆ ಒಂದು ದೊಡ್ಡ ತಡೆಗೋಡೆಯಿದೆ. ಅದೇನು? ಅದೇ, ಮನಸ್ಸು. ಈ ತಡೆಗೋಡೆಯನ್ನು ನಿವಾರಿಸಲು ನಾವು ಮನಸ್ಸನ್ನು ಶುದ್ಧಗೊಳಿಸಬೇಕು. ತಪಸ್ಸಿನಿಂದ ಹಾಗೂ ಮನಶ್ಶುದ್ಧಿಯಿಂದ ಈ ತಡೆಗೋಡೆ ನಾಶವಾಗುವುದು; ಪರಮ ಸತ್ಯದ ಪ್ರತ್ಯಕ್ಷ ದರ್ಶನವಾಗುವುದು. ಆಗಲೇ ಅವನಿಗೆ ಶಾಶ್ವತವಾದ ಶಾಂತಿ ಹಾಗೂ ಆನಂದ ಲಭಿಸುವುದು.

ನಾವಿಬ್ಬರೂ ಎಚ್ಚರವಾಗಿರಬೇಕೆ?

ಅದೊಂದು ಗೊಂಡಾರಣ್ಯವಾಗಿತ್ತು. ಕತ್ತಲು ಬೇರೆ. ಆಗಸದಲ್ಲೆಲ್ಲ ಮೋಡ ಆವರಿಸಿಕೊಂಡಿದೆ; ಭೀಕರ ಮೃಗಗಳ, ಜಂತುಗಳ ಕೂಗುಗಳು ಹೆದರಿಸುವಂತಿದೆ. ಒಂದು ಹೆಜ್ಜೆ ಮುಂದಿಡಲೂ ಸಾಧ್ಯವಾಗದಂತೆ ದಟ್ಟ ಮರಗಳ, ಮುಳ್ಳು, ಬಳ್ಳಿ, ಪೊದರುಗಳ ನಡುವೆ ದಾರಿ ಕಾಣಿಸುತ್ತಿರಲಿಲ್ಲ. ಒಬ್ಬಂಟಿಯಾಗಿ ಅಲ್ಲೊಬ್ಬ ದಾರಿಹೋಕ ಸಿಕ್ಕುಹಾಕಿಕೊಂಡಿದ್ದ. ದಟ್ಟ ಅರಣ್ಯವನ್ನು ಹಾದು ಹೋಗಬೇಕಿದ್ದವನು, ಈಗ ಭಯಭೀತನಾದ.

''ಕಾಡು ಬಹಳ ಭಯಾನಕವಾಗಿದೆ. ಆದಷ್ಟು ಬೇಗ ನಡೆದು ದಾಟಿಬಿಡು. ಕತ್ತಲಲ್ಲಿ ಕಾಡಿನ ಮಧ್ಯೆ ಉಳಿದುಬಿಡಬೇಡ'' ಎಂದು ಹಳ್ಳಿಯ ಜನರು ಎಚ್ಚರಿಸಿದ್ದರು. ಕ್ರೂರ ಪ್ರಾಣಿಗಳಿಂದ ಕೂಡಿದ ಕಾಡಿನಲ್ಲಿ ರಾತ್ರಿ ಉಳಿಯುವುದು ಖಂಡಿತ ಸುರಕ್ಷಿತವಲ್ಲ ಎಂದು ಅವರು ಹೇಳಿದ್ದರು. ಆದರೂ ದಾರಿಹೋಕನಿಗೆ ಕಾಡನ್ನು ಹಾದುಹೋಗುವುದು ಸಾಧ್ಯವಾಗಲಿಲ್ಲ.

ದಿನವಿಡೀ ನಡೆದು ಬಸವಳಿದಿದ್ದ ಅವನು ರಾತ್ರಿಹೊತ್ತು ಕಾಡಿನ ನಡುವೆ ಎತ್ತ ಹೋಗಬೇಕೋ ಗೊತ್ತಾಗದೆ, ಭಯದಿಂದ ಕಂಗೆಟ್ಟಿದ್ದ. ಆಯಾಸದಿಂದ ನಿದ್ದೆ ಕೊಲ್ಲುತ್ತಿದೆ. ಏನು ಮಾಡಲಿ? ನೆಲದಲ್ಲಿ ಕುಸಿದು ಕುಳಿತು ದೇವರನ್ನು ಕುರಿತು ಪ್ರಾರ್ಥಿಸತೊಡಗಿದ: ''ದೇವರೇ, ಇನ್ನೊಂದು ಕ್ಷಣವೂ ನಾನು ಎಚ್ಚೆತ್ತಿರಲಾರೆ. ನೀನಾದರೋ ಯಾವಾಗಲೂ ಎಚ್ಚರವಾಗಿಯೇ ಇರುವವನು. ನಾವಿಬ್ಬರೂ ಎಚ್ಚರವಾಗಿ ಇರುವ ಅಗತ್ಯವಾದರೂ ಏನಿದೆ?'' ಹೀಗೆಂದ ಅವನು ಅಲ್ಲೇ ಮಲಗಿ ನಿದ್ರಿಸತೊಡಗಿದ.

ಅವನಿಗೆ ಎಚ್ಚರವಾದಾಗ ಅವನ ಮುಖದ ಮೇಲೆ ಬಿಸಿಲು ಬಡಿಯುತ್ತಿತ್ತು. ಪಕ್ಕದಲ್ಲೇ ಒಬ್ಬ ಕೋವಿಯೊಂದಿಗೆ ಕಾವಲು ನಿಂತಿದ್ದ. ''ನೀವು ಯಾರು ಸ್ವಾಮಿ? ಯಾರೂ ಇಲ್ಲದ ಕಾಡಿನ ಮಧ್ಯೆ ನಾನು ನಿದ್ದೆ ಮಾಡುತ್ತಿರುವಾಗ, ನೀವು ಹೇಗಾದರೂ ಇಲ್ಲಿಗೆ ಬಂದಿರಿ?'' – ಆಶ್ಚರ್ಯದಿಂದ ಕೇಳಿದ ದಾರಿಹೋಕ. ಆ ವ್ಯಕ್ತಿ, ''ನಿನ್ನೆ ನಾನು ಈ ಕಾಡಿನ ಮೂಲಕ ಹಾದುಹೋಗುತ್ತಿದ್ದೆ. ಇಲ್ಲಿ ನೋಡಿದರೆ ನೀವು ಗಾಢ ನಿದ್ರೆಯಲ್ಲಿ ಮುಳುಗಿದ್ದಿರಿ. ನಿಮಗೆ ಬಹುಶಃ ಈ ಸ್ಥಳ ಎಷ್ಟು ಭಯಂಕರವೆಂದು ಗೊತ್ತಿಲ್ಲ. ಆದ್ದರಿಂದ ನಾನು ಇಲ್ಲೇ ಕಾವಲು ನಿಂತೆ'' ಎಂದ. ದಾರಿಹೋಕನಿಗೆ ವಿಸ್ಮಯವಾಯಿತು. ''ನಾವು ಎಲ್ಲಿದ್ದರೂ, ಏನು ಮಾಡುತ್ತಿದ್ದರೂ ದೇವರು ಸದಾ ನಮಗೆ ದಾರಿ ತೋರಿ, ರಕ್ಷಣೆ ನೀಡುತ್ತಾನಲ್ಲ!'' ಎಂದು ಅವನು ಉದ್ಗರಿಸಿದ.

(ಜೆ.ಪಿ.ವಾಸ್ವಾನಿಯವರ 'More Snacks for the Soul' ಗ್ರಂಥದಿಂದ)

ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಭಾಗ ೧೯

ಶ್ರೀಮಾತೆ : ನಾನಾ ಭಾವಗಳಲ್ಲಿ



॥ ೧ ॥

ಸುಪ್ರಸಿದ್ಧ ನಟಿಯರಾದ ತಿನ್‌ಕರಿ ಹಾಗೂ ತಾರಾ ಸುಂದರಿ ಇಬ್ಬರೂ ಕೆಲವೊಮ್ಮೆ ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಬರುತ್ತಿದ್ದರು. ಎಂದಿಗೂ ಅವರು ದೇವಾಲಯವನ್ನು ಪ್ರವೇಶಿಸುತ್ತಿರಲಿಲ್ಲ , ಅಥವಾ ಶ್ರೀಮಾತೆಯವರ ಪಾದಸ್ಪರ್ಶ ಮಾಡಿ ಪ್ರಣಾಮ ಮಾಡುತ್ತಿರಲಿಲ್ಲ. ದೇವಾಲಯದ ಹೊರಗಿನಿಂದಲೇ ಕೊರಳಲ್ಲಿ ವಸ್ತ್ರವನ್ನು ಸುತ್ತಿ ಠಾಕೂರರಿಗೆ ಹಾಗೂ ಶ್ರೀಮಾತೆಗೆ ಪ್ರಣಾಮ ಮಾಡುತ್ತಿದ್ದರು. ಶ್ರೀಮಾತೆ ಕೂಡ ಅವರಿಗೆ ಪ್ರಸಾದ ಸ್ವೀಕರಿಸಲು ಹೇಳುತ್ತಿದ್ದರು. ಊಟವಾದ ನಂತರ ಶ್ರೀಮಾತೆ ತಮ್ಮ ಕೈಯಿಂದಲೇ ಅವರಿಗೆ ತಾಂಬೂಲ ನೀಡುತ್ತಿದ್ದರು. ಅದನ್ನು ಅವರು ಬಾಯಿಗೆ ಸ್ಪರ್ಶಿಸದೆ ತಿನ್ನುತ್ತಿದ್ದರು. ಇದನ್ನೆಲ್ಲ ನೋಡಿ ಶ್ರೀಮಾತೆ ಒಂದು ದಿನ, ಅವರು ಹೊರಟು ಹೋದ ಮೇಲೆ, ''ಇವರದೇ ನಿಜವಾದ ಭಕ್ತಿ. ಭಗವಂತನನ್ನು ಎಷ್ಟು ಪ್ರಾರ್ಥಿಸುತ್ತಾರೋ ಅದನ್ನು ಒಂದೇ ಮನಸ್ಸಿನಿಂದ ಮಾಡುತ್ತಾರೆ. ಆಹಾ!'' ಎಂದರು.

॥ ೨ ॥

ಠಾಕೂರರ ಹಳೆಯ ಗೃಹೀ ಭಕ್ತರೊಬ್ಬರು ಒಮ್ಮೆ ಶ್ರೀಮಾತೆಯವರ ಬಳಿಗೆ ಬಂದು, ಒಬ್ಬ ಆತ್ಮೀಯನಾಗಿದ್ದ ಯುವಕನೊಬ್ಬನ ಚಾರಿತ್ರ್ಯ ಕೆಟ್ಟುಹೋಗಿರುವ ವಿಷಯವನ್ನು ಕುರಿತು ದೂರಿದರು. ಅವನನ್ನು ಅವರು ತಮ್ಮ ಬಳಿಗೆ ಬರಗೊಡಬಾರದೆಂದೂ ಹೇಳಿದರು. ಆ ಯುವಕ ಶ್ರೀಮಾತೆಯವರ ಶಿಷ್ಯನಾಗಿದ್ದ. ದೂರನ್ನು ಕೇಳಿದ ಶ್ರೀಮಾತೆ, ''ನನ್ನ ಬಳಿಗೆ ಬಾರದೆ ಹೋದರೆ, ಇನ್ನಾರ ಬಳಿಗೆ ಅವನು ಹೋಗುತ್ತಾನೆ? ನಾನು ಕೇವಲ ಒಳ್ಳೆಯವರ ತಾಯಿ ಮಾತ್ರವೆ? ಕೆಟ್ಟವರ ತಾಯಿಯೂ ಅಲ್ಲವೆ?'' ಎಂದರು.

॥ ೩ ॥

ಒಬ್ಬಾಕೆ ಕೆಟ್ಟ ಚಾರಿತ್ರ್ಯವುಳ್ಳ ಹೆಂಗಸು ಶ್ರೀಮಾತೆಯವರ ಬಳಿಗೆ ಆಗಾಗ ಹೋಗುತ್ತಿದ್ದಳು. ಅದನ್ನು ನೋಡಿ ಹಲವು ಮಂದಿ ಭಕ್ತರು ಹಾಗೂ ಭಕ್ತೆಯರು ಅಸಮಾಧಾನಗೊಂಡರು. ಅಷ್ಟೇಕೆ, ಒಂದು ದಿನ ಶ್ರೀರಾಮಕೃಷ್ಣರ ಹಳೆಯ ಭಕ್ತನೊಬ್ಬನ ಪತ್ನಿ[೧] ಕೂಡ ಶ್ರೀಮಾತೆಯವರಿಗೆ ಈ ವಿಷಯವಾಗಿ ದೂರಿದಳು. ಆದರೆ ಶ್ರೀಮಾತೆ ಹಿಂದೆ ಹೇಳಿದಂತೆ, ಅದೇ ಭಾವದಲ್ಲಿ ಉತ್ತರವಿತ್ತರು: ''ನಾನು ಕೇವಲ ಒಳ್ಳೆಯವರ ತಾಯಿಯೆ? ಕೆಟ್ಟವರ ತಾಯಿಯಲ್ಲವೆ?'' ಆ ಹೆಂಗಸು ಶ್ರೀಮಾತೆಯವರ ಶಿಷ್ಯೆಯಾಗಿರಲಿಲ್ಲ, 'ಗೋಪಾಲೇರ್ ಮಾ'ರ ಶಿಷ್ಯೆಯಾಗಿದ್ದಳು.

॥ ೪ ॥

ಶ್ರೀಮಾತೆ ಹಾಸ್ಯ, ಯುಕ್ತಿಗಳಲ್ಲಿ ವಿಶೇಷ ಪರಿಣತರಾಗಿದ್ದರು. ಎರಡು ಕಥೆಗಳನ್ನು ಅವಲಂಬಿಸಿ, ಒಂದೇ ಸಮಯದಲ್ಲಿ ಹೇಗೆ ಕಣ್ಣಿಗೆ ಕಟ್ಟುವಂತೆ, ಕೈ, ತಲೆ ಎಲ್ಲವನ್ನೂ ಅಲ್ಲಾಡಿಸಿ

೧ ಬಲರಾಮ ಬಸುವಿನ ಪತ್ನಿ, ಕೃಷ್ಣಭಾವಿನೀ ಬಸು. *(-ಸಂ)*

ವರ್ಣಿಸುತ್ತಿದ್ದರೆಂದರೆ, ಅವರು ನಿಜವಾಗಿಯೂ ಅಭಿನಯಿಸುತ್ತಿದ್ದಾರೆಂದೇ ಅನ್ನಿಸುತ್ತಿತ್ತು. ಆದರೆ ಹೀಗೆ ಮಾಡುತ್ತ ಇದ್ದಕ್ಕಿದ್ದಂತೆ ಗಂಭೀರ ಭಾವ ತಾಳಿ ಹೇಳುತ್ತಿದ್ದರು: ''ನನ್ನ ಶಿಷ್ಯರು ಎಂದಿಗೂ ಹೀಗಾಗಬಾರದು. ನೇಡ ನೇಡಿಯರ ಗುಂಪನ್ನು ರಚಿಸಲು ಹೋಗಿ ಮದುವೆ ಮಾಡಿಕೊಂಡುಬಿಟ್ಟರು. ನನ್ನ ಅನುಮತಿಯೇನೋ ಇತ್ತು.'' ಈ ಇಬ್ಬರ ನಡುವೆ ಒಬ್ಬ ಯಾವಾಗಲೋ ಒಮ್ಮೆ ಶ್ರೀಮಾತೆಗೆ ಪ್ರಣಾಮ ಮಾಡಲು ಬರುತ್ತಿದ್ದ. ಶ್ರೀಮಾತೆ ಕೆಲವೇ ಮಂದಿ ಅಂತರಂಗದ ಶಿಷ್ಯರನ್ನು ಬಿಟ್ಟರೆ ಉಳಿದವರ ಮುಂದೆ, ತಮ್ಮ ಸಂಪೂರ್ಣ ದೇಹವನ್ನು ಉತ್ತರೀಯದಿಂದ ಆವರಿಸಿಕೊಂಡು ನಿಂತು ಅವರ ಪ್ರಣಾಮವನ್ನು ಸ್ವೀಕರಿಸುತ್ತಿದ್ದರು. ಇಲ್ಲೂ ಅವರು ಹಾಗೆಯೇ ಮಾಡಿದರು. ಆ ವ್ಯಕ್ತಿ ಪ್ರಣಾಮ ಮಾಡಿ ಹೊರಟು ಹೋದ ಮೇಲೆ ನಾವು ಅನೇಕ ಸಲ ಗಮನಿಸಿದ್ದೆವು, ಶ್ರೀಮಾತೆ ತಮ್ಮ ಉತ್ತರೀಯ ಹಾಗೂ ಬಟ್ಟೆಬರೆಯ ಮೇಲೆ ಗಂಗಾಜಲ ಸಿಂಪಡಿಸುತ್ತಿದ್ದರು, ಅನಂತರ ತಮ್ಮ ಪಾದಗಳನ್ನು ಗಂಗಾಜಲದಲ್ಲಿ ತೊಳೆಯುತ್ತಿದ್ದರು.

॥ ೫ ॥

ಒಬ್ಬಾಕೆ ಮಧ್ಯವಯಸ್ಕಳಾದ ವಿಧವೆ ಶ್ರೀಮಾತೆಯವರ ಬಳಿಗೆ ಪ್ರತಿದಿನವೂ ಬರುತ್ತಿದ್ದಳು. ಅವಳನ್ನು ಕುರಿತು ಶ್ರೀಮಾತೆ ಹೇಳುತ್ತಿದ್ದರು: ''ಅವಳೊಬ್ಬಳು ಪ್ರತ್ಯೇಕವಾಗಿರುವ ವ್ಯಕ್ತಿ. ಒಬ್ಬ ನಲ್ಲ ಒಬ್ಬ ಗಂಡಸನ್ನು ಆಶ್ರಯಿಸಿಕೊಂಡೇ ಇರಬಯಸುತ್ತಾಳೆ. ಬಹುಶಃ ಕಾಮಾಖ್ಯಕ್ಕೆ ಹೋಗಿ ಕೌಲ ಮತದವರನ್ನು ಮದುವೆ ಮಾಡಿಕೊಂಡು ಬಂದಿರಬೇಕು.''

॥ ೬ ॥

ಸಣ್ಣ ವಯಸ್ಸಿನ ಒಬ್ಬಾಕೆ ವಿಧವೆ ಶ್ರೀಮಾತೆಯವರ ಬಳಿಗೆ ಬರುತ್ತಿದ್ದಳು. ಕೆಲವೊಮ್ಮೆ ಅವಳು ಮೂರು ನಾಲ್ಕು ದಿನ ಅವರೊಂದಿಗೆ ಇದ್ದು ಹೋಗುತ್ತಿದ್ದಳು. ಹಾಗೆ ಅವಳು ಅಲ್ಲಿದ್ದಾಗ ಶ್ರೀಮಾತೆ ಯಾವಾಗಲೂ ತುಂಬಾ ತೊಂದರೆಗೊಳಗಾಗುತ್ತಿದ್ದರು. ಆಕೆ ಶ್ರೀಮಾತೆಯವರ ಶಿಷ್ಯೆ. ಶ್ರೀಮಾತೆ ಆಕೆಗೆ ತುಂಬಾ ಉಪದೇಶ ನೀಡುತ್ತಿದ್ದರು. ಅವರು ಹೇಳುತ್ತಿದ್ದರು, ''ನೋಡಮ್ಮಾ, ನನ್ನ ಹೆಸರನ್ನು ಮುಳುಗಿಸಬೇಡ. ಶಿಷ್ಯರು ಮಾಡಿದ ಪಾಪ ಗುರುವನ್ನು ತಗಲುತ್ತದೆ. ತುಂಬ ಎಚ್ಚರಿಕೆಯಿಂದಿರು. ಪುರುಷರು ಯಾರೇ ಆಗಿರಲಿ, ಯಾರನ್ನೂ ನಂಬಬೇಡ. ಪುರುಷರ ಕಡೆಗೆ ಒಂದು ಸಲವೂ ನೋಡಬೇಡ. ನಿನ್ನ ಧ್ಯಾನ-ಜಪಗಳಲ್ಲೇ ದಿನವನ್ನೆಲ್ಲ ಕಳೆ.''

॥ ೭ ॥

ರಾಖಾಲ್ ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು) ಅಥವಾ ಬಾಬುರಾಮ್ ಮಹಾರಾಜ್ (ಸ್ವಾಮಿ ಪ್ರೇಮಾನಂದರು) ಪ್ರಣಾಮ ಮಾಡಿದಾಗ ಶ್ರೀಮಾತೆ ಉತ್ತರೀಯದಿಂದ ಬಲಗೈಯನ್ನು ಹೊರಚಾಚಿ ಆಶೀರ್ವಾದ ಮಾಡುತ್ತಿದ್ದರು. ಸ್ವಾಮೀಜಿ, ನಾಗಮಹಾಶಯ, ಗಿರೀಶಬಾಬು ಅಥವಾ ಮಾಸ್ಟರ್ ಮಹಾಶಯ ಇವರು ಪ್ರಣಾಮ ಮಾಡಿದರೆ, ಉತ್ತರೀಯದ ಒಳಗಿನಿಂದ ಶ್ರೀಮಾತೆ ಪ್ರತಿನಮಸ್ಕಾರ ಮಾಡುತ್ತಿದ್ದರು. ಶ್ರೀಮಾತೆ ನಾಗಮಹಾಶಯರೊಂದಿಗೆ ಮಾತುಕತೆ ಆಡುತ್ತಿದ್ದರು.

॥ ೮ ॥

ಶ್ರೀಮಾತೆ ತನ್ನ ಶಿಷ್ಯಂದಿರಲ್ಲಿ ಕೆಲವರ ಹಣೆಯ ಮೇಲೆ ಕೈಯಿಟ್ಟು ಆಶೀರ್ವಾದ ಮಾಡುತ್ತಿದ್ದರು, ಕೆಲವರ ಕೆನ್ನೆಯ ಮೇಲೆ ಕೈಯಿಟ್ಟು ಚುಂಬಿಸುತ್ತಿದ್ದರು. ಬೆರಳೆಣಿಕೆಯಷ್ಟು ಅಂತರಂಗ ಶಿಷ್ಯಂದಿರ ಎದೆಯ ಮೇಲೆ ಹಾಗೂ ಹಣೆಯ ಮೇಲೆ ಜಪ ಮಾಡುತ್ತಿದ್ದರು. ಒಂದೆರಡು ಬಾರಿ ಹಿಂಭಾಗದಲ್ಲಿ ಕೈಯಾಡಿಸಿ ''ಕುಂಡಲಿನಿ, ಎದ್ದೇಳು'' ಎಂದು ಹೇಳಿ ಆಶೀರ್ವಾದ ಮಾಡಿದ್ದರು.

॥ ೯ ॥

ಮೂರು ಮಂದಿ ಶಿಷ್ಯಂದಿರಿಗೆ ದೀಕ್ಷೆ ನೀಡುವ ಅಧಿಕಾರ ನೀಡಿದ್ದರು ಎಂದು ನಮಗೆ ತಿಳಿದಿದೆ. ಮೊದಲನೆಯವರು ಕಾಳೀಕೃಷ್ಣ ಮಹಾರಾಜ್ (ಸ್ವಾಮಿ ವಿರಜಾನಂದ), ಎರಡನೆಯವರು ಸುಶೀಲ್ ಮಹಾರಾಜ್ (ಸ್ವಾಮಿ ಪ್ರಕಾಶಾನಂದ) ಹಾಗೂ ಮೂರನೆಯವರ ಹೆಸರನ್ನು ಪ್ರಕಟಗೊಳಿಸಲು ನಮ್ಮ ಮೇಲೆ ನಿಷೇಧವಿದೆ. ಮೊದಲನೆಯ ಇಬ್ಬರಿಗೂ ಒಂದೇ ಬಗೆಯ ಬೀಜಸಹಿತವಾದ ಮಂತ್ರ ಕೊಟ್ಟಿದ್ದರು. ಮೂರನೆಯವರಿಗೆ ಅದಕ್ಕಿಂತ ಬೇರೆಯದಾದ ಬೀಜಸಹಿತ ಮಂತ್ರವನ್ನು ಕೊಟ್ಟಿದ್ದರು. ಅದನ್ನು ಶ್ರೀರಾಮಕೃಷ್ಣರು ಶ್ರೀಮಾತೆಯವರಿಗೆ ಕಲಿಸಿರಲಿಲ್ಲ.

॥ ೧೦ ॥

ಶ್ರೀರಾಮಕೃಷ್ಣರಿಗೆ ನಾಣ್ಯವನ್ನು ಸ್ಪರ್ಶಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂದು ಕೇಳಿದ್ದೇವೆ. ಅವರಿಲ್ಲದಾಗ ಅವರ ಹಾಸಿಗೆಯ ಕೆಳಗೆ ನಾಣ್ಯವನ್ನು ಇಟ್ಟರೂ, ಆ ಹಾಸಿಗೆಯನ್ನು ಅವರಿಗೆ ಸ್ಪರ್ಶ ಮಾಡಲಾಗುತ್ತಿರಲಿಲ್ಲ. ಲೋಹವನ್ನು ಸ್ಪರ್ಶಿಸಹೊರಟರೆ ಅವರ ಕೈಯಲ್ಲಿ ಸಿಂಗಿ ಮೀನಿನ ಮುಳ್ಳನ್ನು ಮುರಿಯುವ ಹಾಗೆ, ಒಂದು ಬಗೆಯಲ್ಲಿ ನೋವನ್ನು ಅನುಭವಿಸುತ್ತಿದ್ದರು. ಅವರ ಕೈ ಮುರುಟುತ್ತಿತ್ತು. ಶ್ರೀಮಾತೆಯವರನ್ನು ನಾವು ಬೇರೆ ರೀತಿಯಲ್ಲಿ ನೋಡಿದ್ದೇವೆ. ಅವರು ನಾಣ್ಯ ಅಥವಾ ಆಭರಣವನ್ನು ಕೈಗೆ ತೆಗೆದುಕೊಂಡಾಗಲೆಲ್ಲ ಅದನ್ನು ತನ್ನ ಹಣೆಗೆ ಮುಟ್ಟಿಸಿಕೊಳ್ಳುತ್ತಿದ್ದರು. ಅವುಗಳನ್ನು ಯಾರಿಗಾದರೂ ಕೊಡುವಾಗ, ಅಥವಾ ಯಾರಿಂದಲಾದರೂ ತೆಗೆದುಕೊಳ್ಳುವಾಗಲೂ ಅವರು ಹೀಗೆಯೇ ಮಾಡುತ್ತಿದ್ದರು. ಈ ಬಗೆಯಲ್ಲಿ ಅವರಿಗೂ ಠಾಕೂರರಿಗೂ ಇದ್ದ ವ್ಯತ್ಯಾಸವನ್ನು ಕುರಿತು ಶ್ರೀಮಾತೆಯವರನ್ನು ಕೇಳಿದಾಗ ಅವರು

ಹೀಗೆಂದರು: ''ಠಾಕೂರ್ ಮತ್ತು ನಾನು! ಮಗೂ, ನಾನಾದರೋ ಹೆಣ್ಣು ಹೆಂಗಸು — ಠಾಕೂರರು ನನಗೆ ಚಿನ್ನದ ಆಭರಣವನ್ನೇ ಕೊಟ್ಟು ಅಲಂಕರಿಸಿದ್ದರು!''

॥ ೧೧ ॥

ನಾನು ಬಹಳ ಚಹಾ ಕುಡಿಯುತ್ತಿದ್ದೆ. ಶ್ರೀಮಾತೆ ನನಗೆ ಉಪದೇಶ ಕೊಟ್ಟರು: ''ಠಾಕೂರರು ಹೇಳುತ್ತಿದ್ದರು, 'ದೇಹವನ್ನು ಸಮಶೀತಲದಲ್ಲಿ ಇಡಬೇಕು' ಅಂತ. ಬರೀ ಉಷ್ಣವಿರುವ ವಸ್ತುವನ್ನು ಕುಡಿಯಬೇಕೆ? ಕಲ್ಲುಸಕ್ಕರೆ ಪಾನೀಯ, ಎಳನೀರು — ಇವನ್ನೆಲ್ಲ ಕುಡಿಯಬೇಕು.''

॥ ೧೨ ॥

ಬೇಲೂರು ಮಠದಲ್ಲಿ ಚಂಡೀಪಾರಾಯಣ (ದುರ್ಗಾಸಪ್ತಶತೀ ಪಾರಾಯಣ) ನಡೆಯುತ್ತಿತ್ತು. ಆದರೆ ಪಾರಾಯಣ ಸರಿಯಾಗಿ ನಡೆಯುತ್ತಿರಲಿಲ್ಲವೆಂದು ಶ್ರೀಮಾತೆ ಅದನ್ನು ನಿಲ್ಲಿಸಿಬಿಟ್ಟರು. ಅನಂತರ ಹರಿ ಮಹಾರಾಜರ (ಸ್ವಾಮಿ ತುರೀಯಾನಂದರ) ಪಾರಾಯಣವನ್ನು ಕೇಳಿ, ತಮ್ಮ ಮೊದಲಿನ ಆದೇಶವನ್ನು ಹಿಂದೆಗೆದುಕೊಂಡು ಹೇಳಿದರು, ''ಹರಿ ಓದಬಲ್ಲ.''

॥ ೧೩ ॥

ಠಾಕೂರರು ಹೇಳುತ್ತಿದ್ದರೆಂದು ಕೇಳಿದ್ದೆ: ''ಬಂಗಾಳಿ ಭಾಷೆಯಲ್ಲಿ ಅಕ್ಷರಗಳು ಒಂದೇ; ಹೆಚ್ಚೆಂದರೆ ಎರಡು ಇರುತ್ತವೆ. ಆದರೆ 'ಶ' ಅಕ್ಷರ ಮೂರು ಇವೆ - ಶ, ಷ, ಸ — ಇದರ ಅರ್ಥ, 'ಸಹಿಸು, ಸಹಿಸು, ಸಹಿಸು' ಅಂತ!'' ಶ್ರೀಮಾತೆ ಇದರ ಅರ್ಥವನ್ನು ಬೇರೆ ಉಪಮೆಯೊಂದಿಗೆ ವಿವರಿಸಿದ್ದನ್ನು ಕೇಳಿದ್ದೇನೆ. ಅವರು ಹೇಳುತ್ತಿದ್ದರು: ''ಪೃಥಿವಿಯಂತೆ ಸಹನೆಯ ಗುಣವನ್ನು ಹೊಂದಿರಬೇಕು.'' ಅವರು ವಿಷಾದದಿಂದ ವಿವರಣೆ ನೀಡುತ್ತಿದ್ದರು: ''ಪೃಥಿವಿಯ ಮೇಲೆ ಎಷ್ಟೊಂದು ಗಂಡಾಂತರ, ಎಷ್ಟೊಂದು ತೊಂದರೆ ಎಲ್ಲ ನಡೆಯುತ್ತವೆ; ಆದರೆ ಭೂಮಿ ಎಲ್ಲವನ್ನೂ ಒಂದೇ ರೀತಿ ಸಹಿಸಿಕೊಂಡು ಹೋಗುತ್ತಾಳೆ. ಮನುಷ್ಯರಿಗೆ ಈ ರೀತಿ ಸಹಿಸುವ ಗುಣ ಇರಬೇಕು.''

॥ ೧೪ ॥

ಶ್ರೀಮಾತೆ ತಮ್ಮ ಒಬ್ಬ ಸೇವಕನಿಗೆ ಬಟ್ಟೆಬರೆಗಳನ್ನು ಕೊಡಬಯಸಿದರು. ಆತ ಅದನ್ನು ಸ್ವೀಕರಿಸದೆ ಹೇಳಿದ, ''ಅಮ್ಮಾ, ನನ್ನ ಬಳಿ ಇದೆ. ನೀವು ಕೊಡಬೇಡಿ.'' ಕೆಲವು ದಿನಗಳ ನಂತರ ಒಂದು ಸಲ ಶ್ರೀಮಾತೆ ಆ ಸೇವಕನಿಗೆ ಹೇಳಿದರು. ''ನೀನೇಕೆ ಅದನ್ನು ತೆಗೆದುಕೊಳ್ಳುತ್ತಿಲ್ಲ ಅಂತ ಹೇಳಬೇಕು. — ನಿಗೆ ನಾನು ಎಷ್ಟೋ ಬಟ್ಟೆಬರೆ ಕೊಟ್ಟಿದ್ದೇನೆ. ಅವನು ಎಂದಿಗೂ 'ಬೇಡ' ಅಂತ ಹೇಳಿಲ್ಲ. ನಿನಗೆ ಒಂದನ್ನೇ ಕೊಡಬೇಕೆಂದರೂ ನೀನು ತೆಗೆದುಕೊಳ್ಳುತ್ತಿಲ್ಲ , ಏಕೆ?'' ಅದಕ್ಕೆ ಸೇವಕ ಉತ್ತರಿಸಿದ: ''ಭಕ್ತರು ನಿಮಗೆ ಕೊಡುವಾಗ ನೀವೇ ಅದನ್ನು ಬಳಸಬೇಕೆಂದು ಕೊಡುತ್ತಾರೆ. ಅದನ್ನು ನಾನು ಸ್ವೀಕರಿಸಬಹುದೆ? ಆಮೇಲೆ, ಇಲ್ಲಿ ನಿಮಗೆ ಅವೆಲ್ಲ ಸಿಗುತ್ತದೆ, ಹಳ್ಳಿಯಲ್ಲಿ ಸಿಗಲಾರದು; ಅಲ್ಲಿಗೆ ಹೋದರೆ, ಅವರಿಗೆ ಇವರಿಗೆ ಹೇಳಿದರೆ ಮಾತ್ರ ಕೊಡುತ್ತಾರೆ. ಕೊನೆಗೆ ಪೆಟ್ಟಿಗೆಯಲ್ಲಿ ಒಂದು ವಸ್ತ್ರವೂ ಉಳಿದಿರುವುದಿಲ್ಲ, ನಾನು ನೋಡಿದ್ದೇನೆ. ದಯವಿಟ್ಟು ನನ್ನನ್ನು ಕ್ಷಮಿಸಿ. ನಾನು ತೆಗೆದುಕೊಳ್ಳಲಾರೆ.'' ಶ್ರೀಮಾತೆ ಕೇಳಿದರು: ''ನೀನು ನನ್ನನ್ನು ಏನೆಂದು ತಿಳಿದುಕೊಂಡಿದ್ದೀಯಾ?'' ಸೇವಕ ಉತ್ತರಿಸಿದ: ''ನನ್ನ ತಾಯಿ.'' ಶ್ರೀಮಾತೆ ಕೋಪಗೊಂಡು ಹೇಳಿದರು, ''ಪೆದ್ದು ಹುಡುಗ! ನಿನಗೆ ಸ್ವಲ್ಪವೂ ಬುದ್ಧಿ ಇಲ್ಲವಲ್ಲ — ತಾಯಿ ಎಂದಾದರೂ ಮಗನಿಗೆ ಕೊಡದೆ ತಾನೇ ಉಣ್ಣುವುದು, ಉಡುವುದು ಮಾಡಬಲ್ಲಳೆ? ಮಕ್ಕಳಿರುವಾಗ ತಾಯಿಯ ಭಂಡಾರ ಎಂದಾದರೂ ಖಾಲಿ ಉಳಿದೀತೆ? ಇವತ್ತು ನಾನು ಹೇಳುತ್ತಿದ್ದೇನೆ — ಯಾವಾಗ ಏನು ಬೇಕಾಗಿದೆಯೋ ನನ್ನ ಬಳಿ ಬಂದು ತೆಗೆದುಕೊಳ್ಳಬೇಕು. ಹಾಗಿದ್ದರೆ ಮಾತ್ರ ನನಗೆ ಆನಂದವಾಗುವುದು.'' ಹೀಗೆಂದ ಶ್ರೀಮಾತೆ, ಪೆಟ್ಟಿಗೆಯಿಂದ ಒಂದು ವಸ್ತ್ರವನ್ನು ತೆಗೆದು, ಅದನ್ನು ತಮ್ಮ ದೇಹಕ್ಕೆ ಸ್ಪರ್ಶಿಸಿ ಪ್ರಸಾದ ಮಾಡಿ, ಬಳಿಕ ಅದನ್ನು ಸೇವಕನಿಗೆ ಕೊಟ್ಟರು. ಇನ್ನೊಂದು ಬೆಲೆ ಬಾಳುವ ಬಟ್ಟೆಯನ್ನು — ಅದನ್ನು ಪ್ರಸಿದ್ಧ ಬ್ಯಾರಿಸ್ಟರ್ ಎಸ್.ಎನ್ ಬ್ಯಾನರ್ಜಿಯವರ ತಾಯಿ ಕೊಟ್ಟಿದ್ದಳು — ಅದನ್ನು ತನ್ನ ಮೈಗೆ ತಗುಲಿಸಿ, ಪ್ರಸಾದವಾಗಿಸಿ ಆತನಿಗೆ ಕೊಟ್ಟರು. ಸೇವಕ ಎರಡನ್ನೂ ತಲೆಗೆ ಸುತ್ತಿ ತೆಗೆದುಕೊಂಡು ಬರುತ್ತಿದ್ದ. ಅವನನ್ನು ಕರೆದು, ಶ್ರೀಮಾತೆ ಅಲ್ಲಿಯ ತನಕ ತಮ್ಮ ಬಳಿಯೇ ರಕ್ಷಿಸಿ ಕೊಂಡಿದ್ದ, ಠಾಕೂರರಿಗೆ ಹೊದೆಸುತ್ತಿದ್ದ ಒಂದು ಬಟ್ಟೆಯನ್ನು ಕೊಟ್ಟರು. ಸೇವಕ ತನ್ನ ಭಾವನೆಗೆ ವಿರುದ್ಧವಾದ ರೀತಿಯಲ್ಲಿ ಆದುದಕ್ಕೋ, ಅಥವಾ ಶ್ರೀಮಾತೆಯವರ ಅಪಾರ ಪ್ರೀತಿಯ ರಾಶಿಯಿಂದಾಗಿ ಮುಗ್ಧವಾಗಿಯೇ ಅಳುವುದಕ್ಕೆ ಆರಂಭಿಸಿದ. ಶ್ರೀಮಾತೆ ಅವನ ಕೆನ್ನೆ ಹಿಡಿದು ಚುಂಬಿಸಿ ಹೇಳಿದರು, ''ತಾಯಿಯ ಮೇಲೆ ಕೂಡಾ ಮಕ್ಕಳಿಗೆ ಅಧಿಕಾರವಿದೆ, ಮಗೂ. ಏನು ನಿನಗೆ ಬೇಕಾಗಿದೆಯೋ, ಅದನ್ನು ನೋಡಿ ತೆಗೆದುಕೋ'' ಎಂದರು. ಸೇವಕನು ಕೆಳ ಅಂತಸ್ತಿಗೆ ಬಂದು, ಠಾಕೂರರಿಗೆ ಹೊದೆಸಿದ ಬಟ್ಟೆಯ ಪವಿತ್ರತೆಯನ್ನು ಕಾಪಾಡಲು ತನ್ನಿಂದ ಸಾಧ್ಯವೇ ಇಲ್ಲವೇ ಎಂದು ಯೋಚಿಸಿ, ಅದನ್ನು ಶರತ್ ಮಹಾರಾಜರ ಬಳಿ ಒತ್ತೆಯಾಗಿಟ್ಟ. ಇನ್ನುಳಿದ ಎರಡು ಬಟ್ಟೆಗಳನ್ನು ತಾನೇ ತೆಗೆದುಕೊಂಡು ಹೋದ. ಶ್ರೀಮಾತೆ ಅಷ್ಟು ಹೇಳಿದ ಮೇಲೂ ಅವನು ಮುಖ ಅರಳಿಸಿಕೊಂಡು ಎಂದೂ ಏನನ್ನೂ ಕೇಳಲಿಲ್ಲ. ಶ್ರೀಮಾತೆ ಸ್ವತಃ ತಮ್ಮ ಪ್ರೇರಣೆಯಿಂದಲೇ ಪ್ರತಿವರ್ಷವೂ ದುರ್ಗಾಪೂಜೆಯ ಸಮಯದಲ್ಲಿ ಕೊಡುತ್ತಿದ್ದ ಬಟ್ಟೆಯನ್ನು ಮಾತ್ರ ಅವನು ತೆಗೆದುಕೊಳ್ಳುತ್ತಿದ್ದ. ಬಹಳ ಕಾಲದ ನಂತರ ಒಂದು ಸಲ ನಾವು ಆ ಸೇವಕನನ್ನು ನೋಡಿದೆವು. ಅಷ್ಟರಲ್ಲಿ ಅವನು ಹಲವಾರು ಬಗೆಯ ಗಂಡಾಂತರಗಳಿಂದ, ಹಲವು ಬಗೆಯ ಹೊಡೆತ

ಗಳಿಂದ ಅತಿಯಾದ ದುಃಖಗಳಲ್ಲಿ ಮುಳುಗೇಳುತ್ತಿದ್ದ. ನಾವು ಅವನನ್ನು ಕಂಡಾಗ ಅವನು ನಿರಾಹಾರಿಯಾಗಿ ದಿನ ಕಳೆಯುತ್ತಿದ್ದ. ಆಗ ಶ್ರೀಮಾತೆ ಕೂಡ ದೇಹತ್ಯಾಗ ಮಾಡಿದ್ದರು. ಸ್ನೇಹಿತರೆಲ್ಲ ಅವನಿಗೆ ಹೇಳಿದರು, ''ಶ್ರೀಮಾತೆ ನಿನಗೆ ಅಷ್ಟೊಂದು ಹೇಳುತ್ತಿದ್ದಾಗ ನೀನು ಅವರಿಂದ ಏನನ್ನೂ ಬಯಸಲಿಲ್ಲ!'' ಅದಕ್ಕೆ ಅವನು ಉತ್ತರ ಕೊಟ್ಟ: ''ನಾನು ಏನಾದರೂ ಬಯಸಿದರೆ ನನಗದು ಸಿಕ್ಕೇ ಸಿಗುತ್ತದೆ — ನನಗೆ ಖಂಡಿತ ವಿಶ್ವಾಸವಿದೆ. ಆದರೆ ನಾನು ಬಯಸುವುದಿಲ್ಲ. ಮಗುವಿಗೆ ಬಾಟಲಿ ನಿಪ್ಪಲ್ ಕೊಟ್ಟು ಸುಮ್ಮನಾಗಿಸುವಂತೆ ಏನೋ ಕೊಟ್ಟು ಮರೆಸಿಬಿಡುತ್ತಾರೆ; ಅದು ನನಗೆ ಬೇಕಾಗಿಲ್ಲ.''

॥ ೧೫ ॥

ಈ ಕೆಳಗಿನ ಭಕ್ತ-ಶಿಷ್ಯರುಗಳನ್ನು ಶ್ರೀಮಾತೆ ಹೇಗೆ ಕರೆಯುತ್ತಿದ್ದರೋ, ಅದನ್ನು ಇಲ್ಲಿ ಬರೆದಿದೆ:

ಹೆಸರು	ಶ್ರೀಮಾತೆ ಕರೆಯುತ್ತಿದ್ದ ಹೆಸರು
ಲಾಟು ಮಹಾರಾಜ್	— ನಾಟು
ಯೋಗಿನ್ ಮಹಾರಾಜ್	—ಛೇಲೇ ಯೋಗೇನ್ (ಹುಡುಗ ಯೋಗೇನ್)
ಯೋಗಿನ್ ಮಾ	— ಮೇಯೇ ಯೋಗೇನ್ (ಹುಡುಗಿ ಯೋಗಿನ್)
ಕೃಷ್ಣಲಾಲ್	— ಕೇಷ್ಟನಾಲ್
ಗಣೇಂದ್ರ	— ಗಣೇಶ್
ಡಾ. ಕಾಂಜಿಲಾಲ್	— ಕಾಂಜಿನಾಲ್
ಲಲಿತ್ (ಲಲಿತಮೋಹನ ಚಟ್ಟೋಪಾಧ್ಯಾಯ)	— ನಲಿತ್
ಗೌರೀ-ಮಾ	— ಗೌರದಾಸೀ

॥ ೧೬ ॥

''ಠಾಕೂರ್ ದೊಡ್ಡವರೇ, ಶ್ರೀಮಾತೆ ದೊಡ್ಡವರೆ?''— ಈ ಅರ್ಥದ ಪ್ರಶ್ನೆಗೆ ಉತ್ತರವಾಗಿ ಶ್ರೀಮಾತೆ ತಮ್ಮ ಒಬ್ಬ ಶಿಷ್ಯನಿಗೆ ಹೇಳಿದರು: ''ಛಿ, ಅಂಥ ಮಾತನ್ನು ಆಡಬಹುದೆ?'' ಮರುಕ್ಷಣವೇ ಮತ್ತೆ ಕೇಳಿದರು, ''ನಿನಗೆ ಏನನ್ನಿಸುತ್ತದೆ?'' ಶಿಷ್ಯ ಹೇಳಿದ, ''ಕಾಳೀಮಾತೆ ಮಹಾದೇವನ ಮೇಲೆ ನಿಂತಿದ್ದಾಳೆ.'' ಶ್ರೀಮಾತೆ ಮೆಲುನಗೆ ನಕ್ಕು, ''ನೀನು ಆ ಭಾವನೆಯಲ್ಲೇ ಇರು'' ಎಂದರು.

॥ ೧೭ ॥

ದಕ್ಷಿಣೇಶ್ವರದಲ್ಲಿ ಸಣ್ಣ ಕೋಣೆ ನಹಬತ್‌ಖಾನೆಯಲ್ಲಿಯೇ ಬಂಧಿತರಂತೆ ಇರುತ್ತಿದ್ದ ಶ್ರೀಮಾತೆಯವರ ಒಂದು ಕಾಲಿನಲ್ಲಿ ವಾತ ಆರಂಭವಾಯಿತು. ಮುಂದೆ, ಅಂದರೆ ನಾವು ಅವರನ್ನು ಕಂಡಾಗ ಅದು ಎಷ್ಟು ಹೆಚ್ಚಾಯಿತೆಂದರೆ, ಅವರು ಆ ಕಾಲಲ್ಲಿ ಕುಂಟುತ್ತ ನಡೆಯಬೇಕಾಯಿತು. ಹಲವು ಬಗೆಯ ಡಾಕ್ಟರ್‌ಗಳು, ವೈದ್ಯರ ಚಿಕಿತ್ಸೆ ಹಾಗೂ ಮಾಲಿಷ್ ಚಿಕಿತ್ಸೆ , ಅಂತೆಯೇ ದೈವೀ ಚಿಕಿತ್ಸೆಯನ್ನು ಮಾಡಿದ್ದಾಯಿತು; ವಾಸಿಯಾಗಲಿಲ್ಲ. ಕೆಲವು ದಿನ ತುಸು ಕಡಿಮೆಯಾಗುತ್ತಿತ್ತು, ಮತ್ತೆ ಅದು ಜೋರಾಗುತ್ತಿತ್ತು. ಒಂದು ಬಾರಿಯಂತೂ ವಾತ ವಿಪರೀತ ಹೆಚ್ಚಾಯಿತು. ಅವರ ದೇಹಕ್ಕೆ ಅದರಿಂದ ತುಂಬಾ ಕಷ್ಟವಾಗುತ್ತಿದೆ ಎಂಬುದನ್ನು ಕಂಡ ಒಬ್ಬ ಶಿಷ್ಯ, ''ಅಮ್ಮಾ, ನೀವು ಅನುಮತಿ ಕೊಡಿ. ನಿಮ್ಮ ಶರೀರದಿಂದ ಈ ರೋಗವನ್ನು ನಾನು ನನ್ನ ದೇಹದ ಮೇಲೆ ಎಳೆದುಕೊಳ್ಳುತ್ತೇನೆ'' ಎಂದು ಅವರಿಗೆ ಹೇಳಿದ. ಇದನ್ನು ಹೇಳಿದೊಡನೆಯೇ ಅವನು ಹಾಗೇ ಮಾಡಲು ಆರಂಭಿಸಿದ. ಆತ ಈ ವಿದ್ಯೆಯನ್ನು ನೇಪಾಳಿ ಮಾಯಿ ಬಳಿ ಕಲಿತಿದ್ದ, ಹಾಗೂ ಅವನಿಗೆ ಹಾಗೆ ಮಾಡಲು ಸಾಧ್ಯವಿದೆ ಎಂಬುದು ಶ್ರೀಮಾತೆಗೆ ತಿಳಿದಿತ್ತು. ಆದ್ದರಿಂದ ಅವರು ಅವನಿಗೆ ಹಾಗೆ ಮಾಡಲು ಅವಕಾಶವನ್ನೇ ಕೊಡದೆ, ಅತ್ಯಂತ ವಿಚಲಿತರಾಗಿ ಅವನ ಎರಡೂ ಕೈಗಳನ್ನೂ ಹಿಡಿದುಕೊಂಡು ಹೇಳಿದರು, ''ಇಲ್ಲ, ಇಲ್ಲ ಮಗೂ, ಹಾಗೆ ಮಾಡಬೇಡ. ನಿನಗೆ ಗೊತ್ತಿಲ್ಲ. ಅದು ಈ ದೇಹಕ್ಕೆ (ತನ್ನ ದೇಹವನ್ನ ತೋರಿಸಿ) ಎಷ್ಟೊಂದು ಕಷ್ಟಕೊಡುತ್ತಿದೆಯೆಂದರೆ, ನಿನ್ನ ದೇಹ ಹೊರಟು ಹೋದರೆ ಅದರಿಂದ ಅತಿಹೆಚ್ಚು ಕಷ್ಟ ನನಗಾದೀತು - ಬಾತುಕೊಂಡ ಕಾಲಿನಲ್ಲಿ ಗುಳ್ಳೆ ಬಂದಂದಾದೀತು. ನಾನು ನಿನ್ನ ತಾಯಿ!'' ಮಹಾಶಕ್ತಿಯ ಮುಂದೆ ಸಣ್ಣ ಶಕ್ತಿ ಸೋಲಬೇಕಾಯಿತು.

॥ ೧೮ ॥

ಹಲವು ಬಾರಿ ನಾವು ಗಮನಿಸಿದ್ದೆವು, ಶ್ರೀಮಾತೆ ಸಂನ್ಯಾಸೀ ಶಿಷ್ಯಂದಿರಿಗಿಂತ ಗೃಹಸ್ಥ ಶಿಷ್ಯರನ್ನೇ ಹೆಚ್ಚು ಪ್ರೀತಿಸುತ್ತಿದ್ದರು. ಈ ರೀತಿ ಅವರು ಪಕ್ಷಪಾತ ಮಾಡುವುದಕ್ಕೆ ಕಾರಣವನ್ನು ಕೇಳಿದಾಗ ಅವರಿಂದ ಉತ್ತರ ಲಭಿಸಿತು: ''ಇವರೆಲ್ಲ(ಸಂನ್ಯಾಸಿಗಳು) ತ್ಯಾಗ ಮಾಡಿಬಂದು ಧ್ಯಾನ-ಜಪಗಳನ್ನು ಮಾಡುತ್ತಿದ್ದಾರೆ. ತಮ್ಮ ಪ್ರಯತ್ನದಿಂದಲೇ ಅವರು ಮೇಲಕ್ಕೇರುವರು. ಆದರೆ ಅವರು (ಗೃಹಸ್ಥರು) ಎಳೆಯ ಮಕ್ಕಳ ಹಾಗೆ ನನ್ನ ಮಡಿಲಲ್ಲಿ ಬಂದು ಬಿದ್ದಿದ್ದಾರೆ. ಆದ್ದರಿಂದ ಅವರನ್ನು ನಾನೇ ನೋಡಿಕೊಳ್ಳಬೇಕು.''

॥ ೧೯ ॥

ಶ್ರೀಮಾತೆಯವರ ಹೊಸ ಮನೆಯ ಹತ್ತಿರ ಚಿತ್ಪುರ ರಸ್ತೆಯಲ್ಲಿ ಒಂದು ಸಲ ಶೀತಲಾದೇವಿಯ ಸಾರ್ವಜನಿಕ ಪೂಜೆ ನಡೆಯುತ್ತಿತ್ತು. ಅಂದು ಗಂಗಾಸ್ನಾನ ಮಾಡಿದ ನಂತರ ಶ್ರೀಮಾತೆ ಎಳನೀರು, ಸಕ್ಕರೆ ಹಾಗೂ ದಕ್ಷಿಣೆಯ ನಾಣ್ಯವನ್ನು ನಮ್ಮ ಕೈಗೆ ಕೊಟ್ಟು, ''ಇವುಗಳನ್ನು ಸಾರ್ವಜನಿಕ ಪೂಜೆ ನಡೆಯುವಲ್ಲಿ ಕೊಡು. ಮನಸ್ಸಿನಲ್ಲೇ ಶೀತಲಾ ಮಾತೆಗೆ ಹೇಳು, 'ಫಲವನ್ನು ಸ್ವೀಕರಿಸು; ಫಲದ ಫಲವನ್ನು ಸ್ವೀಕರಿಸು' ಅಂತ.''

(ಮುಂದುವರಿಯುವುದು)

ಶ್ರೀರಾಮಕೃಷ್ಣರ ಅದ್ವಿತೀಯತೆ

ಎಲ್.ಜಿ ನಾಗೇಶ್ ರಾವ್

ಶ್ರೀರಾಮಕೃಷ್ಣರ ಅಸಾಧಾರಣ ಜೀವನ ಹಾಗೂ ಅಲೌಕಿಕ ವ್ಯಕ್ತಿತ್ವ ಮಾನವ ಇತಿಹಾಸದಲ್ಲೇ ಅತ್ಯಂತ ಅಪರೂಪವಾಗಿ ಜರುಗಿದ ಒಂದು ಮಹತ್ತರ ಘಟನೆ ಎಂದು ಪರಿಗಣಿಸಲಾಗಿದೆ. ಅತ್ಯಂತ ಜನನಿಬಿಡವಾದ ಹಾಗೂ ಆಧುನಿಕ ಬೆಳವಣಿಗೆಗಳ ಕೇಂದ್ರವಾಗಿದ್ದ ಕಲ್ಕತ್ತೆಯ ಒಂದು ದೇಗುಲದಲ್ಲಿ ಸದ್ದಿಲ್ಲದೆ ನಡೆದ ಈ ಮಹಾತ್ಮರ ಧ್ಯಾನ, ತಪಸ್ಸು ಹಾಗೂ ಭಕ್ತಿಭಾವ-ಭರಿತ ಜೀವನ ಕ್ರಮೇಣ ಜಗತ್ತನ್ನೆಲ್ಲ ಪ್ರಭಾವ ಬೀರುವಷ್ಟು ವ್ಯಾಪಕಗೊಂಡಿತು. ಅವತಾರ ತತ್ತ್ವಕ್ಕೆ ಹೊಸ ಭಾಷ್ಯವನ್ನೇ ಬರೆದ ಅವರ ಜೀವನದ ಬಗ್ಗೆ ಬರೆದಿರುವ ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಾಯಕ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ಬೆಂಗಳೂರು ಆಶ್ರಮದ ಭಕ್ತರಾದ ಅವರು ಭಾಷಾಂತರವೇ ಮೊದಲಾದ ಹಲವು ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.

ಜಗತ್ತಿನಲ್ಲಿ ಕಾಲಕಾಲಕ್ಕೆ ಮಹಾತ್ಮರು ಹುಟ್ಟಿ ಬಂದು ಧರ್ಮ ಸಂಸ್ಥಾಪನೆ ಮಾಡುತ್ತಾ ಬಂದಿದ್ದಾರೆ. 'ಯಾವಾಗ ಧರ್ಮಕ್ಕೆ ಗ್ಲಾನಿಯುಂಟಾಗುತ್ತದೆಯೋ ಆಗ ನಾನು ಅವತಾರ ಮಾಡಿ ಧರ್ಮವನ್ನು ಪುನರುತ್ಥಾನ ಮಾಡುತ್ತೇನೆ' ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ್ದಾನೆ (೪-೭,೮). ಅದರಂತೆಯೇ ಬುದ್ಧ, ಯೇಸುಕ್ರಿಸ್ತ, ಬಸವಣ್ಣ, ಶಂಕರಾಚಾರ್ಯ, ಚೈತನ್ಯ ಮಹಾಪ್ರಭು, ಶ್ರೀರಾಮಕೃಷ್ಣರು, ಶ್ರೀರಮಣ ಮಹರ್ಷಿಗಳು ಮೊದಲಾದವರು ಬಂದಿದ್ದಾರೆ. ಆಯಾ ಕಾಲದ ಆವಶ್ಯಕತೆಗಳಿಗೆ ಅನುಸಾರವಾಗಿ ಅವರು ಬೋಧನೆ ಮಾಡಿದ್ದಾರೆ. ಅವರ ಚಿಂತನೆಗಳು, ಬೋಧನೆಗಳು ಅಂದಿನ ಸಮಾಜದ ಆವಶ್ಯಕತೆಗಳಾಗಿದ್ದವು ಎಂಬುದನ್ನು ನಾವು ಮನಗಾಣುತ್ತೇವೆ. ಅಂತಹ ಸುಧಾರಕರು ಇಲ್ಲದಿದ್ದರೆ ಸಮಾಜವು ನಿಂತ ನೀರಾಗುತ್ತದೆ. ಆದರೆ ಸಮಾಜವು ಪರಿವರ್ತನಶೀಲವಾಗಿದ್ದು, ಒಂದು ಕೊಂಬೆಯು ಒಣಗಿದರೆ ಮತ್ತೊಂದು ಕೊಂಬೆ ಚಿಗುರುವ ಅಶ್ವತ್ಥಮರದಂತೆ ಬೆಳೆಯುತ್ತಾ ಇರುತ್ತದೆ.

ಶ್ರೀರಾಮಕೃಷ್ಣರ ಅವತಾರದ ಸಂಧರ್ಭ

ಹತ್ತೊಂಬತ್ತನೆಯ ಶತಮಾನದಲ್ಲಿ ಬಂಗಾಳದಲ್ಲಿ ಹೊಸ ಹೊಸ ಧಾರ್ಮಿಕ ವಿಚಾರಗಳು ತಲೆಯೆತ್ತಿದವು. ಮೊಘಲರ ಆಕ್ರಮಣವಾಯಿತು. ಬ್ರಿಟಿಷರ ಆಗಮನವಾಯಿತು. ಪಾಶ್ಚಿಮಾತ್ಯರ ವಿದ್ಯಾಭ್ಯಾಸ ಮತ್ತು ವಿಚಾರಗಳು ಭಾರತೀಯರ ಮೇಲೆ ಪ್ರಭಾವ ಬೀರಿದವು. ಆರ್ಯಸಮಾಜದ ದಯಾನಂದ ಸರಸ್ವತಿಗಳು ಮೂರ್ತಿಪೂಜೆಯನ್ನು ಖಂಡಿಸಿದರು, ಇಸ್ಲಾಂ ಧರ್ಮದ ಪ್ರಭಾವವೂ ಉಂಟಾಯಿತು. ಬ್ರಹ್ಮ ಸಮಾಜವು ಸ್ಥಾಪನೆಗೊಂಡು, ವಿದ್ಯಾವಂತರನ್ನು ಅದರಲ್ಲಿಯೂ ಯುವಕರನ್ನು ಆಕರ್ಷಿಸಿತು. ಮಹರ್ಷಿ ದೇವೇಂದ್ರನಾಥ ಠಾಕೂರ್, ಕೇಶವಚಂದ್ರ ಸೇನ್, ಮತ್ತು ಯುವಕರಾದ ನರೇಂದ್ರನಾಥ ದತ್ತ, ಶರತ್‌ಚಂದ್ರ ಚಕ್ರವರ್ತಿ, ಶಶಿಭೂಷಣ ಚಕ್ರವರ್ತಿ, ರಾಖಾಲ ಚಂದ್ರ ಘೋಷ್ ಮೊದಲಾದ ಬ್ರಹ್ಮಸಮಾಜದ ಸದಸ್ಯರು ಶ್ರೀರಾಮಕೃಷ್ಣರ ಸಂಪರ್ಕಕ್ಕೆ ಬಂದರು. ಆಂಗ್ಲ ವಿದ್ಯಾಭ್ಯಾಸದಿಂದ ಪ್ರೇರಿತರಾದ ಇವರು ಸನಾತನ ಋಷಿಗಳಲ್ಲಿ ಮತ್ತು ತತ್ತ್ವಶಾಸ್ತ್ರದಲ್ಲಿ ಶ್ರದ್ಧೆಯನ್ನು ಹೊಂದಿಲ್ಲವೆಂಬುದನ್ನು ಶ್ರೀರಾಮಕೃಷ್ಣರು ಅರಿತರು. ಆ ಯುವಕರಿಗೆ ಪಾಶ್ಚಾತ್ಯ ತತ್ತ್ವಜ್ಞಾನಿಗಳ ಭಾವನೆಗಳ ಕಡೆಗೆ ಹೆಚ್ಚು ಒಲವು ಇತ್ತೆಂಬುದೂ ತಿಳಿಯಿತು. ಇದರಿಂದ ಶ್ರೀರಾಮಕೃಷ್ಣರು ಧೃತಿಗೆಡಲಿಲ್ಲ. ಕೇಶವ ಚಂದ್ರಸೇನ ಮತ್ತು ಅವನ ಅನುಯಾಯಿಗಳ ಜೊತೆ ಶ್ರೀರಾಮಕೃಷ್ಣರ ಒಡನಾಟ ಉಂಟಾಯಿತು. ಶ್ರೀರಾಮಕೃಷ್ಣರು ಬ್ರಹ್ಮಸಮಾಜಕ್ಕೆ ಪರಿವರ್ತಿತರಾಗುತ್ತಿದ್ದರೆಂದು ಅವರು ತಿಳಿದಿದ್ದರು. ಆದರೆ ಶ್ರೀರಾಮಕೃಷ್ಣರ ವಿಶ್ವಮಾನವತೆ, ವಿಶ್ವಭ್ರಾತೃತ್ವ ಮತ್ತು ಸನಾತನ ಧರ್ಮದ ಶ್ರದ್ಧೆಗಳು ಬ್ರಹ್ಮ ಸಮಾಜದ ಸದಸ್ಯರನ್ನು ಸಂಪೂರ್ಣವಾಗಿ ಬದಲಾಯಿಸಿದವು. ಕೇಶವಚಂದ್ರಸೇನ, ನರೇಂದ್ರ, ರಾಖಾಲ, ಶಶಿ ಮೊದಲಾದವರು ಶ್ರೀರಾಮಕೃಷ್ಣರ ಶಿಷ್ಯರಾದರು. ಮೂರ್ತಿಪೂಜೆಯನ್ನು ಖಂಡಿಸುತ್ತಿದ್ದವರು ಮೂರ್ತಿಪೂಜೆಯನ್ನು ಒಪ್ಪಿಕೊಳ್ಳಬೇಕಾಯಿತು. ಭಾವಮುಖದಲ್ಲಿ ನೆಲೆನಿಂತಿದ್ದ ದೇವಮಾನವರಾದ ಶ್ರೀರಾಮಕೃಷ್ಣರು ಸನಾತನ ಧರ್ಮಕ್ಕೆ ಕಾಯಕಲ್ಪ ಮಾಡಿದರು. ಅವರ ಅದ್ವಿತೀಯತೆ ಮತ್ತು ವಿಶಿಷ್ಟತೆಗಳನ್ನು ತಿಳಿಯೋಣ.

ಸತ್ಯದರ್ಶನವನ್ನು ಮಾಡಿಕೊಂಡವರೂ, ಜ್ಞಾನಿಗಳೂ ಆದ ಸಂತರು ಒಂದೇ ರೀತಿಯ ಜೀವನ ಕ್ರಮವನ್ನು ಅನುಸರಿಸುವುದಿಲ್ಲ. ಅವರು ಒಬ್ಬೊಬ್ಬರು ಒಂದೊಂದು ರೀತಿ ಇರುತ್ತಾರೆ. ಉದಾಹರಣೆಗೆ ಶ್ರೀರಮಣ ಮಹರ್ಷಿಗಳು ಅರುಣಾಚಲವನ್ನು ಬಿಟ್ಟು (ತಿರುವಣ್ಣಾಮಲೈ) ಬೇರೆ ಎಲ್ಲೂ ಹೋಗಲಿಲ್ಲ. ಸದಾಶಿವ ಬ್ರಹ್ಮೇಂದ್ರರು ಅನೇಕ ವರ್ಷಗಳ ಕಾಲ ಮೌನವಾಗಿದ್ದರು.

ಗುರುಗಳ ಆಗಮನ

ಶ್ರೀರಾಮಕೃಷ್ಣರು ಗುರುಗಳನ್ನು ಹುಡುಕಿಕೊಂಡು ಹೋಗಲಿಲ್ಲ. ಗುರುಗಳೇ ಅವರ ಹತ್ತಿರ ಬಂದರು. ಭೈರವಿ ಬ್ರಾಹ್ಮಣಿ ಮತ್ತು ತೋತಾಪುರಿ — ಇವರೇ ಆ ಗುರುಗಳು.

ಒಂದು ದಿನ ಭೈರವಿ ಬ್ರಾಹ್ಮಣಿ ದೋಣಿಯಲ್ಲಿ ದಕ್ಷಿಣೇಶ್ವರಕ್ಕೆ ಬಂದಳು. ಆಕೆಯನ್ನು ತಮ್ಮ ಹತ್ತಿರ ಕರೆದುಕೊಂಡು ಬರ

ಬೇಕೆಂದು ಶ್ರೀರಾಮಕೃಷ್ಣರು ಹೃದಯರಾಮನಿಗೆ ತಿಳಿಸಿದರು. ಭೈರವಿ ಬ್ರಾಹ್ಮಣಿ ಬಂದು ಹೇಳಿದಳು: ''ಇಷ್ಟು ದಿನ ಎಲ್ಲಿದ್ದೆ ಮಗು? ನಾನು ನಿನಗಾಗಿ ಹುಡುಕುತಿದ್ದೆ..'' ಆಕೆ ತಂತ್ರ ವಿದ್ಯೆಯಲ್ಲಿ ಪರಿಣಿತಿ ಉಳ್ಳವಳು. ಶ್ರೀರಾಮಕೃಷ್ಣರು ಆಕೆಯಿಂದ ತಂತ್ರಸಾಧನೆಯನ್ನು ಕಲಿತರು. ಆಶ್ಚರ್ಯದ ಸಂಗತಿಯೆಂದರೆ ಅವರು ಎಲ್ಲ ತಾಂತ್ರಿಕ ಸಾಧನೆಗಳನ್ನೂ ಅತ್ಯಂತ ಕಡಿಮೆ ಕಾಲದಲ್ಲಿ ಮಾಡಿ ಮುಗಿಸಿದರು. ಕಠಿಣವಾದ ತಾಂತ್ರಿಕ ಸಾಧನೆಗಳಲ್ಲಿ ಸಾಧಾರಣ ಸಾಧಕನು ಪತಿತನಾಗುವ ಸಾಧ್ಯತೆಗಳುಂಟು. ಆದರೆ ಶ್ರೀರಾಮಕೃಷ್ಣರು ಎಲ್ಲಾ ಕಠಿಣ ಪರೀಕ್ಷೆಗಳಲ್ಲೂ ಉತ್ತೀರ್ಣರಾದರು.

ತೋತಾಪುರಿ ಎಂಬ ಅದ್ವೈತ ಸಾಧಕ ಗುರುವು ಗಂಗಾಸಾಗರ ಯಾತ್ರೆ ಮಾಡಿಕೊಂಡು ದಕ್ಷಿಣೇಶ್ವರಕ್ಕೆ ಆಕಸ್ಮಿಕವಾಗಿ ಬಂದನು. ಶ್ರೀರಾಮಕೃಷ್ಣರನ್ನು ಕಂಡ ತಕ್ಷಣ ಅವರು ಉತ್ತಮ ಅಧಿಕಾರಿಯೆಂದು ತೋತಾಪುರಿಗೆ ತಿಳಿಯಿತು. ದಿವ್ಯಮಾತೆ ಭವತಾರಿಣಿಯ ಆದೇಶವನ್ನು ಪಡೆದು ಶ್ರೀರಾಮಕೃಷ್ಣರು ಅದ್ವೈತ ಸಾಧನೆಗೆ ತೊಡಗಿದರು. ಶ್ರೀರಾಮಕೃಷ್ಣರು ಮೊದಲ ದಿನವೇ ನಿರ್ವಿಕಲ್ಪ ಸಮಾಧಿಯನ್ನು ಹೊಂದಿದರು. ಮೂರು ದಿವಸಗಳ ಕಾಲ ಆ ಸ್ಥಿತಿಯಲ್ಲಿಯೇ ಇದ್ದರು. ತೋತಾಪುರಿಯ ೪೦ ವರ್ಷಗಳ ಕಠಿಣ ಸಾಧನೆಯಿಂದ ಪಡೆದುಕೊಂಡದ್ದನ್ನು ಶ್ರೀರಾಮಕೃಷ್ಣರು ಅತ್ಯಲ್ಪ ಕಾಲದಲ್ಲಿಯೇ ಸಾಕ್ಷಾತ್ಕಾರ ಮಾಡಿಕೊಂಡಿದ್ದರು. ತೋತಾಪುರಿಗೆ ಇದರಿಂದ ಆಶ್ಚರ್ಯವೂ ಸಂತೋಷವೂ ಉಂಟಾಯಿತು. ಮುಂದೆ ತೋತಾಪುರಿಯು ಸುಮಾರು ೧೧ ತಿಂಗಳ ಕಾಲ ದಕ್ಷಿಣೇಶ್ವರದಲ್ಲಿಯೇ ಇದ್ದು ಅದ್ವೈತ ಸಾಧನೆಯಲ್ಲಿ ಸಹಾಯ ಮಾಡಿದನು.

ದಿವ್ಯ ದಂಪತಿಗಳು

ಶ್ರೀರಾಮಕೃಷ್ಣರು ಮತ್ತು ಶಾರದಾದೇವಿಯವರು ಅತ್ಯಂತ ಅಪರೂಪದ ದಿವ್ಯದಂಪತಿಗಳು. ಅವರು ಎಂದೂ ದೈಹಿಕ ಆಕರ್ಷಣೆಯನ್ನು ಹೊಂದಲಿಲ್ಲ. ಶ್ರೀರಾಮಕೃಷ್ಣರು ತಮ್ಮ ಹೆಂಡತಿಯನ್ನು ಜಗನ್ಮಾತೆ ಕಾಳಿಯೆಂದೇ ತಿಳಿದಿದ್ದರು. ಒಂದು ದಿನ ಶ್ರೀಶಾರದಾದೇವಿಯವರು ಶ್ರೀರಾಮಕೃಷ್ಣರ ಕಾಲುಗಳನ್ನು ಒತ್ತುತ್ತಾ ಇದ್ದಾಗ ಅವರು ಶ್ರೀರಾಮಕೃಷ್ಣರನ್ನು ಕೇಳಿದರು, ''ನೀವು ನನ್ನನ್ನು ಯಾವ ಭಾವದಿಂದ ನೋಡುತ್ತೀರಿ?'' ತಕ್ಷಣ ಶ್ರೀರಾಮಕೃಷ್ಣರು ಹೇಳಿದರು: ''ಮಂದಿರದೊಳಗಿರುವ ಜಗನ್ಮಾತೆಯಂತೆಯೇ ಕಾಣುತ್ತೇನೆ'' ಇದು ಅಸಾಧಾರಣವಾದ, ಅದ್ವಿತೀಯವಾದ ವಿಚಾರ, ಸಾಮಾನ್ಯ ಜನರ ಬುದ್ಧಿಗೆ ಇದು ಅರ್ಥವಾಗುವುದೇ ಕಷ್ಟ.

ಷೋಡಶಿ ಪೂಜೆ

ಜಗತ್ತಿನ ಸಂತರ ಇತಿಹಾಸಲ್ಲಿಯೇ ಆಶ್ಚರ್ಯಕರವಾದ ವಿಶಿಷ್ಟ ಸಂಗತಿ ಇದು. ಅಂದು ದುರ್ಗಾಮಾತೆಯ ವಿಶೇಷ ಪೂಜೆಯ ದಿವಸ. ಶ್ರೀರಾಮಕೃಷ್ಣರು ತಮ್ಮ ಕೊಠಡಿಯಲ್ಲಿಯೇ ಪೂಜೆ ಮಾಡುವುದಾಗಿ ತಿಳಿಸಿದ್ದರು. ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಲಾಗಿತ್ತು. ಶ್ರೀಶಾರದಾದೇವಿಯವರಿಗೆ ಅಲ್ಲಿಗೆ ಬರಲು ಮೊದಲೇ ತಿಳಿಸಲಾಗಿತ್ತು. ಶಾರದಾದೇವಿಯವರು ಒಂದು ದುರ್ಗಾಮಾತೆಗಾಗಿ ಇರಿಸಿದ್ದ ಪೀಠದ ಮೇಲೆ ಕುಳಿತುಕೊಂಡರು. ಸ್ವಲ್ಪ ಹೊತ್ತಿನ ನಂತರ ಅವರು ಧ್ಯಾನಸ್ಥರಾದರು ಮತ್ತು ಸಮಾಧಿಯನ್ನು ಹೊಂದಿದರು. ಶ್ರೀರಾಮಕೃಷ್ಣರು ಶಾಸ್ತ್ರೋಕ್ತ ರೀತಿಯಲ್ಲಿ ದೇವಸ್ಥಾನದಲ್ಲಿ ದೇವಿಗೆ ಪೂಜೆ ಮಾಡುವ ರೀತಿಯಲ್ಲಿಯೇ ಪೂಜೆ ಮಾಡಿದರು. ಇದಕ್ಕೆ ಷೋಡಶೀಪೂಜೆ ಎಂದೂ ತ್ರಿಪುರಸುಂದರಿ ಪೂಜೆ ಎಂದೂ ಹೆಸರು. ಅನಂತರ ಶ್ರೀರಾಮಕೃಷ್ಣರು ಸಮಾಧಿಸ್ಥರಾದರು. ರಾತ್ರಿಯೆಲ್ಲಾ ಹೀಗೆಯೇ ಕಳೆಯಿತು. ಬೆಳಗಿನ ಜಾವದಲ್ಲಿ ಶ್ರೀರಾಮಕೃಷ್ಣರು ತಮ್ಮ ಸಾಧನೆಯ ಫಲವನ್ನೂ ಮತ್ತ ಅದರ ಸಂಕೇತವಾಗಿ ಜಪಮಾಲೆಯನ್ನೂ ಶ್ರೀಶಾರದಾದೇವಿಯವರಿಗೆ ಅರ್ಪಿಸಿದರು. ಇಲ್ಲಿಗೆ ಶ್ರೀರಾಮಕೃಷ್ಣರ ಸಾಧನೆಯ ಒಂದು ಘಟ್ಟ ಮುಗಿಯಿತು.

ಶಿಷ್ಯರನ್ನು ತಯಾರು ಮಾಡಿದ್ದು

ಶ್ರೀರಾಮಕೃಷ್ಣರು ಎಲ್ಲ ಧರ್ಮಗಳ ಅನುಯಾಯಿಗಳಲ್ಲಿ ಅವರವರ ಧರ್ಮದಲ್ಲಿ ಶ್ರದ್ಧೆ, ಭಕ್ತಿಗಳನ್ನು ಹೆಚ್ಚುವಂತೆ ಮಾಡಿದರು. ಅವರು ಯಾವುದೇ ಹೊಸ ಧರ್ಮವನ್ನು, ಮತವನ್ನು ಸ್ಥಾಪನೆ ಮಾಡಲಿಲ್ಲ. ಪ್ರತಿಯೊಂದು ಧರ್ಮವೂ ದೇವರಡಿಗೆ ನಡೆಯುವ ದಾರಿ ಎಂಬುದನ್ನು ಪ್ರಾಯೋಗಿಕವಾಗಿ ಆಚರಿಸಿ ತೋರಿಸಿದರು. ಸರ್ವಧರ್ಮ ಸಹಿಷ್ಣುತೆಯ, ಸರ್ವಧರ್ಮ ಸಮನ್ವಯದ ಪ್ರಚಾರಕ್ಕೆ ಒಂದು ಶ್ರದ್ಧಾವಂತ ಶಿಷ್ಯವೃಂದವನ್ನು ತಯಾರು ಮಾಡಿದರು. ಶ್ರೀರಾಮಕೃಷ್ಣರು ಯಾವ ಪುಸ್ತಕವನ್ನೂ ಬರೆಯಲಿಲ್ಲ ; ಯಾವ ವೇದಿಕೆಯ ಮೇಲೂ ಉಪನ್ಯಾಸ ಮಾಡಲಿಲ್ಲ.

ಶ್ರೀರಾಮಕೃಷ್ಣರ ಮಹಾಸಮಾಧಿಯ (೧೮೮೬) ಹಿಂದಿನ ೩-೪ ವರ್ಷಗಳಲ್ಲಿ ಅವರ ಶಿಷ್ಯರ ಆಗಮನ ಪ್ರಾರಂಭವಾಯಿತು. ಮಾಸ್ಟರ್ ಮಹಾಶಯ, ನರೇಂದ್ರ, ಶಶಿ, ರಾಖಾಲ, ಶರತ್ ಮೊದಲಾದವರು ಬಂದು ಸೇರಿದರು. ಗೃಹಸ್ಥ ಭಕ್ತರೂ ಬಂದರು. ಶ್ರೀರಾಮಕೃಷ್ಣರ ಸಂದೇಶಗಳನ್ನು ಸಾಮಾನ್ಯ ಜನರಲ್ಲಿಗೆ ಕೊಂಡೊಯ್ದರು. ಅವರ ಪವಿತ್ರ ಜೀವನಾದರ್ಶಗಳಿಂದ, ಬೋಧನೆಗಳಿಂದ ಇದು ಇಂದಿಗೂ ಪರಂಪರಾಗತವಾಗಿ ಪ್ರಚಾರವಾಗುತ್ತಿದೆ. ಶ್ರೀರಾಮಕೃಷ್ಣರ ಮುಖ್ಯ ಶಿಷ್ಯರೆಂದರೆ ಅವರ ಸಹಧರ್ಮಿಣಿ ಶ್ರೀಶಾರದಾದೇವಿಯವರೇ ಆಗಿದ್ದರು. ಅವರ ಸಂನ್ಯಾಸಿ ಶಿಷ್ಯರು ಜ್ಞಾನ, ಭಕ್ತಿ, ವೈರಾಗ್ಯ ಸೇವೆಗಳಲ್ಲಿ ಒಬ್ಬರಿಗಿಂತ ಒಬ್ಬರು ಮಿಗಿಲಾಗಿದ್ದರು. ಅವರಲ್ಲಿ ಯಾರು ಹೆಚ್ಚು ಯಾರು ಕಡಿಮೆ ಎಂದು ಹೇಳಲು ಬರುವುದಿಲ್ಲ. ಶ್ರೀರಾಮಕೃಷ್ಣರ ಕೆಲಸವನ್ನು ಅವರು ಮುಂದುವರಿಸಿದರು. ಅವರ ಪುಣ್ಯನಾಮಗಳನ್ನು ಇಲ್ಲಿ ಭಕ್ತಿಯಿಂದ ಸ್ಮರಿಸಲಾಗಿದೆ. ಸ್ವಾಮಿ ಚೇತನಾನಂದರು ಅವರ ಜೀವನ, ಸಾಧನೆಗಳನ್ನು '**ದೇವರೊಡನೆ ಬಾಳಿದವರು**' (ಭಾಗ-೧) ಗ್ರಂಥ

ದಲ್ಲಿ ವಿವರಿಸಿದ್ದಾರೆ: ೧. ಸ್ವಾಮಿ ವಿವೇಕಾನಂದ ೨. ಸ್ವಾಮಿ ಬ್ರಹ್ಮಾನಂದ ೩. ಸ್ವಾಮಿ ಶಿವಾನಂದ ೪. ಸ್ವಾಮಿ ಪ್ರೇಮಾನಂದ ೫. ಸ್ವಾಮಿ ಯೋಗಾನಂದ ೬. ಸ್ವಾಮಿ ನಿರಂಜನಾನಂದ ೭. ಸ್ವಾಮಿ ರಾಮಕೃಷ್ಣಾನಂದ ೮. ಸ್ವಾಮಿ ಶಾರದಾನಂದ ೯. ಸ್ವಾಮಿ ತುರೀಯಾನಂದ ೧೦. ಸ್ವಾಮಿ ಅದ್ಭುತಾನಂದ ೧೧. ಸ್ವಾಮಿ ಅಭೇದಾನಂದ ೧೨. ಸ್ವಾಮಿ ತ್ರಿಗುಣಾತೀತಾನಂದ ೧೩. ಸ್ವಾಮಿ ಅದ್ವೈತಾನಂದ ೧೪. ಸ್ವಾಮಿ ಸುಬೋಧಾನಂದ ೧೫. ಸ್ವಾಮಿ ಅಖಂಡಾನಂದ ೧೬. ಸ್ವಾಮಿ ವಿಜ್ಞಾನಾನಂದ

ಸ್ವಾಮಿ ಚೇತನಾನಂದರು **'ದೇವರೊಡನೆ ಬಾಳಿದವರು'** – ಭಾಗ ೨ ರಲ್ಲಿ ೩೧ ಜನ ಗೃಹಸ್ಥಭಕ್ತರ ಪರಿಚಯವನ್ನು ಮಾಡಿ ಕೊಟ್ಟಿದ್ದಾರೆ.

ಕಲ್ಪತರು ದಿವಸ

ಜನವರಿ ೧ ನೆಯ ತಾರೀಖು ೧೮೮೬ ರಂದು ಒಂದು ವಿಶಿಷ್ಟ ವಾದ ಘಟನೆ ನಡೆಯಿತು. ಅದು ಸಂತರ ಇತಿಹಾಸದಲ್ಲಿಯೇ ಅಪೂರ್ವವಾದದ್ದು. ಆಗ ಶ್ರೀರಾಮಕೃಷ್ಣರು ಕಾಶೀಪುರದ ತೋಟದ ಮನೆಯಲ್ಲಿ ಗಂಟಲು ನೋವಿಗೆ ಚಿಕಿತ್ಸೆ ಪಡೆಯುತ್ತಿದ್ದರು. ಅಂದು ಮಧ್ಯಾಹ್ನ ೩ ಗಂಟೆಯ ಸಮಯ. ಅವರಿಗೆ ಏನೋ ಒಂದು ರೀತಿಯ ಉತ್ಸಾಹ ಬಂದು ಮಹಡಿಯಿಂದ ಕೆಳಗೆ ಇಳಿದು ಬಂದರು. ಕೆಳಗೆ ಹಜಾರದಲ್ಲಿದ್ದ ಜನರು ಅವರಿಗೆ ಪ್ರಣಾಮ ಮಾಡಿದರು. ಕೆಲವರು ಅಲ್ಲಲ್ಲಿ ಮರಗಳ ಕೆಳಗೆ ಕುಳಿತಿದ್ದರು. ಪರಮಹಂಸರು ಅಲ್ಲಿದ್ದ ಪ್ರತಿಯೊಬ್ಬರ ತಲೆಯ ಮೇಲೂ ತಮ್ಮ ಕೃಪಾಹಸ್ತವನ್ನಿಟ್ಟು ''ಚೈತನ್ಯವಂತರಾಗಿ'' ('be illumined') ಎಂದು ಆಶೀರ್ವದಿಸಿದರು. ಆ ದಿವ್ಯ ಸ್ಪರ್ಶದಿಂದ ಪ್ರತಿಯೊಬ್ಬರೂ ಆನಂದಪರವಶರಾದರು. ಕೆಲವರು ಧ್ಯಾನಸ್ಥರಾದರು. ಕೆಲವರು ಕುಣಿದಾಡಿದರು. ಅಂದು ಅಲ್ಲಿದ್ದ ಭಕ್ತರೇ ಭಾಗ್ಯವಂತರು. ಅವರೆಲ್ಲರೂ ಪುನೀತರಾದರು. ಪ್ರತಿ ವರ್ಷ ಜನವರಿ ೧ನೆಯ ತಾರೀಖು ಎಲ್ಲಾ ರಾಮಕೃಷ್ಣ ಆಶ್ರಮಗಳಲ್ಲಿಯೂ ಕಲ್ಪತರು ದಿವಸವನ್ನು ಆಚರಿಸಲಾಗುತ್ತದೆ. ಇಂದು ಶ್ರೀರಾಮಕೃಷ್ಣರ ಅವ್ಯಾಜ ಕರುಣೆಯನ್ನು ತೋರಿಸುತ್ತದೆ.

ಭಾವಮುಖದಲ್ಲಿ ಇದ್ದರು

ಶ್ರೀರಾಮಕೃಷ್ಣರ ಅದ್ವಿತೀಯತೆಯೆಂದರೆ ಅವರು ಭಗವತ್ ಸಾಕ್ಷಾತ್ಕಾರವಾದ ನಂತರ ನಿರ್ವಿಕಲ್ಪ ಸಮಾಧಿಯನ್ನು ಅನುಭವಿಸಿ ಅನಂತರ ಭಾವಮುಖದಲ್ಲಿ ಇದ್ದರು. ಭಾವಮುಖ ಎಂದರೇನು ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಇದರ ಅರ್ಥವನ್ನು ಸ್ವಾಮಿ ಶಾರದಾನಂದರು ಬರೆದಿರುವ ಮೇರು ಕೃತಿ **'ಶ್ರೀರಾಮಕೃಷ್ಣಲೀಲಾಪ್ರಸಂಗ'** *(ಭಾಗ ೧, ಪುಟ ೪೩೫)* ದಲ್ಲಿ ಈ ರೀತಿ ವಿವರಿಸಿದ್ದಾರೆ: ''ಶ್ರೀ ಜಗನ್ಮಾತೆಯ ನಿರ್ಗುಣ ಸಗುಣಗಳಿಂದ ಕೂಡಿದ ಸ್ವರೂಪವನ್ನು ಪೂರ್ಣ ಅನುಭವಿಸಿದ ಮೇಲೆ ಶ್ರೀರಾಮಕೃಷ್ಣರು 'ಭಾವಮುಖದಲ್ಲಿರು''ಎಂಬ ಆದೇಶವನ್ನು ಜಗನ್ಮಾತೆಯಿಂದ ಪಡೆದರು. ಅಂದರೆ ಅಹಂಭಾವವನ್ನು ಸಂಪೂರ್ಣ ಲಯಗೊಳಿಸಿ ನಿರ್ಗುಣ ಭಾವದಲ್ಲಿ ಇರಬೇಡ. ಯಾವುದರಿಂದ ಅನಂತ ವಿಶ್ವಭಾವಗಳು ಉಂಟಾಗುತ್ತಿವೆಯೋ ಆ ವಿಶ್ವ ಅಹಂ ನೀನಾಗಿರುವೆ. ಅದರ ಇಚ್ಛೆಯೇ ನಿನ್ನ ಇಚ್ಛೆ. ಅದರ ಕಾರ್ಯವೇ ನಿನ್ನ ಕಾರ್ಯ. ಈ ಭಾವವನ್ನು ಯಾವಾಗಲೂ ಸರಿಯಾದ ರೀತಿಯಲ್ಲಿ ಅನುಭವಿಸುತ್ತಾ ಜೀವನ ಯಾಪನೆ ಮಾಡು. ಮತ್ತು ಲೋಕಕಲ್ಯಾಣವನ್ನು ಸಾಧಿಸು — ಎಂದು. ಅದರಿಂದ ಭಾವಮುಖದಲ್ಲಿರುವುದು ಎಂದರೆ ಎಲ್ಲ ಸಮಯದಲ್ಲಿಯೂ, ಎಲ್ಲ ಅವಸ್ಥೆಗಳಲ್ಲಿಯೂ ನಾನು ಅದೇ ವಿಶ್ವ ಅಹಂ, ಅದೇ ಪಕ್ವ ಅಹಂ ಎಂಬ ಅರಿವನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರುವುದು.''

ಭಾವಮುಖದಲ್ಲಿ ನೆಲೆನಿಂತಿರುವ ಜ್ಞಾನಿಯು ತನ್ನ ದೃಷ್ಟಿಯಿಂದ, ಸ್ಪರ್ಶದಿಂದ, ಹಾಗೂ ಸಂಕಲ್ಪ ಮಾತ್ರದಿಂದಲೇ ಶಿಷ್ಯರಲ್ಲಿ ಅಧ್ಯಾತ್ಮ ಜಾಗೃತಿಯನ್ನು ಉಂಟುಮಾಡಬಲ್ಲನು. ಅದನ್ನು ಶ್ರೀರಾಮಕೃಷ್ಣರು ಮಾಡಿ ತೋರಿಸಿದ್ದಾರೆ. ಆ ದಿವ್ಯ ಭಾವದಲ್ಲಿದ್ದು ಲೋಕಸಂಗ್ರಹಕ್ಕಾಗಿ ಕೆಲಸ ಮಾಡಿದ ಸಂತರನ್ನು ನಾವು ಕಾಣುವುದು ಅಪರೂಪ. ಹೀಗೆ ಮಾಡಿದ್ದು ಶ್ರೀರಾಮಕೃಷ್ಣರ ಅದ್ವಿತೀಯತೆ.

ಸರ್ವಧರ್ಮಸಮನ್ವಯ


ಶ್ರೀರಾಮಕೃಷ್ಣರು ಎಲ್ಲ ಧರ್ಮಗಳ ಸಾಧನಾ ವಿಧಾನಗಳನ್ನು ಅನುಸರಿಸಿ, ಆಚರಿಸಿ, ಸಾಕ್ಷಾತ್ಕಾರವನ್ನು ಪಡೆದುಕೊಂಡರು. ಅನಂತರ ಅವರು ಹೇಳಿದರು: ''ಎಲ್ಲ ಧರ್ಮಗಳೂ ಸತ್ಯದೆಡೆಗೆ ಹೋಗುವ ಮಾರ್ಗಗಳು. ಅವೆಲ್ಲವೂ ಸತ್ಯ. ಆದರೆ ತನ್ನ ಧರ್ಮವೇ ಶ್ರೇಷ್ಠವೆಂದು ಹೇಳಲಾಗದು. ಯಾವುದಾದರೂ ಒಂದು ಧರ್ಮವೇ ಶ್ರೇಷ್ಠವೆಂದು ಹೇಳಲಾಗದು.'' ಎಂದು ಶ್ರೀರಾಮಕೃಷ್ಣರು ತಿಳಿಸಿದರು.

ಶ್ರೀರಾಮಕೃಷ್ಣರು ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತ ಮತಗಳ ಸಮನ್ವಯವನ್ನು ತಿಳಿಸಿದ್ದಾರೆ. ಅವು ಪರಸ್ಪರ ವಿರೋಧಿಗಳಲ್ಲ , ಪರಸ್ಪರ ಪೂರಕಗಳು. ಇದರಿಂದ ಎಷ್ಟೋ ಸಾಧಕರ ಮನಸ್ಸಿನ ಗೊಂದಲ ನಿವಾರಣೆಯಾಯಿತು.

ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ, ಮತ್ತು ರಾಜಯೋಗ ಇವುಗಳ ಸಮನ್ವಯವನ್ನೂ ಶ್ರೀರಾಮಕೃಷ್ಣರು ತಿಳಿಸಿದರು. ಈ ಮಾರ್ಗಗಳು ಒಂದಕ್ಕೊಂದು ಪೂರಕಗಳಾಗಿವೆ ಎಂದು ತಿಳಿಯಬೇಕು.

ಇಂತಹ ವಿಶಿಷ್ಟ ಲಕ್ಷಣಗಳನ್ನು ಹೊಂದಿದ್ದ ಶ್ರೀರಾಮಕೃಷ್ಣರ ಕೃಪೆ ಸದಾ ನಮ್ಮ ಮೇಲಿರಲಿ. ಅವರ ಜೀವನ ಮತ್ತು ಉಪದೇಶಗಳು ಎಲ್ಲ ಕಾಲಕ್ಕೂ ಎಲ್ಲರಿಗೂ ಸ್ಫೂರ್ತಿ ನೀಡಲಿ.





ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೨೦



ಶ್ರೀರಾಮಕೃಷ್ಣರ ವಯೋವೃದ್ಧ ಸಂನ್ಯಾಸಿ ಶಿಷ್ಯರಾದ ಸ್ವಾಮಿ ಅದ್ವೈತಾನಂದರು ಬೇಲೂರು ಮಠದಲ್ಲಿ ಡಿಸೆಂಬರ್ ೨೮ರಂದು (೧೯೦೭) ತಮ್ಮ ೮೧ನೇ ವಯಸ್ಸಿನಲ್ಲಿ ಶರೀರ ತ್ಯಾಗ ಮಾಡಿದರೆಂಬ ದುಃಖ ವಾರ್ತೆಯು ಬಂದಿತು. ಇವರು ತಮ್ಮ ಕೊನೆಯ ಕೆಲವು ವರ್ಷಗಳನ್ನು ಮಠದಲ್ಲಿಯೇ ಕಳೆದಿದ್ದರು. ವರಾಹನಗರದ ಮಠದಲ್ಲಿ ಇವರ ಸ್ನೇಹಾದರಗಳನ್ನು ವಿರಜಾನಂದರು ಬಹಳ ಪಡೆದಿದ್ದರು. ಬೃಂದಾವನಕ್ಕೆ ತಪಸ್ಸಿಗೆಂದು ಹೊರಟು, ದಾರಿಯಲ್ಲಿ ಕಾಶಿಗೆ ಹೋಗಿದ್ದಾಗ ಇವರೊಂದಿಗೆ ಒಂದು ತಿಂಗಳು ಇರುವ ಸುಯೋಗ ಒದಗಿತ್ತು. ಈ ಒಂದು ತಿಂಗಳ ಮಧುರ ನೆನಪುಗಳು ವಿರಜಾನಂದರಿಗೆ ಅಮೂಲ್ಯವಾದದ್ದು. ಅಲ್ಲಿದ್ದಾಗ ಅವರು ಇಬ್ಬರಿಗಾಗಿಯೂ ಮಧುಕರಿ ಮಾಡುತ್ತಿದ್ದರು. ಭಿಕ್ಷೆಯಲ್ಲಿ ಕೆಲವೊಮ್ಮೆ ಅನ್ನ ಪಲ್ಯಗಳು ಸರಿಯಾಗಿ ಸಿಗದಿದ್ದಾಗ ವಿರಜಾನಂದರು ಪೇಟೆಯಿಂದ ತರಕಾರಿ ಅಕ್ಕಿಯನ್ನು ಅವರಿಗಾಗಿ ಕೊಂಡು ತರುತ್ತಿದ್ದುದನ್ನು ಕಂಡು ವೃದ್ಧರಾದ ಅದ್ವೈತಾನಂದರಿಗೆ ತುಂಬ ಖುಷಿಯಾಗುತ್ತಿತ್ತು. ಅಡುಗೆ ಮಾಡಿ ಇಬ್ಬರೂ ಒಂದೆಡೆ ಕುಳಿತು ಆನಂದದಿಂದ ಊಟಮಾಡುತ್ತಿದ್ದರು. ಸಂಜೆ ಅವರು ಇವರನ್ನು ಕರೆದೊಯ್ದು ಕಾಶಿಯ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲ ಒಂದೊಂದಾಗಿ ತೋರಿಸಿಕೊಂಡು ಬರುತ್ತಿದ್ದರು.

೧೯೦೯ರ ಪ್ರಾರಂಭದಲ್ಲಿ ಶ್ರೀಮತಿ ಸೇವಿಯರ್ ಕೆಲದಿನಗಳ ಮಟ್ಟಿಗೆಂದು ಇಂಗ್ಲೆಂಡಿಗೆ ಹೋದರು, ಆಗಾಗ ಅವರ ಕ್ಷೇಮ ಸಮಾಚಾರ ತಿಳಿದು ಬರುತ್ತಿತ್ತು. ೧೯೧೦ರಲ್ಲಿ ಅದ್ವೈತ ಆಶ್ರಮದ ಮುದ್ರಣಾಲಯಕ್ಕೆ ಸಂಬಂಧಿಸಿದ ಕೆಲವೊಂದು ಕೆಲಸಗಳಿಗಾಗಿ ವಿರಜಾನಂದರು ಕೊಲ್ಕತ್ತೆಗೆ ಹೋಗಬೇಕಾಯಿತು. ಕೊಲ್ಕತ್ತೆಗೆ ಹೋಗುವ ದಾರಿಯಲ್ಲಿ ಬೃಂದಾವನಕ್ಕೂ, ಕಾಶಿಗೂ ಹೋಗಿ ಸ್ವಲ್ಪ ದಿನಗಳಿದ್ದರು. ಕಾಶಿಯಲ್ಲಿ ಬೂಡೋ ಬಾಬಾ (ಸ್ವಾಮಿ ಸಚ್ಚಿದಾನಂದ)ರನ್ನು ಕಂಡರು. ಜನವರಿ ೧೩ರಂದು ಬೇಲೂರು ಮಠವನ್ನು ತಲುಪಿದರು. ೨೩ರಂದು, ಭಾನುವಾರ ಸ್ವಾಮಿ ಅದ್ವೈತಾನಂದರ ನೆನಪಿನಲ್ಲಿ ಸಮಾರಂಭವೊಂದನ್ನು ಇಟ್ಟುಕೊಂಡಿದ್ದರು. ಫೆಬ್ರವರಿ ೧ರಂದು ಆಚರಿಸಿದ ಸ್ವಾಮೀಜಿಯವರ ಜನ್ಮೋತ್ಸವವನ್ನು ಆರು ವರ್ಷಗಳ ನಂತರ ಕಂಡ ವಿರಜಾನಂದರಿಗೆ ತುಂಬ ಸಂತೋಷವಾಯಿತು. ೬ನೇ ಫೆಬ್ರವರಿ ಭಾನುವಾರ 'ಸಾರ್ವಜನಿಕ ಉತ್ಸವ'[೧] ಕೊನೆಯ ದಿನ ಮೂರು ಸಾವಿರ ದರಿದ್ರ ನಾರಾಯಣರನ್ನು ಕುಳ್ಳಿರಿಸಿ, ತೃಪ್ತಿಯಾಗುವವರೆಗೂ ಭೋಜನ ಮಾಡಿಸಲಾಗಿತ್ತು. ಅಲ್ಲದೆ ಮೂರುಸಾವಿರ ಭಕ್ತರೂ ಸಹ ಕುಳಿತು ಪ್ರಸಾದವನ್ನು ಪಡೆದರು. ಅಂದು ಸ್ವಾಮೀಜಿಯವರ ಗ್ರಂಥದಿಂದ ಆಯ್ದ

---

[೧] ಸಾರ್ವಜನಿಕ ಉತ್ಸವವನ್ನು ('ಸಾಧಾರಣ ಉತ್ಸವ') ಈಚೆಗೆ ರಾಮಕೃಷ್ಣರ ಜನ್ಮತಿಥಿಯ ನಂತರದ ಭಾನುವಾರದಂದು ಆಚರಿಸುತ್ತಾರೆ. ಅಂದಿನ ದಿನವಿಡೀ ಶ್ರೀರಾಮಕೃಷ್ಣರ ದರ್ಶನವಿರುತ್ತದೆ. ಬೇಲೂರು ಮಠದಲ್ಲಿ ಅಲ್ಲಿಯ ಒಳಗೂ ಹೊರಗೂ ರಸ್ತೆಯ ಇಬ್ಬದಿಯಲ್ಲಿಯೂ ಬಡಜನರು ತಮ್ಮ ಅಂಗಡಿ ಹರವಿ ಕುಳಿತುಕೊಳ್ಳುತ್ತಾರೆ. ಅದು ದೊಡ್ಡ ಸಂತೆ. ಸಂಜೆ ವಿವಿಧ ರೀತಿಯ ಆಕಾಶಬಾಣಗಳನ್ನು ಚಿಮ್ಮಿಸಿ, ವಿವಿಧ ಆಕಾರ ತಾಳುವಂತೆ ಮಾಡುತ್ತಾರೆ. ಇದನ್ನು ನೋಡಲು ಜನರು ಕಿಕ್ಕಿರಿದಿರುತ್ತಾರೆ. ಕೆಲವರು ಗಂಗೆಯಲ್ಲಿ ನೌಕೆ ಮಾಡಿಕೊಂಡು ಈ ಅದ್ಭುತವನ್ನು ವೀಕ್ಷಿಸುತ್ತಾರೆ.

ಕೆಲವು ಭಾಗಗಳನ್ನು ಓದಿ ಹೇಳಲಾಗಿತ್ತು ಮತ್ತು ಸ್ವಾಮೀಜಿಯವರ ಭಕ್ತರಾದ ಕೆಲವು ಗಣ್ಯವ್ಯಕ್ತಿಗಳಿಂದ ಭಾಷಣಗಳೂ ಇದ್ದವು.

ಮಾಯಾವತಿಯ ಕೆಲಸಗಳಿಗಾಗಿ ವಿರಜಾನಂದರು ಆಗಾಗ ಕೊಲ್ಕತ್ತೆಗೆ ಹೋಗಬೇಕಾಗುತ್ತಿತ್ತು. ಸೋದರಿ ನಿವೇದಿತೆಯನ್ನು ಕಾಣಲು ಕೆಲವು ಬಾರಿ ಅವರ ಮನೆಗೂ ಹೋಗಿದ್ದರು. ೧೯೧೦ರ ಮಾರ್ಚ್ ೧೧ರಂದು ವಿರಜಾನಂದರು ಬಾಬೂರಾಮ್ ಮಹಾರಾಜ್ ಮತ್ತಿತರರೊಂದಿಗೆ ದಕ್ಷಿಣೇಶ್ವರಕ್ಕೆ ಹೋಗಿ ಅಲ್ಲಿಯೇ ಪ್ರಸಾದ ಸ್ವೀಕರಿಸಿ ಬಂದಿದ್ದರು. ರಾಮಕೃಷ್ಣರ ಅಣ್ಣನ ಮಗನಾದ ರಾಮಲಾಲ್ ದಾದಾ, ಬಂದವರಿಗೆಲ್ಲ ತುಂಬ ಆದರೋಪಚಾರ ಮಾಡಿದ್ದರು.

ಮರುದಿನ ಮಾರ್ಚ್ ೩ರಂದು ಮಠದಲ್ಲಿ ಉತ್ಸವದ ವಾತಾವರಣವಿತ್ತು. ಏಕೆಂದರೆ ಅಧ್ಯಕ್ಷರಾದ ರಾಜಾ ಮಹಾರಾಜರು ದಕ್ಷಿಣ ಭಾರತದ ಯಾತ್ರೆಯನ್ನು ಮುಗಿಸಿ, ಸುಮಾರು ಒಂದೂವರೆ ವರ್ಷಗಳ ನಂತರ ಮಠಕ್ಕೆ ಹಿಂತಿರುಗಿದ್ದರು. ಅವರನ್ನು ಕಂಡ ಎಲ್ಲರ ಆನಂದಕ್ಕೆ ಪಾರವಿರಲಿಲ್ಲ. ಬಹುಕಾಲದ ನಂತರ ಮಹಾರಾಜರ ದರ್ಶನ ಮತ್ತು ಸತ್ಸಂಗವನ್ನು ಪಡೆದ ವಿರಜಾನಂದರು ಸಂತೃಪ್ತರಾದರು. ಮಹಾರಾಜರು ದಕ್ಷಿಣ ಪ್ರಾಂತ್ಯಗಳಿಗೆ ಭೇಟಿ ಇತ್ತಿದ್ದರಿಂದ ಅಲ್ಲೆಲ್ಲ ಶ್ರೀರಾಮಕೃಷ್ಣ ವಿವೇಕಾನಂದರ ಭಾವಧಾರೆಯು ಪುಷ್ಟಿಗೊಂಡಿತ್ತು. ೧೯೦೯ರ ಜನವರಿ ೩೦ರಂದು ಬೆಂಗಳೂರಿನಲ್ಲಿ ಹೊಸ ಮಠದ ಉದ್ಘಾಟನೆಯನ್ನೂ ಸಹ ಮಹಾರಾಜರು ಮಾಡಿದ್ದರು. ಅಲ್ಲಿಗೆ ಇವರನ್ನು ಸ್ವಾಮಿ ರಾಮಕೃಷ್ಣಾನಂದರು ಕರೆದೊಯ್ದಿದ್ದರು. ಅಂದಿನ ಸಮಾರಂಭದಲ್ಲಿ ಅಮೆರಿಕೆಯ ಸಿಸ್ಟರ್ ದೇವಮಾತಾ ಮತ್ತು ಬೆಂಗಳೂರಿನ ಗಣ್ಯವ್ಯಕ್ತಿಗಳು ಉಪಸ್ಥಿತರಿದ್ದರು. ಬೆಂಗಳೂರಿನ ಜನತೆಯ ಪರವಾಗಿ ಮೈಸೂರಿನ ದಿವಾನರು ಅಭಿನಂದನ ಪತ್ರವೊಂದನ್ನು ಓದಿದರು. ನಂತರ ಉಳಿದ ಅಭಿನಂದನಾ ಪತ್ರಗಳು ಓದಲ್ಪಟ್ಟವು. ಒಂದರಲ್ಲಿ ಹೀಗೆ ಹೇಳಲಾಗಿತ್ತು —

''ಭಗವಾನ್ ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಹೆಸರುಗಳು ಈ ಪ್ರಾಂತ್ಯಗಳಲ್ಲಿ ಮನೆಮಾತಾಗಿವೆ. ಅವರ ಕೃತಿಗಳು ಪ್ರಪಂಚದಲ್ಲೇ ಪ್ರಖ್ಯಾತವಾಗಿವೆ.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾऽऽತ್ಮಾನಂ ಸೃಜಾಮ್ಯಹಮ್ ॥

— ಈ ಭಗವದ್ವಾಣಿ ನಮಗೆಲ್ಲರಿಗೂ ಸುಪರಿಚಿತ. ಶ್ರೀರಾಮಕೃಷ್ಣರಲ್ಲಿ ಭಗವಂತನ ಈ ವಾಗ್ದಾನವು ಸಫಲಗೊಂಡಿದೆ ಎಂಬುದು ನಮ್ಮೆಲ್ಲರ ನಂಬುಗೆ. ನಿಮ್ಮ ಪದತಲದಲ್ಲಿ ಕಟ್ಟಡವೊಂದನ್ನು ನಿವೇದಿಸಲು ನಾವೆಲ್ಲ ಹರ್ಷಿಸುತ್ತೇವೆ. ಆಧ್ಯಾತ್ಮಿಕತೆಯನ್ನು ಎಲ್ಲೆಡೆ ಪಸರಿಸಲು ಬೇಕಾದ ಶಕ್ತಿಯನ್ನು ವಿಶ್ವೇಶ್ವರನು ನಿಮಗೆ ನೀಡಲಿ, ಬೆಂಗಳೂರು ಆಶ್ರಮವು ಉನ್ನತವಾದ ಭಾವನೆಗಳನ್ನು ಬಿತ್ತರಿಸುವ ಕೇಂದ್ರವಾಗಲಿ ಎಂಬುದೇ ನಮ್ಮ ಪ್ರಾರ್ಥನೆ.''

ಕೆ. ಪಿ. ಪುಟ್ಟಣ್ಣ ಚೆಟ್ಟಿಯವರು ಮತ್ತೊಂದು ಬಿನ್ನವತ್ತಳೆಯನ್ನು ಓದಿದರು. ಅದರ ಒಂದಂಶ:

''ಸ್ವಾಮಿಗಳೇ, ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ಪ್ರಾರಂಭಿಸಿದ ಕೆಲಸದ ಮಹತ್ತರವಾದ ಜವಾಬ್ದಾರಿಯು ಈಗ ನಿಮ್ಮ ಹೆಗಲ ಮೇಲಿದೆ. ನಿಮ್ಮಲ್ಲಿ ಸ್ವಾಮಿ ರಾಮಕೃಷ್ಣಾನಂದ, ಅಭೇದಾನಂದರಂತಹ ವೀರ ಸೇನಾನಿಗಳೂ ಮತ್ತು ಹಲವು ಮಹಾತ್ಮರೂ ಇರುವರು. ನೀವು ಅದೇ ರೀತಿಯ ಅದ್ಭುತ ಶಕ್ತಿಯುಳ್ಳ ಆಧ್ಯಾತ್ಮಿಕ ವ್ಯಕ್ತಿಗಳನ್ನು ಸೃಷ್ಟಿ ಮಾಡುವಂತಾಗಲಿ ಮತ್ತು ಅವರ ಮೂಲಕ ಭಾರತದ ತತ್ತ್ವಗಳ ಅನರ್ಘ್ಯ ರತ್ನವು ಮಸುಕಾಗದೆ, ಜಾಜ್ವಲ್ಯಮಾನವಾಗಿ ಮುಂದಿನ ಪೀಳಿಗೆಯವರಿಗೆ, ವಿಶಾಲ ವಿಶ್ವಕ್ಕೇ ತಲಪುವಂತಾಗಲಿ ಎಂಬುದೇ ಭಗವಂತನಲ್ಲಿ ನಮ್ಮೆಲ್ಲರ ಹೃತ್ಪೂರ್ವಕ ಪ್ರಾರ್ಥನೆ.''

ಸ್ವಾಮಿ ಬ್ರಹ್ಮಾನಂದರು ಬಿನ್ನವತ್ತಳೆಗಳಿಗೆ ಇಂಗ್ಲಿಷಿನಲ್ಲಿ ಸಂಕ್ಷಿಪ್ತವಾಗಿ ಉತ್ತರಿಸಿದರು. ಅದರ ಒಂದಂಶ:

''ಭಗವಂತನು ಎಲ್ಲೆಲ್ಲೂ ವಿರಾಜಮಾನನಾಗಿದ್ದಾನೆ. ಅವನಷ್ಟು ಸತ್ಯವು ಇನ್ನಾವುದೂ ಇಲ್ಲ. ಅವನು ಮಾತ್ರವೇ ಸತ್ಯ. ಮಿಕ್ಕದ್ದೆಲ್ಲ ಮಿಥ್ಯೆ. ಈ ಮಹಾ ಸತ್ಯವನ್ನು ಮಾನವ ಮರೆತು ಬಿಡುತ್ತಾನೆ. ಅಂಥವರಿಗೆ ಅವರು ಆತ್ಮಸ್ವರೂಪರು, ಎಲ್ಲವೂ ಆತ್ಮಮಯ, ಜಗನ್ಮಿಥ್ಯಾ ಎಂದು ಸಾರಿ ಸಾರಿ ಹೇಳಬೇಕಾಗುತ್ತದೆ.

''ನಮ್ಮ ಆಚಾರ್ಯರಾದ ಶ್ರೀರಾಮಕೃಷ್ಣ ಪರಮಹಂಸರು ಇದನ್ನು ಜಗತ್ತಿಗೆ ಸಾರಲೆಂದೇ ಭೂಮಿಗೆ ಅವತರಿಸಿದ್ದರು. ಅವರು ತಮ್ಮ ಈ ಮಹಾನ್ ಕಾರ್ಯಕ್ಕೆ ನಾಂದಿಯಿತ್ತು ಹೋಗಿದ್ದಾರೆ. ಅತ್ಯುನ್ನತ ಸತ್ಯದರ್ಶನಕ್ಕಾಗಿಯೂ ಜೀವನದ ಸಮಸ್ಯೆಗಳ ಪರಿಹಾರಕ್ಕಾಗಿಯೂ ಜಗತ್ತೀಗ ವ್ಯಾಕುಲಗೊಂಡಿದೆ. ಕ್ರಮೇಣ ಇಡೀ ಜಗತ್ತು ಆಧ್ಯಾತ್ಮಿಕತೆಯಿಂದ ರಂಜಿಸುತ್ತದೆ. ಅವರ ಅವತರಣದಿಂದ ಪ್ರಪಂಚದ ಗಾಳಿಯೂ ಸಹ ಶುದ್ಧಗೊಂಡಿದೆ. ಅವರ ಕೃಪೆಯಿಂದ ಸಕಲ ದೇಶಗಳೂ ಧನ್ಯತೆಯನ್ನು ಪಡೆಯುತ್ತವೆ.

''ಶ್ರೀರಾಮಕೃಷ್ಣರ ಅವತರಣವನ್ನು ಗುರುತಿಸಿ ಶ್ಲಾಘಿಸಿದ ಪ್ರಮುಖ ಸ್ಥಳಗಳಲ್ಲಿ ಬೆಂಗಳೂರು ಒಂದು ಎಂಬುದನ್ನು ಕಂಡು ತುಂಬ ಸಂತೋಷವಾಯಿತು. ಅವರ ಸಂದೇಶವನ್ನು ನೀವು ಸ್ವೀಕರಿಸಿದ್ದು ನಿಮ್ಮ ಮಹಾಭಾಗ್ಯವೇ ಸರಿ. ನೀವು ಸ್ವೀಕರಿಸಿ ಮೆಚ್ಚಿದ್ದರಲ್ಲಿ ಆಶ್ಚರ್ಯವಾದರೂ ಏನು? ಏಕೆಂದರೆ ನಿಮ್ಮದು ಮಹಾನ್ ಆಚಾರ್ಯರ ನಾಡು! ಈಗಲೂ ನೀವು ವೇದಾಧ್ಯಯನವನ್ನು ಪ್ರಾಚೀನದಂತೆಯೇ ಪರಿಶುದ್ಧವಾಗಿ, ಅನೂಚಾನವಾಗಿ ಕಾಪಾಡಿಕೊಂಡು ಬಂದಿರುವಿರಿ. ಇಂದಿನ ಹಿಂದೂ ರಾಜ-ಮಹಾರಾಜರುಗಳಲ್ಲಿ ನಿಮ್ಮ ಮೈಸೂರಿನ ಮಹಾರಾಜರು ಒಬ್ಬ ಸರ್ವಶ್ರೇಷ್ಠ ಧಾರ್ಮಿಕ ವ್ಯಕ್ತಿ. ಈ ಕೇಂದ್ರದಿಂದ ಮಹತ್ ಕಾರ್ಯಗಳಾಗುವುವೆಂದು ಆಶಿಸುವೆ. ಶ್ರೀರಾಮಕೃಷ್ಣರ ಆಶೀರ್ವಾದದಿಂದ, ವಿಶ್ವದಲ್ಲೆಲ್ಲ ಹರಿಯುತ್ತಿರುವ ಆಧ್ಯಾತ್ಮಿಕ ಪ್ರವಾಹ

ದಲ್ಲಿ ನೀವೆಲ್ಲರೂ ಸಂಪೂರ್ಣವಾಗಿ ಭಾಗಿಗಳಾಗುವಂತಾಗಲಿ ಎಂಬುದೇ ನನ್ನ ಪ್ರಾರ್ಥನೆ.''

ರಾಜಾ ಮಹಾರಾಜರ ಭಾಷಣದ ನಂತರ ಅವರ ಆದೇಶದ ಮೇರೆಗೆ ಸ್ವಾಮಿ ರಾಮಕೃಷ್ಣಾನಂದರು ತಮ್ಮ ಭಾಷಣದ ಮೂಲಕ ರಾಮಕೃಷ್ಣ ಮಿಷನ್ನಿನ ಉದ್ದೇಶಗಳನ್ನು ವಿವರಿಸಿದರು. ತದನಂತರ ಸಿಸ್ಟರ್ ದೇವಮಾತಾ ಸಹ ತಮ್ಮ ಭಾಷಣವನ್ನು ನೀಡಿದರು.

ಈ ಸಮಯದಲ್ಲೇ ಮಿಸೆಸ್ ಸೇವಿಯರ್‌ರವರ ಕುಶಲ ಸಮಾಚಾರ ಹೊತ್ತ ಲಂಡನ್ನಿನ ಪತ್ರ ವಿರಜಾನಂದರ ಕೈ ಸೇರಿತು. ಈ ಸಲದ ರಾಮಕೃಷ್ಣ ಜನ್ಮೋತ್ಸವವನ್ನು ವೀಕ್ಷಿಸುವ ಸೌಭಾಗ್ಯ ವಿರಜಾನಂದರದಾಗಿತ್ತು. ಬ್ರಹ್ಮಾನಂದರು ದಕ್ಷಿಣ ಭಾರತಕ್ಕೆ ಭೇಟಿ ಇತ್ತಾಗ, ಅಲ್ಲಿಂದ ರಾಮನಾಮ ಸಂಕೀರ್ತನೆಯನ್ನು ಬರೆಸಿ ತಂದಿದ್ದರು. ಅದರಲ್ಲಿ ಶ್ರೀರಾಮಚಂದ್ರನ ಸಮಗ್ರ, ಪವಿತ್ರ ಚರಿತ್ರೆಯು ಸಂಕ್ಷೇಪವಾಗಿ, ಸರಳ ಸಂಸ್ಕೃತ ಭಾಷೆಯಲ್ಲಿ ವರ್ಣಿತವಾಗಿತ್ತು. ಅದಕ್ಕೆ ರಾಗವನ್ನು ಹಾಕಿ ಮಠದ ಸಂನ್ಯಾಸಿ-ಬ್ರಹ್ಮಚಾರಿಗಳಿಗೆ ಕಲಿಸಲಾಗಿತ್ತು. ರಾಮಕೃಷ್ಣರ ಉತ್ಸವದ ದಿನ ಅದನ್ನು ಎಲ್ಲರೂ ಒಂದೇ ಸ್ವರದಲ್ಲಿ ಹಾಡಿದ್ದರು. ಸ್ವಯಂ ಬ್ರಹ್ಮಾನಂದರೂ ಸಹ ಇದರಲ್ಲಿ ಪಾಲ್ಗೊಂಡಿದ್ದರು. ಈ ಹೊಸ ಸಂಕೀರ್ತನೆಯು ಎಲ್ಲರ ಮನವನ್ನು ಸೂರೆಗೊಂಡಿತ್ತು.

ಬೇಸಿಗೆ ಕಾಲಿಡುತ್ತಲಿತ್ತು. ವಿರಜಾನಂದರು ಶ್ರೀಮಾತೆಯವರ ದರ್ಶನ ಪಡೆಯಲು ಜಯರಾಂಬಾಟಿಗೆ ಹೊರಟರು. ಇವರೊಂದಿಗೆ ನಿರ್ಮಲ್ (ಮುಂದೆ ಸ್ವಾಮಿ ಮಾಧವಾನಂದ) ಸಹ ಇದ್ದರು; ಅವರು ಮಾಯಾವತಿಯಲ್ಲಿ ಸೇವೆ ಸಲ್ಲಿಸಲು ವಿರಜಾನಂದರೊಂದಿಗೆ ಹೊರಡಬೇಕಿತ್ತು. ಜಯರಾಂಬಾಟಿಯಲ್ಲಿ ಶ್ರೀಮಾತೆಯವರ ಹಳೆಯ ವಾಸಗೃಹದ ಮುಂದೆ ಕಾಳೀಮಾವನ ಹುಲ್ಲಿನ ಮಹಡಿ ಮನೆ ನಿರ್ಮಿತವಾಗಿತ್ತು. ವಿರಜಾನಂದರು ಮತ್ತು ನಿರ್ಮಲ್ ಬೇಸಿಗೆಯಾದ್ದರಿಂದ ಆ ಮನೆಯ ಜಗುಲಿಯಲ್ಲಿ ಸೊಳ್ಳೆ ಪರದೆ ಕಟ್ಟಿ ಮಲಗುತ್ತಿದ್ದರು. ಇವರಿಬ್ಬರೂ ಜಯರಾಂಬಾಟಿಯಲ್ಲಿರುವಾಗಲೇ ಶಿಲ್ಲಾಂಗ್ ಮತ್ತು ಕೊಲ್ಕತ್ತೆಯಿಂದ ನಾಲ್ವರು ಯುವಕರು ಶ್ರೀಮಾತೆಯವರ ದರ್ಶನ ಪಡೆದು, ಅವರಿಂದ ದೀಕ್ಷೆಯನ್ನು ಪಡೆಯಬೇಕೆಂಬ ಬಯಕೆಯಿಂದ ಬಂದಿದ್ದರು. ಇವರಲ್ಲೊಬ್ಬರು ಮುಂದೆ ಮಠದ ಸುವಿಖ್ಯಾತ ಪಂಡಿತ ಸಂನ್ಯಾಸಿಗಳಾದ ಸ್ವಾಮಿ ಜಗದಾನಂದರು.[೨] ಇವರು ತಮ್ಮ ೭೦ನೇ ವಯಸ್ಸಿನಲ್ಲಿ ೧೯೫೧ರಲ್ಲಿ ಬೃಂದಾವನದಲ್ಲಿ ತಮ್ಮ ದೇಹತ್ಯಾಗ ಮಾಡಿದರು.

ಮಾಯಾವತಿಗೆ ಹಿಂತಿರುಗಿದ್ದ ವಿರಜಾನಂದರಿಗೆ ೧೯೧೧ರ ಮಧ್ಯಭಾಗದಲ್ಲೊಂದು ಆತಂಕದ ವರದಿ ಬಂದಿತು. ಪೂಜನೀಯ ಶಶಿ ಮಹಾರಾಜರು ಅಸ್ವಸ್ಥರಾಗಿದ್ದು, ಕೊಲ್ಕತ್ತೆಯ ಉದ್ಬೋಧನ ಕಾರ್ಯಾಲಯದಲ್ಲಿದ್ದಾರೆ, ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೂ ಆರೋಗ್ಯದಲ್ಲಿ ಸುಧಾರಣೆಯೇನೂ ಕಂಡು ಬರುತ್ತಿಲ್ಲ. ಅವರಿಗಂಟಿದ್ದ ವ್ಯಾಧಿಯಾದರೋ ರಾಜಯಕ್ಷ್ಮ (ಶ್ವಾಸಕೋಶದ ಕ್ಷಯ). ವಿರಜಾನಂದರು ಉದ್ವಿಗ್ನತೆಯಿಂದ ಕಾಲಕಳೆಯತೊಡಗಿದರು. ಕಾರ್ಯನಿಮಿತ್ತ ಈಗಷ್ಟೆ ಕೆಲವು ತಿಂಗಳುಗಳನ್ನು ಮಠದಲ್ಲಿ ಕಳೆದು ಬಂದಿದ್ದರು, ಮತ್ತೆ ಹೋಗುವುದು ಸಾಧ್ಯವಿರಲಿಲ್ಲ. ಶಶಿ ಮಹಾರಾಜರ ನೆನಪು ಮತ್ತೆ ಮತ್ತೆ ಬರಲಾರಂಭಿಸಿತು. ಅವರು ಮದ್ರಾಸಿಗೆ ಹೋದಾಗಿನಿಂದ ಅವರನ್ನು ವಿರಜಾನಂದರು ನೋಡಿರಲಿಲ್ಲ. ಅವರು ಮಠಕ್ಕೆ ಸೇರಲು ಸಹಾಯ ಮಾಡಿದವರಲ್ಲಿ ಶಶಿ ಮಹಾರಾಜರೂ ಒಬ್ಬರಲ್ಲವೆ? ಅವರೇ ತಾನೇ ಗಣಿತ ಹೇಳಿಕೊಡುತ್ತೇನೆಂದು ಕಾಳೀಕೃಷ್ಣರನ್ನು ಮಠಕ್ಕೆ ಕರೆದದ್ದು? ಆದರೆ ಎಷ್ಟು ಚೆನ್ನಾಗಿ ಗಣಿತ ಹೇಳಿಕೊಟ್ಟರೆಂದರೆ ಜಗತ್ತಿನ ಲೆಕ್ಕಾಚಾರಗಳೆಲ್ಲ ಚಿರಕಾಲಕ್ಕೂ ಅಳಿಸಿಯೇ ಹೋಯಿತು! ೧೯೧೧ರ ಆಗಸ್ಟ್ ೨೧ರಂದು ರಾಮಕೃಷ್ಣಗತಪ್ರಾಣರಾದ ಸ್ವಾಮಿ ರಾಮಕೃಷ್ಣಾನಂದರು ಮಹಾಸಮಾಧಿಯನ್ನು ಹೊಂದಿದರೆಂಬ ದುಃಖಕರವಾದ ವಾರ್ತೆಯು ಮಾಯಾವತಿಯನ್ನು ತಲುಪಿತು. ರಾಮಕೃಷ್ಣಾನಂದರು ಕೊಲ್ಕತ್ತೆಗೆ ಬಂದು ಎರಡು ತಿಂಗಳಾಗಿತ್ತಷ್ಟೆ. ಅವರ ವಯಸ್ಸು ೫೦ ವರ್ಷವೂ ಆಗಿರಲಿಲ್ಲ. ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರಲ್ಲಿ ಮೊದಲು ದೇಹತ್ಯಾಗ ಮಾಡಿದವರು ಸ್ವಾಮಿ ಯೋಗಾನಂದರು, ಅವರ ನಂತರ ಸ್ವಾಮೀಜಿಯವರು, ತದನಂತರ ನಿರಂಜನ ಮಹಾರಾಜ್ ಮತ್ತು ಅದ್ವೈತಾನಂದರು, ಐದನೆಯವರೇ ಶಶಿ ಮಹಾರಾಜ್. ದಕ್ಷಿಣ ಭಾರತದಲ್ಲಿ ಶಶಿ ಮಹಾರಾಜರು ವಿನಿಯೋಗಿಸಿದ ಅವಿಶ್ರಾಂತ ಸೇವೆಯ ೧೪ ವರ್ಷಗಳು ರಾಮಕೃಷ್ಣ ಸಂಘದ ಇತಿಹಾಸದಲ್ಲಿ ಹೊಸದೊಂದು ಗೌರವೋಜ್ವಲ ಅಧ್ಯಾಯವನ್ನೇ ರಚಿಸಿತ್ತು. ರಾಮಕೃಷ್ಣಾನಂದರ ದೇಹತ್ಯಾಗದ ವಿಷಯವನ್ನು ಕೇಳಿದ ಬ್ರಹ್ಮಾನಂದರು ವಿಷಣ್ಣರಾಗಿ, ''ಒಬ್ಬ ದಿಕ್ಪಾಲಕ ಹೊರಟುಹೋದ; ದಕ್ಷಿಣ ದಿಕ್ಕು ಅಂಧಕಾರದಲ್ಲಿ ಮುಳುಗಿದಂತಿದೆ'' ಎಂದಿದ್ದರು.

ಸ್ವಾಮಿ ಶಾರದಾನಂದರು ತಮ್ಮ ಸೋದರ ಸಂನ್ಯಾಸಿಯ ಮಹಾಸಮಾಧಿಯ ನಂತರ 'ಉದ್ಬೋಧನ' ಪತ್ರಿಕೆಯಲ್ಲಿ ಹೀಗೆಂದು ಬರೆದಿದ್ದರು:

''ಪ್ರಿಯದರ್ಶನರಾದ ರಾಮಕೃಷ್ಣಾನಂದರ ಅನನ್ಯ ಗುರುಭಕ್ತಿ, ಕೈಗೊಂಡ ಕೆಲಸದಲ್ಲಿ ನಿಷ್ಠೆ, ಸೇವಾಪರಾಯಣತೆ, ಜ್ವಲಂತ

---

೨ ಈ ಮಹಾನ್ ಸಂನ್ಯಾಸಿಯ ಬಗ್ಗೆ ಬರೆದಿರುವ ಹೃದಯಸ್ಪರ್ಶಿ ಲೇಖನವೊಂದನ್ನು ಶ್ರೀ ಸುರೇಂದ್ರನಾಥ ಚಕ್ರವರ್ತಿಗಳು ಪ್ರಕಾಶನಕ್ಕೆ ತಂದಿದ್ದಾರೆ (ಉದ್ಬೋಧನ, ಭಾದ್ರಪದ ೧೩೫೯, ಬಂಗಾಳಿ ವರ್ಷ). ಈ ಲೇಖಕರು ಜಗದಾನಂದರ ಅಂತರಂಗ ಸ್ನೇಹಿತರು; ಒಟ್ಟಿಗೆ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದಿದ್ದರು. ಸ್ವಾಮಿ ಜಗದಾನಂದರಿಂದ ಅನುವಾದಿಸಲ್ಪಟ್ಟಿರುವ ಶಂಕರಾಚಾರ್ಯರ '**ಉಪದೇಶ-ಸಾಹಸ್ರೀ**' '**ವಾಕ್ಯವೃತ್ತಿ**', '**ಆತ್ಮಜ್ಞಾನೋಪದೇಶ ವಿಧಿ**' ಹಾಗೂ ಬಂಗಾಳಿ ಭಾಷೆಗೆ ಅನುವಾದಿಸಲ್ಪಟ್ಟಿರುವ ಸುರೇಶ್ವರಾಚಾರ್ಯರ '**ನೈಷ್ಕರ್ಮ್ಯಸಿದ್ಧಿ**' ಗ್ರಂಥಗಳು ಓದಲು ಯೋಗ್ಯವಾದವುಗಳು. ಸ್ವಾಮಿ ಶಾರದಾನಂದರಿಂದ ರಚಿಸಲ್ಪಟ್ಟ '**ಶ್ರೀ ರಾಮಕೃಷ್ಣ ಲೀಲಾಪ್ರಸಂಗ**' (Sri Ramakrishna—The Great Master) ಎಂಬ ಗ್ರಂಥವನ್ನು ಇವರು ಇಂಗ್ಲಿಷಿಗೆ ಅನುವಾದಿಸಿರುವುದು ಇವರ ಮತ್ತೊಂದು ಮಹತ್ತಾದ ಕೀರ್ತಿ.

ತ್ಯಾಗ ಹಾಗೂ ದೈವಭಕ್ತಿಯು ಇವರನ್ನು ಒಂದೆಡೆ ಭಕ್ತರ ಆದರ್ಶವನ್ನಾಗಿಸಿದ್ದರೆ, ಮತ್ತೊಂದೆಡೆ ಇವರ ವಿದ್ಯೆ, ಬುದ್ಧಿ, ವಿನಯ, ಶಾಸ್ತ್ರಜ್ಞಾನ, ಸಹಾನುಭೂತಿ ಮತ್ತು ಸಹೃದಯತೆಯು ಇವರನ್ನು ಸಂಸಾರಾನಲ ದಗ್ಧ ಜೀವಿಗಳಿಗೆ ಶಾಂತಿ-ಭರವಸೆಗಳ ಆಶ್ರಯದಾತರನ್ನಾಗಿಸಿತ್ತು.''

* * *

ಕೆಲವು ತಿಂಗಳ ನಂತರ ಮತ್ತೊಂದು ದಾರುಣ ಸುದ್ದಿಯನ್ನು 'ಉದ್ಬೋಧನ'ದಲ್ಲಿ ಶಾರದಾನಂದರು ಹೀಗೆ ಮುದ್ರಿಸಬೇಕಾಯಿತು:

''ರಾಮಕೃಷ್ಣ ನಭದ ಮತ್ತೊಂದು ಉಜ್ವಲ ತಾರೆಯ ಸ್ನಿಗ್ಧೋಜ್ವಲ ಕಿರಣ ಮಾಲೆಯ ಅಮೃತವರ್ಷಣದಿಂದ ಇಂದು ಭಾರತ ಮತ್ತು ಇಡೀ ಧರೆಯೇ ವಂಚಿತವಾಗಿದೆ. ಸ್ವಾಮಿ ವಿವೇಕಾನಂದರ ಮೂಲಕ ಶ್ರೀ ಉಮಾಮಹೇಶ್ವರರ ಪರಮ ಪದದಲ್ಲಿ ನಿವೇದಿಸಲ್ಪಟ್ಟ ಕುಮಾರಿ ನಿವೇದಿತೆಯು ಗುರುವಿನ ಮೂಲಕ ಬಹುಜನ ಹಿತಕ್ಕಾಗಿ ಯಾವೊಂದು ವ್ರತವನ್ನು ಕೈಕೊಂಡಿದ್ದರೋ, ಅದನ್ನು ದಕ್ಷ ರೀತಿಯಲ್ಲಿ ಪೂರ್ಣಗೊಳಿಸಿ, ತನ್ನ ಶರೀರ-ಮನಸ್ಸನ್ನು ಅಗ್ರ ಆಹುತಿಯನ್ನಾಗಿತ್ತು, ಪರಂಧಾಮಗೈದು, ಇನ್ನೂ ಹೆಚ್ಚಿನ ಕೆಲಸ ಮಾಡುವ ಬಲ ಪಡೆದಿದ್ದಾರೆ. ಸ್ವಾಮೀಜಿಯವರು ನಿವೇದಿತೆಗೆ ವ್ರತವನ್ನೀಯುತ್ತ ಆಶೀರ್ವದಿಸಿ ಹೀಗೆಂದಿದ್ದರು, ''ನೀನು ಭಾರತದ ಭಾವೀ ಜನತೆಗೆ ಶಿಕ್ಷಕಿಯಾಗು'' ಎಂದು. ನಿವೇದಿತೆಯೂ ಸಹ ಈ ಆದೇಶವನ್ನು ೧೪ ವರ್ಷಗಳು ಕಾಯೇನ-ವಾಚಾ-ಮನಸಾ ಅಕ್ಷರಶಃ ಪಾಲಿಸಿದ್ದಾರೆ. ಅವರೀಗ ಸ್ಥೂಲ ತನುವನ್ನು ತ್ಯಜಿಸಿ, ದೇವರ ಕೃಪೆಯಿಂದ ಮೃತ ಸಂಜೀವಿನಿಯಾದ ಭಾವತನುವಾಗಿ ಪರಿವರ್ತಿತರಾಗಿ ತನ್ನ ಗುರುವಿನೊಡನೆ ಎಲ್ಲ ಭಾರತೀಯರ ಹೃದಯವನ್ನು ಬೆಳಗುತ್ತಿದ್ದಾರೆ. ಸೂಕ್ಷ್ಮ ಪ್ರೇರಣಾಶಕ್ತಿಯನ್ನಾಗಿ ಎಲ್ಲರನ್ನೂ ಕಲ್ಯಾಣದ ಮಾರ್ಗದಲ್ಲಿ ಕೊಂಡೊಯ್ಯುವ ಶಕ್ತಿ ಪಡೆದಿದ್ದಾರೆ. 'ಸೂಕ್ಷ್ಮವೇ ಸ್ಥೂಲದ ಪ್ರೇರಕ, ಮನವೇ ಜಡದ ನಿಯಾಮಕ.' ಆದ್ದರಿಂದ ನಾರೀದೇಹದಲ್ಲಿ ಬೆಳಗುತ್ತಿದ್ದ ನಿವೇದಿತಾ ಎಂಬ ಭಾವರಾಶಿಯು ತನ್ನ ಸ್ಥೂಲತನುವನ್ನು ಬಿಟ್ಟ ಮೇಲೆ ತನ್ನ ಕೆಲಸವನ್ನು ಇನ್ನೂ ವಿಶೇಷ ರೂಪದಲ್ಲಿ ಮಾಡುತ್ತಿದೆಯೋ ಏನೋ?! ಹೇಳಬಲ್ಲವರಾರು?! ಸೂಕ್ಷ್ಮದೃಷ್ಟಿ ಸಂಪನ್ನನಾದ ಸಾಧಕನು ಜನ್ಮ ಮೃತ್ಯುಗಳಾಚೆಗೂ ದೃಷ್ಟಿ ಬೀರಿ ಈ ನಿಜವನ್ನು ಹೃದ್ಗತಮಾಡಿಕೊಳ್ಳಬಲ್ಲ ಮತ್ತು ಅತ್ಯಂತ ವಿಷಾದದ ಸಮಯದಲ್ಲೂ ಶಾಂತಿ ಸಮಾಧಾನದಿಂದಿರಬಲ್ಲ. ಆದರೆ ಸ್ಥೂಲ ದೃಷ್ಟಿಯನ್ನುಳ್ಳ ನಾವು ಸ್ವಾರ್ಥಗಂಧವಿಹೀನಳಾದ ನಿವೇದಿತೆಯನ್ನು ಇನ್ನು ಮುಂದೆ ಕಾಣಲಾಗದೆ ಇರುವುದರಿಂದ ವ್ಯಥಿತರಾಗಿ ಓದುಗರಿಗೆ ಹೀಗೆಂದು ತಿಳಿಸುತ್ತಿದ್ದೇವೆ.

''ಭಾರತದ ಚಿರ ಕಲ್ಯಾಣಾಕಾಂಕ್ಷಿಣಿಯೂ ಪರಮ ಆತ್ಮೀಯಳೂ ಆದ ಬ್ರಹ್ಮಚಾರಿಣಿ ನಿವೇದಿತೆಯು ಭೂಸ್ವರ್ಗವಾದ ಹಿಮಾಲಯದ ಡಾರ್ಜಿಲಿಂಗಿನಲ್ಲಿ ಸುಮಾರು ಎರಡು ವಾರಕ್ಕೂ ಹೆಚ್ಚಾಗಿ ಆಮಶಂಕೆ ರೋಗದಿಂದ ನರಳುತ್ತಿದ್ದು, ಕಳೆದ ಶುಕ್ರವಾರ, ೧೩ನೇ ಅಕ್ಟೋಬರ್ (೧೯೧೧) ರಂದು ತಮ್ಮ ನಶ್ವರ ಸ್ಥೂಲ ಶರೀರವನ್ನು ತ್ಯಜಿಸಿದ್ದಾರೆ. ಹರಿಃ ಓಂ ಶಾಂತಿಃ ಶಾಂತಿಃ ಶಾಂತಿಃ''

ಮಾಯಾವತಿಯಲ್ಲಿ ಮದರ್ ಸೇವಿಯರ್ (೧೯೧೧ರ ಮಾರ್ಚ್‌ನಲ್ಲಿ ಇಂಗ್ಲೆಂಡಿನಿಂದ ಹಿಂತಿರುಗಿದ್ದರು), ವಿರಜಾನಂದರು ಮತ್ತಿತರ ಸಂನ್ಯಾಸಿ ಬ್ರಹ್ಮಚಾರಿಗಳು ಸೋದರಿ ನಿವೇದಿತೆಯು ಮಾಯಾವತಿಗೆ ನೀಡಿದ ಕೊನೆಯ ಭೇಟಿಯನ್ನು ನೆನೆದರು. ನಾಲ್ಕು ತಿಂಗಳ ಹಿಂದಷ್ಟೇ ಮೇ ೧೯ರಂದು ಡಾ. ಜಗದೀಶ್ ಚಂದ್ರ ಬೋಸ್, ಅವರ ಪತ್ನಿ ಅಬಲಾ ಬೋಸ್, ಅವರ ಸೋದರನ ಮಗನಾದ ಅರವಿಂದ ಬಸು (ಖೋಕಾ)ಗಳೊಂದಿಗೆ ನಿವೇದಿತೆಯು ಮಾಯಾವತಿಗೆ ಬಂದು ಒಂದು ತಿಂಗಳ ಕಾಲ ತಂಗಿದ್ದರು. ಸುತ್ತಮುತ್ತಲ ಸ್ಥಳಗಳಲ್ಲಿ ತಿರುಗಾಡಿ ಬರುತ್ತಿದ್ದರು. ಸ್ವಾರಸ್ಯಕರವಾದ ಅನೇಕ ಘಟನೆಗಳನ್ನು ಹೇಳಿ ತಮ್ಮ ಮಾತುಕತೆಗಳಿಂದ ಎಲ್ಲರನ್ನು ರಂಜಿಸಿದ್ದರು. ಒಂದು ದಿನ ಎಲ್ಲರೊಂದಿಗೆ ಬ್ಯಾಡ್‌ಮಿಂಟನ್ ಸಹ ಆಡಿದ್ದರು. ಜೂನ್ ೧೮ರಂದು, ಭಾನುವಾರ 'ಸಂಘದ ಮೂಲಕ ವಿದ್ಯಾಪ್ರಚಾರ' ಎಂಬ ವಿಷಯದ ಬಗ್ಗೆ ಘನ ವಿಚಾರಗಳನ್ನು ಹೊರಹೊಮ್ಮಿಸುವಂತಹ ಚರ್ಚೆಯನ್ನು ಆಶ್ರಮವಾಸಿಗಳೊಂದಿಗೆ ನಡೆಸಿದ್ದರು. 'ಜ್ಞಾನ ಚರ್ಚೆಯ ಕ್ಷೇತ್ರದಲ್ಲಿ ಧಾರ್ಮಿಕ ಮತ್ತು ಲೌಕಿಕ ಎಂಬ ಭೇದವನ್ನು ಉಳಿಸಿಕೊಳ್ಳುವುದು ವ್ಯರ್ಥ' ಎಂದಿದ್ದರು.[೩]

೧೯೧೧ರಲ್ಲಿ ರಾಮಕೃಷ್ಣ ಸಂಘದ ಸಾಧುಗಳಿಗೂ ಮತ್ತು ಭಕ್ತರಿಗೂ ಮತ್ತೊಂದು ದುಃಖದ ಸಂಗತಿ ಕಾದಿತ್ತು. ಸೋದರಿ ನಿವೇದಿತೆಯ ದೇಹತ್ಯಾಗದ ಮಾರನೇ ದಿನವೇ, ಅಂದರೆ ಅಕ್ಟೋಬರ್ ೧೪ರಂದು ರಾಮಕೃಷ್ಣರ ಗೃಹಸ್ಥ ಭಕ್ತರಾದ ದೇವೇಂದ್ರನಾಥ ಮಜುಮ್ದಾರ್‌ರವರು ಪ್ರಜ್ಞಾಪೂರ್ವಕವಾಗಿ ಇಷ್ಟ ಮಂತ್ರವನ್ನು ಜಪಿಸುತ್ತ ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಿದ್ದರು. ಇವರು ಕೊಲ್ಕತ್ತೆಯ ಎಂಟಾಲಿ ಎಂಬಲ್ಲಿರುವ ರಾಮಕೃಷ್ಣ ಮಿಷನ್ನಿನ ಶಾಖಾಕೇಂದ್ರದ ವ್ಯವಸ್ಥಾಪಕರಾಗಿದ್ದರು. ಇವರನ್ನು ಕುರಿತು ಬರೆಯುತ್ತ ಶರತ್ ಮಹಾರಾಜರು, ''ಭಾವರಸದಲ್ಲಿ ತೇಲುವ ಅವರ ಸೌಮ್ಯ ಮೂರ್ತಿಯನ್ನು ಇನ್ನು ನೋಡಲಾಗುವುದಿಲ್ಲವೆಂದು ನೆನೆದು ಅತ್ಯಂತ ವ್ಯಥಿತರಾಗಿದ್ದೇವೆ'' ಎಂದಿದ್ದಾರೆ. ದೇವೇನ್ ಬಾಬುಗಳು ಅನೇಕ ಹಾಡುಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಗುರುವಂದನೆಯಾದ 'ಭವಸಾಗರ ತಾರಣ ಕಾರಣ ಹೇ'

---

೩. ಭಗಿನಿ ನಿವೇದಿತೆಯು ಈ ಹಿಂದೆ ಮೂರು ಬಾರಿ ಮಾಯಾವತಿಗೆ ಹೋಗಿದ್ದರು. ಮೊದಲ ಬಾರಿ ೧೯೦೨ರ ಮೇ ತಿಂಗಳಲ್ಲಿ ಜಪಾನಿ ಕಲಾವಿದನಾದ ಓಕಾಕುರಾರವರನ್ನು ಕರೆದುಕೊಂಡು ಹೋಗಿದ್ದರು. ಎರಡನೇ ಬಾರಿ ಡಾ. ಜಗದೀಶ್ ಚಂದ್ರ ಬೋಸ್, ಶ್ರೀಮತಿ ಅಬಲಾ ಬೋಸ್ ಮತ್ತವರ ಆತ್ಮೀಯರೊಬ್ಬರು ಹಾಗೂ ಸಿಸ್ಟರ್ ಕ್ರಿಸ್ಟೀನ್ ರವರೊಂದಿಗೆ. ೧೯೦೭ರಲ್ಲಿ ಬೋಸ್ ದಂಪತಿಗಳೊಂದಿಗೆ ಮೂರನೆಯ ಬಾರಿ.

ಮತ್ತು ರಾಮಕೃಷ್ಣರ ಬಗ್ಗೆ ರಚಿಸಿದ 'ಭವಭಯಭಂಜನ ಪುರುಷ ನಿರಂಜನ' ಎಂಬ ಹಾಡಿನಿಂದಾಗಿ ಅವರು ಅಮರರಾಗಿದ್ದಾರೆ.

ಸ್ವಾಮೀಜಿಯವರ ಕೃತಿಸಂಗ್ರಹದ ಐದನೇ ಭಾಗ ಸಂಪೂರ್ಣವಾಗುತ್ತಿದ್ದಂತೆ, ಅವರ ಸವಿಸ್ತಾರವಾದ ಜೀವನ ಚರಿತ್ರೆಯನ್ನು ಮುದ್ರಿಸುವ ಹೊಸ ಆಲೋಚನೆಯು ವಿರಜಾನಂದರಿಗೆ ಬಂದಿತು. ಅದನ್ನು ಮದರ್ ಸೇವಿಯರ್‌ಗೆ ತಿಳಿಸಿದಾಗ ಅವರೂ ಸಹ ಉತ್ಸಾಹ ತೋರಿದರು. ತಕ್ಷಣವೇ ವಿರಜಾನಂದರು ನಾನಾ ಮೂಲಗಳಿಂದ ಅಗತ್ಯವಿರುವ ವಿಷಯಗಳನ್ನು ಸಂಗ್ರಹಿಸತೊಡಗಿದರು. ಅದೃಷ್ಟವಶಾತ್ ಮಾಯಾವತಿಯಲ್ಲಾಗ ಫ್ರಾನ್ಸಿಸ್ ಜಾನ್ ಅಲೆಕ್ಸಾಂಡರ್ ಎಂಬ ವಿಖ್ಯಾತ ಅಮೇರಿಕನ್ ಲೇಖಕರೊಬ್ಬರು ತಂಗಿದ್ದರು. ಪೌರಾತ್ಯ ಧರ್ಮ ಮತ್ತು ಶಾಸ್ತ್ರಗಳ ಬಗ್ಗೆ, ವಿಶೇಷವಾಗಿ ಸ್ವಾಮಿ ವಿವೇಕಾನಂದರ ಬಗ್ಗೆ ಅವರು ತುಂಬ ಗೌರವ ತಾಳಿದ್ದರು. ಅವರಲ್ಲೊಂದು ಅಪೂರ್ವ ಶಕ್ತಿಯಿತ್ತು; ಟೈಪ್‌ರೈಟರ್ ಮುಂದೆ ಕುಳಿತು ಒಂದು ಗಂಟೆಯೊಳಗಾಗಿ ೬-೭ ಪುಟಗಳ ಸಾಹಿತ್ಯ ರಚಿಸಿ ಟೈಪ್ ಮಾಡುತ್ತಿದ್ದರು. ಎಲ್ಲವನ್ನೂ ಹೃದಯದ ಪ್ರೇರಣೆಯಿಂದಲೇ ಬರೆಯುತ್ತಿದ್ದರು. ವಿರಜಾನಂದರು ಈತನಿಗೆ ಸ್ವಾಮೀಜಿಯವರ ಜೀವನ ಚರಿತ್ರೆ ಬರೆಯುವ ಜವಾಬ್ದಾರಿ ನೀಡಲು ಸಂಕಲ್ಪಿಸಿದರು. ಅಲೆಕ್ಸಾಂಡರ್ (ಫ್ರ್ಯಾಂಕ್) ಸಹ ಈ ಕೆಲಸವನ್ನು ತುಂಬ ಸಂತೋಷದಿಂದ ಒಪ್ಪಿಕೊಂಡರು. ಸ್ವಾಮಿ ವಿರಜಾನಂದರು ವಿಷಯವನ್ನು ಸಂಗ್ರಹಿಸಿ ಒದಗಿಸುವುದು, ಫ್ರ್ಯಾಂಕ್ ಚರಿತ್ರೆಯನ್ನು ಬರೆಯುವುದು, ನಂತರ ವಿರಜಾನಂದರು ಮದರ್ ಸೇವಿಯರ್‌ರವರ ಸಹಾಯದಿಂದ ಅದನ್ನು ತಿದ್ದುವುದು — ಹೀಗೆಂದು ನಿರ್ಧಾರಿತವಾಯಿತು.

ಫ್ರ್ಯಾಂಕ್ ಬರೆಯುವ ಕೆಲಸವನ್ನು ಬೇಗನೆ ಪ್ರಾರಂಭಿಸಿದರು. ಅವರ ಭಾಷೆ ಸ್ಪಷ್ಟವಾಗಿಯೂ, ಭಾವಮಯವಾಗಿಯೂ ಇದ್ದಿತಾದರೂ ಅನಗತ್ಯವಾದ ಪುನರಾವೃತ್ತಿ ಇದ್ದದ್ದನ್ನು ಕಂಡ ವಿರಜಾನಂದರು, ಓದುಗರಿಗೆ ಇದು ಬೇಸರ ತರುವುದೆಂಬುದನ್ನು ಮನಗಂಡರು. ಅಲ್ಲದೆ ಫ್ರ್ಯಾಂಕ್ ಸಣ್ಣ-ಪುಟ್ಟ ಘಟನೆಗಳನ್ನು ಎಷ್ಟು ವಿಸ್ತಾರವಾಗಿ ಬರೆದಿದ್ದರೆಂದರೆ ಪುಸ್ತಕವು ಅದರಿಂದಾಗಿ ತುಂಬ ದೊಡ್ಡದಾಗುತ್ತಿತ್ತು. ಹೀಗಾಗಿ ಸಂಗ್ರಹಿಸಿದ ಅನೇಕ ಒಳ್ಳೆಯ ವಿಷಯಗಳನ್ನು ಕೈಬಿಡಬೇಕಾಗುತ್ತಿತ್ತು. ಇದಲ್ಲದೆ ಭಾರತೀಯ ಧರ್ಮ-ಸಂಸ್ಕೃತಿಯ ಬಗ್ಗೆ ಫ್ರ್ಯಾಂಕ್‌ಗೆ ಆಳವಾದ ಜ್ಞಾನವಿರಲಿಲ್ಲ. ಹೀಗಾಗಿ ಫ್ರ್ಯಾಂಕ್‌ನ ಸಾಹಿತ್ಯವನ್ನು ತಿದ್ದಲು ಹೋಗಿ ವಿರಜಾನಂದರು ತುಂಬ ಕಷ್ಟಕ್ಕೆ ಸಿಲುಕಿದರು. ಅನವಶ್ಯಕವಾಗಿ ಬೆಳೆಸಿಕೊಂಡು ಹೋಗಿದ್ದೆಡೆ ಅದನ್ನು ತೆಗೆದುಹಾಕಬೇಕಿತ್ತು. ಬಿಟ್ಟುಹೋದ ಕೆಲವು ಘಟನೆಗಳನ್ನು ಅಲ್ಲಲ್ಲಿ ಸೇರಿಸಬೇಕಿತ್ತು. ಭಾರತೀಯ ಮನೋಭಾವಕ್ಕೆ ಸರಿಹೊಂದದ ಕೆಲವು ಭಾಗಗಳನ್ನು ಆಮೂಲಾಗ್ರವಾಗಿ ಬದಲಿಸಬೇಕಾಗುತ್ತಿತ್ತು. ತನ್ನ ಬರಹವು ಹೀಗೆ ತೀವ್ರ ಸಂಸ್ಕರಣಕ್ಕೆ ಒಳಗಾಗುತ್ತಿದ್ದುದನ್ನು ಕಂಡ ಫ್ರ್ಯಾಂಕ್ ಸಹಜವಾಗಿಯೇ ಕೋಪಗೊಳ್ಳುತ್ತಿದ್ದ. ಹೀಗಾದಾಗ ಮದರ್ ಸೇವಿಯರ್ ಮಧ್ಯಸ್ಥಿಕೆ ವಹಿಸಿ ಅವರನ್ನು ಸಮಾಧಾನಗೊಳಿಸುತ್ತಿದ್ದರು. ವಿರಜಾನಂದರಿಗೆ, ''ನೀನು ಅಷ್ಟೊಂದಾಗಿ ಬದಲಾಯಿಸದೆ, ಅವನು ಕೋಪಿಸಿಕೊಳ್ಳದಂತೆ ಮಾಡಲು ಸ್ವಲ್ಪವೇ ತಿದ್ದು'' ಎಂದು ಬುದ್ಧಿವಾದ ಹೇಳುತ್ತಿದ್ದರು. ವಿರಜಾನಂದರು ಖೇದಗೊಂಡು, ''ನಾನು ನನ್ನ ಮನಸ್ಸಿಗೆ ಬಂದಂತೆ ಮಾಡುತ್ತಿಲ್ಲ. ಎಲ್ಲಿ ಅತ್ಯಂತ ಅಗತ್ಯವಿರುವುದೋ ಅಲ್ಲಿ ಮಾತ್ರ ತಿದ್ದುತ್ತಿರುವೆ'' ಎನ್ನುತ್ತಿದ್ದರು.

ಫ್ರ್ಯಾಂಕ್‌ನೊಬ್ಬ ದಿಲ್ದಾರ್ ಮನುಷ್ಯ; ತನ್ನ ಖರ್ಚು-ವೆಚ್ಚಗಳ ಲೆಕ್ಕವೇ ಆತನಿಗಿರುತ್ತಿರಲಿಲ್ಲ. ಇದ್ದದ್ದನ್ನೇ ಕೈಯೆತ್ತಿ ದಾನ ಮಾಡುವ ಸ್ವಭಾವದವನು. ಮದರ್ ಸೇವಿಯರ್ ಆತನನ್ನು ಗೆಲುವಾಗಿರಿಸಲು ಆತನ ಕೈಗೆ ಆಗಾಗ ಹಣವನ್ನು ತುರುಕುತ್ತಿದ್ದರು. ಅದನ್ನು ಖರ್ಚು ಮಾಡಲು ಅವನಿಗೆ ೨-೩ ದಿನವೂ ಹಿಡಿಯುತ್ತಿರಲಿಲ್ಲ.

ಪುಸ್ತಕದ ತಿದ್ದುಪಡಿಯ ಬಗ್ಗೆ ಒಮ್ಮೆ ಫ್ರ್ಯಾಂಕ್‌ಗೂ ವಿರಜಾನಂದರಿಗೂ ಸ್ವಲ್ಪ ಹೆಚ್ಚಾಗಿಯೇ ಭಿನ್ನಾಭಿಪ್ರಾಯ ಉಂಟಾಗಿ ಫ್ರ್ಯಾಂಕ್, ''ಇನ್ನು ನಾನು ಇಲ್ಲಿರುವುದಿಲ್ಲ, ಕೆಲಸವನ್ನು ಮುಂದುವರಿಸುವುದಿಲ್ಲ'' ಎಂದುಬಿಟ್ಟ. ಮದರ್ ಸೇವಿಯರ್ ಬಹಳ ಸಾಂತ್ವನ ನೀಡಿ ಅವನನ್ನು ಶಾಂತಗೊಳಿಸಿದರು. ಕೊನೆಗೆ ಅವನು, ''ನನ್ನ ಮನಸ್ಸು ತುಂಬ ಪ್ರಕ್ಷುಬ್ಧಗೊಂಡಿದೆ, ಸ್ವಲ್ಪ ದಿನ ಆಲ್ಮೋರದಲ್ಲಿ ತಿರುಗಾಡಿ ಬರುವೆ'' ಎಂದು ತನ್ನ ನಿರ್ಧಾರವನ್ನು ತಿಳಿಸಿದ. ಮದರ್ ಸೇವಿಯರ್ ಅದಕ್ಕೊಪ್ಪಿ ೨೦೦-೩೦೦ ರೂಗಳನ್ನು ಸಹ ಅವನಿಗಿತ್ತರು. ಅವನು ಹೋದ ನಂತರ ವಿರಜಾನಂದರು ಮದರ್‌ಗೆ, ''ನಾನು ಪೂರ್ಣ ವಿವೇಚನೆಯಿಂದಲೇ ಪುಸ್ತಕವನ್ನು ತಿದ್ದುತ್ತಿರುವೆ. ಪುಸ್ತಕವು ಪ್ರಕಟವಾಗುವುದು ಅದ್ವೈತ ಆಶ್ರಮದಿಂದ; ಆದ್ದರಿಂದ ಇದರ ಸಂಪೂರ್ಣ ಜವಾಬ್ದಾರಿ ನನ್ನದೆ. ಫ್ರ್ಯಾಂಕ್ ಹೊರಟುಹೋಗಲಿಚ್ಛಿಸಿದರೆ ಹಾಗೇ ಮಾಡಲಿ, ಭಯವೇನು? ಪುಸ್ತಕವನ್ನು ನಾನೇ ಬರೆಯುವೆ. ಅದಕ್ಕೆ ಬೇಕಾದ ವಿಷಯಗಳಂತೂ ಸಂಗ್ರಹವಾಗಿಯೇ ಇದೆ'' ಎಂದರು. ಆದರೆ ಕೆಲವು ದಿನಗಳಲ್ಲೇ ಆಲ್ಮೋರದಿಂದ ಫ್ರ್ಯಾಂಕ್ ಹಿಂತಿರುಗಿ ಬಂದು ತನ್ನ ಬರಹದ ಕೆಲಸವನ್ನು ಪುನರಾರಂಭಿಸಿದನು. ಪುಸ್ತಕವನ್ನು ಚೆನ್ನಾಗಿ ಮುದ್ರಿಸಬೇಕೆಂಬ ಉದ್ದೇಶದಿಂದ ವಿರಜಾನಂದರು ಅದನ್ನು ಮಾಯಾವತಿಯಲ್ಲಿ ಮುದ್ರಿಸದೆ, ಕೊಲ್ಕತ್ತೆಯ ಒಳ್ಳೆಯ ಮುದ್ರಣಾಲಯದಲ್ಲಿ ಮುದ್ರಿಸುವ ಏರ್ಪಾಟು ಮಾಡಿದ್ದರು. ಪುಸ್ತಕದ ಮುದ್ರಣಕ್ಕೆ ಅವರು ತುಂಬ ಶ್ರಮಿಸಬೇಕಾಯಿತಾದರೂ ಮದರ್ ಸೇವಿಯರ್‌ರವರ ಸಹಾಯದಿಂದ ಯಶಸ್ವಿಯಾಗಿ ಮುಗಿಸಿದರು. ಸ್ವಾಮೀಜಿಯವರ ಜೀವನ ಚರಿತ್ರೆಯನ್ನು ಕನಿಷ್ಠ ೪ ಖಂಡಗಳಲ್ಲಿ ಪ್ರಕಟಿಸಬೇಕಾಗುವುದು ಎಂಬುದನ್ನು ವಿರಜಾನಂದರು ಮನಗಂಡರು. ೩ ಖಂಡಗಳನ್ನು ಫ್ರ್ಯಾಂಕ್ ಬರೆದಿದ್ದನು, ನಾಲ್ಕನೆಯದನ್ನು ವಿರಜಾನಂದರೇ ಮುಖ್ಯವಾಗಿ ಬರೆದರು. ಮೊದಲ ಖಂಡವನ್ನು ತಿದ್ದುವಲ್ಲಿ ಅವರಿಗೆ ಸ್ವಾತಂತ್ರ್ಯವಿರಲಿಲ್ಲ; ಬಾಕಿ ಖಂಡಗಳನ್ನು ತೊಂದರೆಯಿಲ್ಲದೆ ಅಗತ್ಯಕ್ಕನುಗುಣವಾಗಿ ತಿದ್ದಿದರು.

(ಮುಂದುವರಿಯುವುದು)

ಶ್ರೀಮಾತೆಯವರ ಪತ್ರಗಳು - ೧೨

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**

ಪತ್ರ - ೬೨

ಶ್ರೀ ಗುರುದೇವರ ಶ್ರೀಚರಣದಲ್ಲಿ ಭರವಸೆ

೫.೧.೧೯೧೧

ಕೊತಾರ್ , ಗುರುವಾರ

ಶುಭವಾಗಲಿ.

ಮಗೂ, ನಿನ್ನ ಪತ್ರವು ಸಿಕ್ಕಿ ಆನಂದಿತಳಾದೆ. ನೀನು ಬಿದ್ದು ನಿನ್ನ ಕಾಲು ಉಳುಕಿತ್ತು ಎಂದು ಈ ಮೊದಲೇ ಶರತ್‌ನ ಪತ್ರದಿಂದ ಅರಿತೆ. ಈಗ ಹೇಗಿದ್ದೀಯಾ ಎಂದು ಬರೆದು ತಿಳಿಸು. ನಿನಗೆ ನನ್ನ ಆಶೀರ್ವಾದಗಳು ಮತ್ತು ಉಳಿದ ಎಲ್ಲ ಮಕ್ಕಳಿಗೂ ಅದನ್ನು ಕೊಡು. ಇತಿ,

ನಿಮ್ಮೆಲ್ಲರ ತಾಯಿ.

ಪತ್ರ ಪಡೆದವರ ಹೆಸರು ಮತ್ತು ವಿಳಾಸ

The Swami Ramakrishnananda

Sri Ramakishna Math

Mylapur, Madras

ಪತ್ರ - ೬೩

ಶ್ರೀ ಗುರುದೇವರ ಶ್ರೀಚರಣಗಳಲ್ಲಿ ಭರವಸೆ

೭.೧.೧೯೧೧

ಕೊತಾರ್, ಶನಿವಾರ

ಮಂಗಳವಾಗಲಿ.

ಮಗೂ, ನೀನು ಕಳುಹಿಸಿರುವ ವಸಂತನ ೧೫ ರೂಪಾಯಿ ಸಿಕ್ಕಿದೆ. ನೀನು ನನ್ನ ಆಶೀರ್ವಾದ ಸ್ವೀಕರಿಸು ಹಾಗೂ ಅವನಿಗೂ ಕೊಡು. ನನ್ನ ದೇಹಾರೋಗ್ಯ ಪರವಾಗಿಲ್ಲ. ನೀನು ಹೇಗಿರುವೆ ಎಂದು ಬೇಗ ಬರೆ. ಇಲ್ಲಿಯ ಉಳಿದಂತೆ ಎಲ್ಲವೂ ಕ್ಷೇಮ. ಇತಿ,

ನಿಮ್ಮೆಲ್ಲರ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ

The Swami Ramakrishnananda

the Ramakrishna Math

Mylapur, Madras

ಪತ್ರ - ೬೪

೧೭.೮.೧೯೧೧

Udvodhan Office

12, 13 Gpopalchandra Neogi's Lanes

Bagh-bazar , P.O.Calcatta

Dated, The 17ನೇ ಎಪ್ರಿಲ್, 1911



ಮಂಗಳವಾಗಲಿ.

ನಾವೆಲ್ಲರೂ ಹಿಂದಿನ ಮಂಗಳವಾರ ನಿರ್ವಿಘ್ನವಾಗಿ ತಲುಪಿದೆವು. ನಿತಾಯಿಯ ತಾಯಿ ಈಗ ಬಹುಮಟ್ಟಿಗೆ ಚೆನ್ನಾಗಿದ್ದಾರೆ. ನಾನು ಚೆನ್ನಾಗಿದ್ದೇನೆ. ಮಠದಲ್ಲಿ ಹಾಗೂ ಇಲ್ಲಿ ಎಲ್ಲರೂ ಕ್ಷೇಮ. ನಿನಗೆ ನನ್ನ ಆಶೀರ್ವಾದ, ಹಾಗೂ ಉಳಿದೆಲ್ಲರಿಗೂ ತಿಳಿಸು.

ಆಶೀರ್ವಾದವನ್ನು ನೀಡುವ,

ನಿನ್ನ ಮಾತೃದೇವಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ

To His Holiness

Swami Ramakrishnananda

Ramakrishna Home

Brodies' Road,

Mylapore, Madras

ಪತ್ರ - ೬೫

ಶ್ರೀ ಶ್ರೀ ಗುರುದೇವ

ಶ್ರೀ ಶ್ರೀ ಪಾದಪದ್ಮಗಳಲ್ಲಿ ಭರವಸೆ

೨.೫.೧೯೧೧

೧೮ನೇ ವೈಶಾಖ

ಪರಮ ಶುಭಾಶೀರ್ವಾದ.

ಮಗೂ ಶಶಿ, ನಿನಗೆ ನಾನು ಪತ್ರ ಬರೆಯಲಾಗಲಿಲ್ಲ. ಚಿಕ್ಕ ಸೊಸೆಯ ತಲೆ ಬಿಸಿಯಾಗಿತ್ತು. ಅವಳನ್ನು ಕಟ್ಟಿಕೊಂಡು ತುಂಬಾ ತೊಡಕಿನಲ್ಲಿದ್ದೇನೆ, ಆದರೆ ಈಗ ಸ್ವಲ್ಪ ವಾಸಿ. ನಿನ್ನ ಅಸ್ವಸ್ಥತೆಯ

ವಿಚಾರ ಕೇಳಿ ಅತ್ಯಂತ ಚಿಂತೆಯಲ್ಲಿದ್ದೇನೆ ಹಾಗೂ ದುಃಖದಲ್ಲಿದ್ದೇನೆ. ನೀನು ಬೇಗನೆ ಗುಣಮುಖನಾಗಲು ಭಗವಂತನಲ್ಲಿ ಪ್ರಾರ್ಥಿಸುತ್ತಿದ್ದೇನೆ. ನಿನಗೆ ಕಲ್ಕತ್ತೆಗೆ ಬರುವ ಇಚ್ಛೆ ಇದೆಯೆ? ಒಂದು ವೇಳೆ ಇದ್ದರೆ, ಮಗೂ ಇವರು ನಿನ್ನನ್ನು ಕರೆದುಕೊಂಡು ಬರುತ್ತಾರೆ. ಇವರೆಲ್ಲ ಅದನ್ನೇ ಮಾತನಾಡಿಕೊಳ್ಳುತ್ತಿದ್ದಾರೆ. ತುಂಬಾ ಎಚ್ಚರಿಕೆಯಿಂದಿರು. ರುದ್ರ, ಪ್ರಕಾಶ್, ರಾಮು, ಸೇವಾನಂದ ಮತ್ತು ಉಳಿದ ಎಲ್ಲರಿಗೂ ನನ್ನ ಆಶೀರ್ವಾದ ತಿಳಿಸು. ಡಾಕ್ಟರ್ ಹೇಗಿದ್ದಾನೆ? ಅವನಿಗೆ ನನ್ನ ಆಶೀರ್ವಾದವನ್ನು ತಿಳಿಸು. ನಿನ್ನೆ ಬೇಲೂರು ಮಠಕ್ಕೆ ಹೋಗಿದ್ದೆ. ಅಲ್ಲಿ ಕಾಳೀಕೀರ್ತನೆ ನಡೆಯಿತು. ಎಲ್ಲರೂ ನಿನಗಾಗಿ ಚಿಂತಿಸುತಿದ್ದಾರೆಂದು ತಿಳಿ. ಇಲ್ಲಿ ಎಲ್ಲರೂ ಚೆನ್ನಾಗಿದ್ದಾರೆ. ನನ್ನ ಆಶೀರ್ವಾದ ತೆಗೆದುಕೋ. ಠಾಕೂರರ ಕೃಪೆಯಿಂದ ಬೇಗ ಆರೋಗ್ಯ ಹೊಂದು. ಇದನ್ನೇ ಪ್ರಾರ್ಥಿಸುತ್ತಿದ್ದೇನೆ.

ಇತಿ ಆಶೀರ್ವಾದವನ್ನು ನೀಡುವ,

ನಿನ್ನ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ

Swami Ramakrishnananda
Ramakrishna Math
Bull Temple Road
Banagalore City

ವಿವರಣೆ : ಚಿಕ್ಕ ಸೊಸೆ ಎಂದರೆ ಶ್ರೀಮಾತೆಯವರ ಚಿಕ್ಕ ಸಹೋದರನ ಪತ್ನಿ, ಎಂದರೆ ರಾಧುವಿನ ತಾಯಿ. ಭಕ್ತವೃಂದದವರಿಗೆ ಆಕೆ 'ಹುಚ್ಚ ಅತ್ತೆ' ಎಂಬ ಹೆಸರಿನಲ್ಲಿ ಪರಿಚಿತರು.

ಪತ್ರ - ೬೬

ಶ್ರೀ ಶ್ರೀ ರಾಮಕೃಷ್ಣ ಶ್ರೀ ಚರಣಗಳಲ್ಲಿ ಭರವಸೆ

ಜಯರಾಂಬಾಟಿ

೧೫.೭.೧೯೧೧

ಪರಮ ಶುಭಾಶೀರ್ವಾದ.

ಪ್ರೀತಿಯ ಮಗೂ,

ನಿನ್ನ ಪತ್ರ ಸಿಕ್ಕಿದೆ. ನಾನು ಈಗ ಜಯರಾಂಬಾಟಿಯಲ್ಲಿದ್ದೇನೆ. ನಿಮಗೆ ಇಲ್ಲಿಗೆ ಬರಲು ತುಂಬಾ ಅನಾನುಕೂಲವಾಗಬಹುದು. ಇನ್ನೂ ಬೇರೆ ತೊಂದರೆಗಳೂ ಇವೆ. ನಾನು ಯಾವಾಗ ಕಲ್ಕತ್ತಕ್ಕೆ ಹೋಗುವೆನೋ ಆಗ ಅಲ್ಲಿಗೆ ಬನ್ನಿ. ನೀನು ಠಾಕೂರರ ಕೃಪೆಯನ್ನು ಪಡೆದಿರುವೆ. ಠಾಕೂರರು ನಿನ್ನ ಮನಸ್ಸಿನ ಆಕಾಂಕ್ಷೆಯನ್ನು ಈಡೇರಿಸುವರು. ಪಾದಧೂಳಿಯನ್ನು ಕಳುಹಿಸಿದ್ದೇನೆ. ನಾನು ಅನುಮತಿಯನ್ನು ನೀಡುತ್ತಿದ್ದೇನೆ, ಅದನ್ನು ಬೇರೆ ಧೂಳಿನ ಜೊತೆ ಬೆರೆಸಿ, ಪ್ರಮಾಣವನ್ನು ಹೆಚ್ಚಿಸಿಕೋ.

ನಿನ್ನ ಸ್ನೇಹ ಮಯಿ, ತಾಯಿ.

ಪತ್ರ ಪಡೆದವರ ಹೆಸರು ಮತ್ತು ವಿಳಾಸ

ಶ್ರೀ ತಾರಕನಾಥ ರಾಯ್ ಚೌಧುರಿ
ಕಠಿಯಾದಿ ಸಬ್ ರಿಜಿಸ್ಟ್ರಿ ಆಫೀಸ್
ಅಂಚೆ: ಕಠಿಯಾದಿ; ಜಿಲ್ಲೆ: ಮೈಮನ್‌ಂಗ್ (ಬಾಂಗ್ಲಾದೇಶ)

ಪತ್ರ - ೬೭

ಶ್ರೀ ರಾಮಕೃಷ್ಣಾಯ ನಮೋ

೩೦.೭.೧೯೧೧

ಜಯರಾಂಬಾಟಿ

೧೪ನೇ ಶ್ರಾವಣ, ೧೩೧೮

ಪರಮ ಶುಭಾಶೀರ್ವಾದ. ವಿಶೇಷವೇನೆಂದರೆ,

ನೀನು ಕಳುಹಿಸಿರುವ ಶ್ರಾವಣ ೫ರ ಪತ್ರ ಸಿಕ್ಕಿತ್ತು. ನೀನು ಫೋಟೋ ಬಗ್ಗೆ ಬರೆದಿರುವೆ. ಆದರೆ ಇಲ್ಲಿ ನನ್ನ ಬಳಿ ಫೋಟೋ ಇಲ್ಲ. ನೀನು ೧೨, ೧೩ ನಂಬರ್, ಗೋಪಾಲ್ ಚಂದ್ರ ನಿಯೋಗೀರ್ ಲೇನ್ , ಉದ್ಬೋಧನ ಆಫೀಸಿಗೆ ಪತ್ರ ಬರೆದರೆ ಸಿಗಬಹುದು. ನೀನು ಹಣದ ವಿಷಯ ನನಗೆ ಬರೆಯಲು ಹೇಳಿರುವೆ. ಅದರ ಬಗ್ಗೆ ನಾನು ಏನು ಬರೆಯಲಿ? ನಿನಗೆ ಯಾವಾಗ ಏನು ತೋರುವುದೋ ಆಗ ಅದನ್ನು ಕಳುಹಿಸಬಹುದು. ನಾನು ಒಂದು ರೀತಿಯಲ್ಲಿ ಚೆನ್ನಾಗಿದ್ದೇನೆ. ನೀವೆಲ್ಲರೂ ಚೆನ್ನಾಗಿರಲು ಪ್ರಾರ್ಥಿಸುತ್ತಿದ್ದೇನೆ.

''ನಿಮ್ಮೆಲ್ಲರ ತಾಯಿ ''

ಪತ್ರ ಪಡೆದವರ ಹೆಸರು ಮತ್ತು ವಿಳಾಸ

ಶ್ರೀ ತಾರಕನಾಥ್ ಶರ್ಮ ರಾಯ್ ಚೌಧುರಿ
ಕಠಿಯಾದಿ ಸಬ್ ರಿಜಿಸ್ಟ್ರಿ ಆಫೀಸ್
ಅಂಚೆ: ಕಠಿಯಾದಿ Kuthiadi
ಜಿಲ್ಲೆ: ಮೈಮನ್‌ಸಿಂಗ್

ಪತ್ರ -೬೮

ಶ್ರೀ ಶ್ರೀ ದುರ್ಗೆಯ ಕೃಪೆ

ಶ್ರೀ ಶ್ರೀ ಜಯ ರಾಮಕೃಷ್ಣ

೭.೮.೧೯೧೧

೨೨ನೇ ಶ್ರಾವಣ

ಚಿರಂಜೀವಿಗೆ,

ಪ್ರೀತಿಯ ಮಗೂ, (ಬಹುದಿನಗಳಾಯಿತು) ನಿನ್ನ ಮತ್ತು ನಿನ್ನ ಮಕ್ಕಳ ಕುಶಲ ವಾರ್ತೆ ಬರೆದು ತಿಳಿಸು. ನನ್ನ ವಿಳಾಸ — ಜಯರಾಂಬಾಟಿ ಗ್ರಾಮ. ಶ್ರೀ ಪ್ರಸನ್ನ ಕುಮಾರ್ ಮುಖ್ಯೋಪಾಧ್ಯಾಯ ಬಾಟಿ. ಅಂಚೆ : ಆನೂರ್ ಜಿಲ್ಲೆ: ಹೂಗ್ಲಿ

ಇಲ್ಲಿ ನಾವೆಲ್ಲರೂ ಚೆನ್ನಾಗಿದ್ದೇವೆ.

ಆಶೀರ್ವಾದಗಳೊಂದಿಗೆ ಪತ್ರ —

ನಿಮ್ಮೆಲ್ಲರ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ

ಪರಮ ಶುಭ
ಶ್ರೀಯುತ ಬಾಬು ತಾರಕನಾಥ ರಾಯ್ ಚೌಧುರಿ

ಮಗನೆ ಸುರಕ್ಷಿತವಾಗಿರು —

ಅಂಚೆ: ಕಠಿಯಾದಿ ಸಬ್ ರಿಜಿಷ್ಟ್ರಿ ಆಫೀಸ್
ಜಿಲ್ಲೆ: ಮೈಮನ್‌ಂಗ್

ಶ್ರೀ ವಲ್ಲಭಾಚಾರ್ಯರು

ಆಂಗ್ಲಮೂಲ: **ಸ್ವಾಮಿ ತಪಸ್ಯಾನಂದ**

ಕನ್ನಡಕ್ಕೆ: **ಸ್ವಾಮಿ ವೀರೇಶಾನಂದ**

ಭಾಗ ೩

ಅಲಹಾಬಾದಿನಲ್ಲಿ ಇದ್ದ ನಿವೃತ್ತಿಯ ಜೀವಿತಾವಧಿಯಲ್ಲಿಯೇ ಅವರು ತಮ್ಮ ಬಹುತೇಕ ತಾತ್ತ್ವಿಕ ಮತ್ತು ಭಕ್ತಿಪೂರಿತ ಗ್ರಂಥಗಳನ್ನು ರಚಿಸಿದರು. ಅವರಲ್ಲಿ ವಿನಯಭಾವವು ಎಷ್ಟೊಂದು ಮನೆಮಾಡಿತ್ತೆಂದರೆ, ತಮ್ಮ ಯಾವ ಗ್ರಂಥದಲ್ಲಿಯೂ ಕೂಡ ಅವರು ತಮ್ಮನ್ನು ಆಚಾರ್ಯರೆಂದು ಕರೆದುಕೊಂಡಿಲ್ಲ. ಯಾವತ್ತೂ ತಮ್ಮ ಹೆಸರನ್ನು ವಲ್ಲಭ ದೀಕ್ಷಿತ ಎಂದೇ ಅವರು ಉಲ್ಲೇಖಿಸಿದ್ದಾರೆ. ಅದು ವಂಶಾನುಗತವಾಗಿ ಬಂದ ಹೆಸರಾಗಿರಬಹುದು. ಅವರ ಇನ್ನೊಂದು ವೈಶಿಷ್ಟ್ಯವೆಂದರೆ, ತಮ್ಮ ಚಿಕ್ಕಪುಟ್ಟ ಕೃತಿಗಳನ್ನು ಹೊರತುಪಡಿಸಿ, ಬೇರಾವುದೇ ದೊಡ್ಡ ಕೃತಿಯನ್ನು ಅವರು ಸಂಪೂರ್ಣಗೊಳಿಸಲೇ ಇಲ್ಲ. ಬಾದರಾಯಣರ ಬ್ರಹ್ಮಸೂತ್ರ, ಭಾಗವತಕ್ಕೆ ಬರೆದ ಭಾಷ್ಯ - ಇವುಗಳು ಕೂಡ ಅಪೂರ್ಣವಾಗಿಯೇ ಉಳಿದಿವೆ. ಅವರಿಗಿಂತ ಮುಂಚೆ ಆಗಿಹೋದ ಮಹಾನ್ ಆಚಾರ್ಯರಾದ ಶಂಕರ, ರಾಮಾನುಜ ಮತ್ತು ಮಧ್ವರು ಬ್ರಹ್ಮಸೂತ್ರಗಳಿಗೆ ಸಂಪೂರ್ಣವಾಗಿ ಭಾಷ್ಯವನ್ನು ಬರೆದು ಆಚಾರ್ಯರೆಂದು ಹೆಸರುವಾಸಿಯಾಗಿದ್ದಾರೆ. ಆದರೆ ವಲ್ಲಭರು ಬ್ರಹ್ಮಸೂತ್ರದ ೩-೧-೩೩ನೆಯ ಸೂತ್ರದವರೆಗೆ ಮಾತ್ರ ತಮ್ಮ ಭಾಷ್ಯವನ್ನು ಬರೆದಿದ್ದಾರೆ. ಅಂದರೆ ಸುಮಾರು ಮೂರನೆಯ ಎರಡು ಭಾಗದಷ್ಟು ಸೂತ್ರಗಳಿಗೆ ಮಾತ್ರ ಅವರ ವಿವರಣೆ ಲಭ್ಯ. ಉಳಿದ ಸೂತ್ರಗಳಿಗೆ ಅವರ ಪುತ್ರರಾದ ವಿಠ್ಠಲನಾಥರು ಭಾಷ್ಯವನ್ನು ರಚಿಸಿ, ಗ್ರಂಥವನ್ನು ಪೂರ್ಣಮಾಡಿರುವುದು ಕಂಡುಬರುತ್ತದೆ. ಈ ಕಾರಣಕ್ಕಾಗಿಯೇ ಪ್ರಾಯಶಃ ವಲ್ಲಭರ ಬ್ರಹ್ಮಸೂತ್ರ ಭಾಷ್ಯವನ್ನು **ಅಣು ಭಾಷ್ಯ** ಎಂದು ಕರೆಯಲಾಗುತ್ತದೆ. ಅಂದರೆ ಸಣ್ಣ ಭಾಷ್ಯ ಅಥವಾ ಭಾಗಶಃ ಭಾಷ್ಯ ಎಂದು. ಹೀಗಿದ್ದರೂ ತಮ್ಮ ಶುದ್ಧಾದ್ವೈತ ಸಿದ್ಧಾಂತದ ಎಲ್ಲ ಮುಖ್ಯ ಪ್ರಮೇಯಗಳನ್ನು ಅವರು ಇಲ್ಲಿ ವಿವರಿಸಿದ್ದಾರೆ. ಇದಕ್ಕೆ ಸಮನಾದ, ಇದಕ್ಕಿಂತ ಮಹತ್ವದ ಎಂದೂ ಹೇಳಬಹುದಾದ ವಲ್ಲಭರ ಇನ್ನೊಂದು ಕೃತಿಯೆಂದರೆ ಭಾಗವತದ ಮೇಲೆ ಅವರು ಬರೆದ ಭಾಷ್ಯ. ಅದಕ್ಕೆ **ಸುಬೋಧಿನಿ** ಎಂದು ಹೆಸರು. ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳನ್ನು ವೇದಾಂತ ತತ್ತ್ವದ ಆಧಾರಸ್ತಂಭಗಳು ಎಂದು ಶ್ರೀಶಂಕರರ ಸಮಯದಿಂದಲೂ ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗಿದೆ. ಭಾಗವತವು ಈ ಪ್ರಸ್ಥಾನತ್ರಯಕ್ಕೆ ಸಮನಾದುದು ಎಂದು ವಲ್ಲಭರು ಪ್ರತಿಪಾದಿಸುತ್ತಾರೆ. ಈ ಬಗೆಯ ಭಾವನೆಯನ್ನು ಮಧ್ವಾಚಾರ್ಯರು ಹಿಂದೆಯೇ ಮುಂದಿಟ್ಟಿದ್ದರೂ,



ವಲ್ಲಭರು ಇದನ್ನು ಆಚಾರ್ಯರುಗಳಲ್ಲಿಯೇ ಮೊಟ್ಟಮೊದಲ ಬಾರಿಗೆ ತಾತ್ತ್ವಿಕವಾಗಿ ತಮ್ಮ ಭಾಷ್ಯಗಳಲ್ಲಿ ಎತ್ತಿಹಿಡಿಯುತ್ತಾರೆ ಎನ್ನುವುದು ವೈಶಿಷ್ಟ್ಯ. ಇದೇ ಕಾರಣಕ್ಕಾಗಿ ತಮ್ಮ ಜ್ಞಾನಪ್ರಸಾರ ಯಾತ್ರೆಗಳಲ್ಲಿ ಭಾಗವತ ಸಪ್ತಾಹಕ್ಕೆ ಅವರು ಬಹಳ ಮಹತ್ವವನ್ನು ನೀಡುತ್ತಿದ್ದರು. ತಮ್ಮ ಸಿದ್ಧಾಂತವಾದ ಪುಷ್ಟಿಮಾರ್ಗವನ್ನು ಬೋಧಿಸಲು ಇದು ಬಹಳ ಪ್ರಭಾವಶಾಲಿಯಾದ ಮಾಧ್ಯಮ ಎಂದು ಅವರು ಪರಿಗಣಿಸಿದ್ದರು. ಭಾಗವತದ ಅವರ ಭಾಷ್ಯ ಕೂಡ ಸಂಪೂರ್ಣಗೊಳ್ಳಲಿಲ್ಲ. ಅವರ ಮೂರನೆಯ ತೀರ್ಥಯಾತ್ರೆಯ ಸಮಯ ದಲ್ಲಿ ಅವರು ಗಂಗಾಸಾಗರದಲ್ಲಿ ಸ್ವಲ್ಪ ಕಾಲ ತಂಗಿದ್ದರು. ಅಲ್ಲಿ ಅವರು ಭಾಗವತ ಭಾಷ್ಯವನ್ನು ರಚಿಸಲು ಆರಂಭಿಸಿದರು. ಮೂರನೆಯ ಸ್ಕಂಧದವರೆಗೆ ಅವರ ಬರಹ ಮುಂದುವರೆಯಿತು. ಅಲ್ಪಕಾಲದಲ್ಲಿಯೇ ತನ್ನನ್ನು ಬಂದು ಸೇರಿಕೊಳ್ಳುವಂತೆ ಸೃಷ್ಟಿಕರ್ತನಾದ ಪರಮಾತ್ಮನ ಕರೆಯನ್ನು ಅವರು ಆಲಿಸಿದರಂತೆ. ಹಾಗೆಂದೇ, ಅವರು ಇತರ ಸ್ಕಂಧಗಳನ್ನು ಬಿಟ್ಟು, ಹತ್ತನೆಯ ಸ್ಕಂಧಕ್ಕೆ ನೇರವಾಗಿ ಭಾಷ್ಯವನ್ನು ಬರೆಯಲು ಆರಂಭಿಸಿದರು. ಹತ್ತನೆಯ ಸ್ಕಂಧದಲ್ಲಿ ಶ್ರೀಕೃಷ್ಣ ಜನ್ಮ ಮತ್ತು ಅವನ ಲೀಲೆಯ ವಿಸ್ತಾರವಾದ ಕಥೆಯು ಬರುವುದರಿಂದ ಅದು ಬಹಳ ಮಹತ್ವ ವನ್ನು ಪಡೆದುಕೊಂಡಿದೆ. ಹತ್ತನೆಯ ಸ್ಕಂಧದ ವಿವರಣೆಯನ್ನು ಸಂಪೂರ್ಣಗೊಳಿಸಿದ

ವಲ್ಲಭರು ಹನ್ನೊಂದನೆಯ ಸ್ಕಂಧಕ್ಕೆ ವ್ಯಾಖ್ಯಾನವನ್ನು ಬರೆಯುತ್ತಿದ್ದರು. ಆ ಸಮಯದಲ್ಲಿ ತಮ್ಮ ಜೀವಿತಾವಧಿಯನ್ನು ಕೊನೆಗೊಳಿಸಿ ಹಿಂತಿರುಗುವಂತೆ ಮತ್ತೆ ಭಗವಂತನ ಆದೇಶ ಅವರಿಗಾಯಿತು. ಹೀಗೆ ಅವರು ಬ್ರಹ್ಮಸೂತ್ರ ಭಾಷ್ಯ ಮತ್ತು ಭಾಗವತ ಭಾಷ್ಯಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಲೇ ಇಲ್ಲ. ಅವರು ಆ ಕಾಲದಲ್ಲಿ ಇನ್ನಿತರ ಮಹತ್ವದ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರಿಂದ ಈ ಕಾರ್ಯ ಸಾಧ್ಯವಾಗದೆ ಇದ್ದಿರಬಹುದು. ಅಥವಾ ತಮಗೆ ಆಚಾರ್ಯ ಎಂಬ ಹೆಸರು ಬರುವ ವಿಷಯದಲ್ಲಿ ಅವರಿಗೆ ಕಿಂಚಿತ್ತೂ ಆಸಕ್ತಿ ಇಲ್ಲದಿರಬಹುದು. ಅವರಿಗೆ ಆಚಾರ್ಯ ಎಂಬ ಪದವಿ ಲಭಿಸಿದ್ದು, ಅವರ ಅವಸಾನದ ನಂತರವೇ.

ಇದಲ್ಲದೆ ವಲ್ಲಭರು ಜೈಮಿನಿಯ ಪೂರ್ವ ಮೀಮಾಂಸಾ ಸೂತ್ರಗಳಿಗೆ ಭಾಷ್ಯ ಮತ್ತು ಕಾರಿಕೆಗಳನ್ನು (ವಿವರಣಾತ್ಮಕ ಶ್ಲೋಕಗಳು) ಬರೆದಿದ್ದಾರೆ. ಈಗ ಕಾರಿಕೆಗಳು ಮಾತ್ರ ಲಭ್ಯ. ವಲ್ಲಭರು ಹಲವಾರು ಸಂಕ್ಷಿಪ್ತ ರಚನೆಗಳನ್ನು ಕೂಡ ಮಾಡಿದ್ದಾರೆ. ಅವುಗಳಲ್ಲಿ ಕೆಲವು ಶ್ಲೋಕಗಳು ಮಾತ್ರವೇ ಇವೆ. ಅವೆಲ್ಲವೂ ತತ್ತ್ವ ಜಿಜ್ಞಾಸೆಯಲ್ಲಿ ಬರುವ ಹಲವು ಸಮಸ್ಯೆಗಳ ಮತ್ತು ಜೀವನ ವಿಧಾನದ ಕುರಿತಾಗಿವೆ. ಇವೆಲ್ಲವೂ ಒಟ್ಟುಸೇರಿ ೧೬ ಗ್ರಂಥಗಳಾಗುತ್ತವೆ. ಇವೆಲ್ಲವನ್ನೂ **ಷೋಡಶ ಗ್ರಂಥ** ಎಂಬ ಒಂದೇ ಹೆಸರಿನಿಂದ ಕರೆಯಲಾಗುತ್ತದೆ. '**ತತ್ತ್ವಾರ್ಥ ದೀಪ ನಿಬಂಧ**' ಎಂಬ ಮತ್ತೊಂದು ಗ್ರಂಥವನ್ನೂ ವಲ್ಲಭರು ರಚಿಸಿದರು. ಇದು ಮೇಲೆ ಉಲ್ಲೇಖಿಸಿದ ಹದಿನಾರು ಗ್ರಂಥಗಳಿಗಿಂತಲೂ ದೊಡ್ಡದು. ಇದು ಅವರ ಸಿದ್ಧಾಂತದ ಕೈಪಿಡಿಯಂತೆ ಇದೆ. ಇದರಲ್ಲಿ ಅವರು ದೇವತಾಶಾಸ್ತ್ರ ಮತ್ತು ಅವರು ಪ್ರತಿಪಾದಿಸುವ ಜೀವನವಿಧಾನದ ಬಗ್ಗೆ ವಿವರಿಸುತ್ತಾರೆ. ಈ ಎಲ್ಲ ಗ್ರಂಥಗಳೂ ಸಂಸ್ಕೃತದಲ್ಲಿವೆ. ಇದಲ್ಲದೆ ವಲ್ಲಭರು ಅಂದಿನ ಕಾಲದ ಆಡುಭಾಷೆಯಾದ ವ್ರಜಭಾಷೆಯಲ್ಲಿ ಐದು ಪುಸ್ತಕಗಳನ್ನು ಬರೆದಿದ್ದಾರೆ.

ವಲ್ಲಭರ ಸಂನ್ಯಾಸ ಮತ್ತು ಅವಸಾನ

ವಲ್ಲಭರು ಐವತ್ತೆರಡು ವರ್ಷಗಳ ಕಾಲ ಬದುಕಿದ್ದರು. ಕ್ರಿಯಾಶಾಲಿಯಾಗಿದ್ದ ಅವರ ಅವಸಾನವಾದದ್ದು ೧೫೩೧ರಲ್ಲಿ. ಅವರು ತಾವು ಬದುಕಿದ್ದಷ್ಟು ಕಾಲ ಭಕ್ತಿಭಾವದಿಂದ ಭಗವಂತನಲ್ಲಿ ತನ್ಮಯರಾಗಿದ್ದರು. ಆ ಮೂಲಕ ಇತರರಿಗೆ ಸ್ಫೂರ್ತಿ ನೀಡುವ ಜೀವನವನ್ನು ನಡೆಸಿದರು. ಹಾಗೆಯೇ ಅವರ ಅಂತಿಮ ದಿನಗಳು ಕೂಡ ಅಷ್ಟೇ ಸ್ಫೂರ್ತಿಯುತವಾಗಿದ್ದವು. ತಮ್ಮ ಬಾಳಿನ ಕಡೆಯ ವರ್ಷದವರೆಗೆ ಅವರು ಗೃಹಸ್ಥ ಜೀವನವನ್ನು ನಡೆಸಿದರು. ತಮ್ಮ ತಾಯಿ, ಪತ್ನಿ ಮತ್ತು ಇಬ್ಬರು ಗಂಡುಮಕ್ಕಳ ಜೊತೆಗೆ ವಾಸವಾಗಿದ್ದರು. ಹೀಗೆ ಪುಷ್ಟಿಮಾರ್ಗದಲ್ಲಿ ತಾಪಸಿಕ ಜೀವನ ಅವಶ್ಯವಿಲ್ಲ ಎನ್ನುವುದನ್ನು ಸ್ವತಃ ತೋರಿಸಿಕೊಟ್ಟರು. ವಲ್ಲಭರ ಪ್ರಕಾರ ಸಂನ್ಯಾಸವೆಂದರೆ ಸಾಧಕನು ಭಗವಂತನ ವಿರಹವನ್ನು ಉತ್ಕಟವಾಗಿ ಭಾವಿಸುವ ಹಂತವಾಗಿದೆ. ಆ ಹಂತದಲ್ಲಿ ಅವನು ತನ್ನ ಪ್ರಾಕೃತಿಕ ದೇಹವನ್ನು ತ್ಯಜಿಸಿ ಭಗವಂತನಲ್ಲಿ ಪೂರ್ಣವಾಗಿ ತನ್ಮಯನಾಗುವ ಭಾವವನ್ನು ಬೆಳೆಸಿಕೊಳ್ಳಬೇಕು. ದೇಹತ್ಯಾಗದಲ್ಲಿ ಅಂತಿಮಗೊಳ್ಳುವ ಈ ಪರಮಸ್ಥಿತಿಯ ವಿವರಣೆಯನ್ನು ವಲ್ಲಭರು ತಮ್ಮ **ಸಂನ್ಯಾಸ ನಿರ್ಣಯ** ಎಂಬ ಸಣ್ಣ ಪುಸ್ತಕದಲ್ಲಿ ವಿಶದವಾಗಿ ವಿವರಿಸಿದ್ದಾರೆ. ಜಗತ್ತಿನ ಬಾಳನ್ನು ಕೊನೆಗಾಣಿಸುವಂತೆ ಈ ಹಿಂದೆಯೇ ಅವರು ಎರಡು ಬಾರಿ ಭಗವಂತನಿಂದ ಆದೇಶ ಪಡೆದುಕೊಂಡಿದ್ದರು. ಆದರೆ ಅವರು ತಮ್ಮ ಜೀವಿತಕಾರ್ಯದ ಬಹುಭಾಗವನ್ನು ಪೂರ್ಣಗೊಳಿಸುವವರೆಗೂ ಪ್ರತೀಕ್ಷೆ ಮಾಡಿದರು. ಅನಂತರ ಅವರು ಮಾಧವೇಂದ್ರ ಪುರಿ ಎಂಬ ಸಂನ್ಯಾಸಿಗಳಿಗೆ ಹೇಳಿ ಕಳಿಸಿದರು. ಇವರು ಮಾಧ್ವ ಸಂಪ್ರದಾಯದ ಒಬ್ಬ ಯತಿಗಳು. ಈ ಹಿಂದೆಯೇ ಅವರು ವಲ್ಲಭರಿಗೆ ಭಾಗವತದ ಅಧ್ಯಯನವನ್ನು ಪರಿಚಯಿಸಿದ ವೃತ್ತಾಂತವನ್ನು ನಾವೀಗಾಗಲೇ ನೋಡಿದ್ದೇವೆ. ಹಾಗೆಯೇ ಈ ಮಹಾತ್ಮರು ಗೋವರ್ಧನಧಾರಿಯ ದೇಗುಲವನ್ನು ಕಟ್ಟುವುದರಲ್ಲಿಯೂ ವಲ್ಲಭರಿಗೆ ತಮ್ಮ ಸಹಾಯ ಹಸ್ತವನ್ನು ನೀಡಿದ್ದರು. ಈಗ ವಲ್ಲಭರು ಆ ಮಾಧವೇಂದ್ರ ಪುರಿಗಳಿಂದಲೇ ಸಂನ್ಯಾಸವನ್ನು ಸ್ವೀಕರಿಸಿ, **ಪೂರ್ಣಾನಂದ** ಎಂಬ ನಾಮಧೇಯವನ್ನು ಧರಿಸಿದರು. ಒಂದು ವಾರದ ಕಾಲ ತಮ್ಮ ಸ್ವಗೃಹದಲ್ಲಿನ ಒಂದು ಕೊಠಡಿಯಲ್ಲಿ ಏಕಾಂತವಾಗಿ ಕಳೆದರು. ತದನಂತರ ವಾರಾಣಸಿಗೆ ಪರಿವ್ರಾಜಕರಾಗಿ ಹೋದರು. ಅವರ ಪೂರ್ವಾಶ್ರಮದ ಮಕ್ಕಳು ಮತ್ತು ಭಕ್ತರು ಅವರನ್ನು ನೋಡಲು ವಾರಾಣಸಿಗೆ ಹೋದರು. ಅವರಿಗೆಲ್ಲ ಅಂತಿಮ ಸಂದೇಶವಾಗಿ ವಲ್ಲಭರು ಮೂರು ಶ್ಲೋಕಗಳನ್ನು ಒಂದು ಕಲ್ಲಿನ ಮೇಲೆ ಕೆತ್ತಿ ಅವರಿಗೆ ನೀಡಿದರು. ಏಕೆಂದರೆ ವಲ್ಲಭರು ಆಗ ಮೌನವ್ರತವನ್ನು ಧರಿಸಿದ್ದರು. ಆ ಸಂದೇಶ ಹೀಗಿತ್ತು: ''ನೀವು ಯಾವುದೇ ರೀತಿಯಲ್ಲಿ , ದೈಹಿಕವಾಗಿಯಾಗಲಿ, ಮಾನಸಿಕವಾಗಿಯಾಗಲಿ ಭಗವಂತನಿಂದ ಪ್ರತ್ಯೇಕಗೊಂಡರೆ, ಕಾಲನ ಆಧಿಪತ್ಯಕ್ಕೆ ಸಿಲುಕಿರುವ ಈ ದೇಹ ಮನಸ್ಸುಗಳು ಆ ಕಾಲದಿಂದಲೇ ಭಕ್ಷಿಸಲ್ಪಡುತ್ತವೆ. ಇದು ನನ್ನ ದೃಢವಾದ ನಂಬಿಕೆ. ಭಗವಂತನಾದ ಶ್ರೀಕೃಷ್ಣನು ಈ ಜಗತ್ತಿಗೆ ಸೇರಿದವನಲ್ಲ, ಪ್ರಪಂಚದ ಯಾವುದೇ ಸಂಗತಿಗಳ ಮೇಲೆ ಅವನಿಗೆ ಯಾವ ಗೌರವವೂ ಇಲ್ಲ. ಹೀಗಿರುವಾಗ ನಾವು ಜಗತ್ತಿನ ಮೇಲಿನ ವ್ಯಾಮೋಹವನ್ನು ತ್ಯಜಿಸಿ ಭಗವಂತನಾದ ಶ್ರೀಕೃಷ್ಣನೊಬ್ಬನಲ್ಲಿ ಮಾತ್ರವೇ ಪ್ರೇಮಭಕ್ತಿಯನ್ನು ಮಾಡಬೇಕು. ಭಗವಂತನೊಬ್ಬನೇ ಇಹಲೋಕ ಮತ್ತು ಪರಲೋಕಗಳೆರಡರಲ್ಲಿಯೂ ಸರ್ವವ್ಯಾಪಕನಾಗಿ ಇರುವವನು. ಆದ್ದರಿಂದ ಗೋಪೀನಾಥನಾದ ಶ್ರೀಕೃಷ್ಣನೊಬ್ಬನೇ ನಮ್ಮ ದೇಹ, ಮನಸ್ಸು, ಆತ್ಮ ಮತ್ತು ಚೈತನ್ಯಗಳ ಮೂಲಕ ಸೇವಿಸಲ್ಪಡಲು ಯೋಗ್ಯನು. ಅವನೊಬ್ಬನೆ ಇಹ ಜಗತ್ತಿನಲ್ಲಿ ಮತ್ತು ಪರಲೋಕದಲ್ಲಿ ಪ್ರಯೋಜನಕ್ಕೆ ಬರುವ ಎಲ್ಲವನ್ನೂ ನಮಗೆ ನೀಡಬಲ್ಲನು.''

ಆ ಅವಧಿಯಲ್ಲಿ ವಲ್ಲಭರು ವಾರಾಣಸಿಯ ಹನುಮಾನ್ ಘಾಟಿನಲ್ಲಿ ತಮ್ಮ ಸಂನ್ಯಾಸಿ ಜೀವನವನ್ನು ಕಳೆಯುತ್ತಿದ್ದರು. ತಮ್ಮ

ಅಂತಿಮ ಸಂದೇಶವನ್ನು ನೀಡಿದ ನಂತರ, ಪವಿತ್ರ ಗಂಗೆಯಲ್ಲಿ ಧುಮುಕಿ, ಕಣ್ಮರೆಯಾದರು. ಆ ಸ್ಥಾನದಿಂದ ಬೆಳಗುತ್ತಿರುವ ಜ್ವಾಲೆಯೊಂದು ಮೇಲೆದ್ದು ಬಂದಿತು. ಇದಕ್ಕೆ ಅಲ್ಲಿ ನೆರೆದಿದ್ದ ಪ್ರೇಕ್ಷಕರೆಲ್ಲರೂ ಸಾಕ್ಷಿಯಾಗಿದ್ದರು. ಆ ಜ್ವಾಲೆಯು ಆಕಾಶದಲ್ಲಿ ಲೀನವಾಗಿ ಹೋಯಿತು.

ವಲ್ಲಭರ ನಂತರ

ವಲ್ಲಭರ ನಂತರ ಅವರ ಪುತ್ರರಾದ ವಿಠ್ಠಲನಾಥರು ವಲ್ಲಭರ ಪಂಥದ ನೇತಾರರಾದರು. ವಿಠ್ಠಲನಾಥರು ಕೂಡ ಅಪಾರ ಭಕ್ತಿ ಮತ್ತು ಪಾಂಡಿತ್ಯ ಸಂಪನ್ನರಾದವರು. ಅವರು ತಮ್ಮ ತಂದೆಯವರು ಅಪೂರ್ಣಗೊಳಿಸಿದ್ದ ಭಾಷ್ಯಗಳನ್ನು ಪೂರ್ಣಗೊಳಿಸಿದರು. ಹಾಗೆಯೇ ಬ್ರಹ್ಮಸಂಬಂಧವೆಂಬ ಆಚರಣೆಯ ಮೂಲಕ ಪುಷ್ಟಿಮಾರ್ಗವನ್ನು ಅವಲಂಬಿಸಿರುವ ವಲ್ಲಭರ ಅನುಯಾಯಿಗಳಲ್ಲಿ ಹೆಚ್ಚಿನ ಒಗ್ಗಟ್ಟನ್ನು ಮೂಡಿಸಲು ಶ್ರಮವಹಿಸಿದರು. ವಿಠ್ಠಲನಾಥರ ಕಾಲದಲ್ಲಿಯೇ ಪ್ರಾಯಶಃ ಹವೇಲಿಯ ವ್ಯವಸ್ಥೆ ಹುಟ್ಟಿಕೊಂಡಿತು. ದೇವಮಂದಿರಗಳನ್ನು ಭಗವಂತನ ಮನೆ ಎಂದು ಭಾವಿಸಿ, ಅದರಂತೆಯೇ ಅಕ್ಷರಶಃ ನಡೆದುಕೊಳ್ಳುವುದು ಹವೇಲಿ ವ್ಯವಸ್ಥೆಯ ಹಿನ್ನಲೆಯಲ್ಲಿರುವ ತತ್ತ್ವ. ವಲ್ಲಭರು ಗೋಕುಲದಲ್ಲಿ ಗಿರಿಧರನಾಥನ ಮಂದಿರವೊಂದನ್ನು ಮಾತ್ರ ಸ್ಥಾಪನೆ ಮಾಡಿದ್ದರು. ಆ ವಿಗ್ರಹವನ್ನು ಶ್ರೀನಾಥಜಿ ಎಂದು ಪ್ರೀತಿಯಿಂದ ಕರೆಯುತ್ತಾರೆ. ಅನಂತರದ ದಿನಗಳಲ್ಲಿ ಆ ವಿಗ್ರಹವನ್ನು ಅಲ್ಲಿಂದ ವಿಠ್ಠಲನಾಥರ ಮನೆಗೆ ಸ್ಥಳಾಂತರಿಸಲಾಯಿತು. ಆ ವಿಗ್ರಹವು ತಮ್ಮ ಕುಟುಂಬಕ್ಕೆ ಸೇರಿದ್ದು ಎಂದು ಸಾಧಿಸಲು ಹೀಗೆ ಮಾಡಿದರೇನೋ. ನಂತರ, ಔರಂಗಜೇಬನ ಕಾಲದಲ್ಲಿ ಹಿಂದೂಗಳ ಮೇಲೆ ಭೀಕರ ದಬ್ಬಾಳಿಕೆ ಆರಂಭವಾಯಿತು. ಈ ಅವಧಿಯಲ್ಲಿ ವಿಗ್ರಹವನ್ನು ಉದಯಪುರದ ಹತ್ತಿರವಿರುವ ನಾಥದ್ವಾರಕ್ಕೆ ಕೊಂಡೊಯ್ಯಲಾಯಿತು. ಇಂದಿಗೂ ಈ ವಿಗ್ರಹವು ಅಲ್ಲಿ ಆರಾಧಿಸಲ್ಪಡುತ್ತಿದೆ. ಅನಂತರದ ದಿನಗಳಲ್ಲಿ ಇಂಥ ಹತ್ತುಹಲವು ಹವೇಲಿಗಳು ಹುಟ್ಟಿಕೊಂಡವು. ಬಹುತೇಕ ಅವೆಲ್ಲವೂ ವಲ್ಲಭರ ವಂಶಸ್ಥರ ನಿಯಂತ್ರಣದಲ್ಲಿಯೇ ಇವೆ.

ವಲ್ಲಭರು ತಮ್ಮ ಅಂತಿಮ ದಿನಗಳಲ್ಲಿ ಸಂನ್ಯಾಸ ಜೀವನವನ್ನು ನಡೆಸಿದರಾದರೂ, ಅದು ಜೀವನದ ಅಂತಿಮ ಘಟ್ಟದಲ್ಲಿ ಕೈಗೊಳ್ಳಬಹುದಾದ ವ್ರತ ಎಂದು ಮಾತ್ರ ಅದಕ್ಕೆ ಮಹತ್ವವನ್ನು ನೀಡಿದ್ದರು. ಇದು ನಾವು ಗಮನಿಸಬೇಕಾದ ವಿಷಯ. ಗೃಹಸ್ಥ ಜೀವನ ಕೂಡ ಆಧ್ಯಾತ್ಮಿಕ ಜೀವನದ ಬೆಳವಣಿಗೆಗೆ ಅನುಕೂಲಕರ ಎಂಬ ಅಭಿಪ್ರಾಯವನ್ನು ವಲ್ಲಭರು ಹೊಂದಿದ್ದರು. ಹೀಗಾಗಿ ತಮ್ಮ ಪಂಥದಲ್ಲಿ ಧರ್ಮಪ್ರಚಾರ ಮಾಡುವ ಸಂನ್ಯಾಸೀ ಪಂಗಡಕ್ಕೆ ವಲ್ಲಭರು ಅವಕಾಶ ಕಲ್ಪಿಸಲಿಲ್ಲ. ಹವೇಲಿಗಳನ್ನು ಗೃಹಸ್ಥರು, ಅದರಲ್ಲೂ ವಲ್ಲಭರ ವಂಶಸ್ಥರೇ ಇಂದಿಗೂ ನಿಯಂತ್ರಿಸುತ್ತಿದ್ದಾರೆ. ವಲ್ಲಭರ ಪಂಥದಲ್ಲಿ ಅನಂತರದ ದಿನಗಳಲ್ಲಿ, ಭಗವಂತನ ಸ್ವರೂಪ




ಗಳೇ ಎಂದು ಪರಿಗಣಿಸುವ ಮೂರ್ತಿಗಳನ್ನು ವೈಭವದಿಂದ ಪೂಜೆ ಮಾಡುವುದು ಮತ್ತು ಬ್ರಹ್ಮಸಂಬಂಧ ಕ್ರಿಯೆಯನ್ನು ನಡೆಸುವ ಗುರುಗಳನ್ನು ವಿಪರೀತವಾಗಿ ಕೊಂಡಾಡಿ, ಸೇವೆ ಮಾಡುವುದು – ಇದೇ ಪ್ರಧಾನವಾಗುತ್ತ ಹೋಯಿತು. ವಲ್ಲಭರು ಬೋಧಿಸಿದ ಮುಖ್ಯ ಭಕ್ತಿ ಸಾಧನಗಳಾದ ಶ್ರವಣ, ಪಾರಾಯಣ, ಧ್ಯಾನ ಮತ್ತು ಭಗವಂತನ ಸೇವೆಗಳು ಹಿನ್ನೆಲೆಗೆ ತಳ್ಳಲ್ಪಟ್ಟವು. ಇದರ ಪರಿಣಾಮವಾಗಿ ಪಂಥದ ಅನುಯಾಯಿಗಳಲ್ಲಿ ಮತ್ತು ಗುರುಪರಂಪರೆಯಲ್ಲಿ ನೈತಿಕ ಅವನತಿ ಕಂಡುಬಂತು. ಹವೇಲಿಯ ಆಧಿಪತ್ಯವನ್ನು ವಹಿಸಿರುವ ಗುರುವೃಂದದವರು ಅಪಾರ ಸಂಪತ್ತನ್ನು ಶೇಖರಿಸಿ, ಸಮಾಜದ ನಾಯಕರಾಗಿ ಮೆರೆಯಲಾರಂಭಿಸಿದರು. ತಮ್ಮನ್ನು ತಾವು ಮಹಾರಾಜರು ಎಂಬ ಬಿರುದಿನಿಂದ ಕರೆದುಕೊಂಡು, ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟ ವೈಭವಯುತವಾದ ಜೀವನವನ್ನು ನಡೆಸಲು ಆರಂಭಿಸಿದರು. ಇದಕ್ಕಿಂತಲೂ ಕೆಡುಕಾದ ವಿಷಯವೇನೆಂದರೆ, ಭವಿಷ್ಯದ ಆಚಾರ್ಯರು ತಮ್ಮನ್ನು ಶ್ರೀಕೃಷ್ಣನ ಅವತಾರಗಳೆಂದೇ ಕರೆಸಿಕೊಳ್ಳಲು ಆರಂಭಿಸಿಬಿಟ್ಟರು! ಮುಗ್ಧ ಮೂಢ ಭಕ್ತರು ಶ್ರೀಕೃಷ್ಣನಿಗೆ ಸಮರ್ಪಿಸುವ ಸೇವೆಗಳನ್ನೆಲ್ಲ ಬ್ರಹ್ಮಸಂಬಂಧ ಆಚರಣೆಯಲ್ಲಿ ಈ ಆಚಾರ್ಯರಿಗೇ ಸಲ್ಲಿಸಲು ಆರಂಭಿಸಿಬಿಟ್ಟರು! ಈ ತಪ್ಪುದಾರಿಗೆ ಎಳೆಯಲ್ಪಟ್ಟ ಭಕ್ತಿಯ ಪರಿಣಾಮವಾಗಿ, ಅನೇಕ ಕೀಳುಮಟ್ಟದ ಆಚರಣೆಗಳು ಆರಂಭಗೊಂಡು, ಕಡೆಯಲ್ಲಿ ಇಡೀ ಪಂಥಕ್ಕೆ ಅಪಕೀರ್ತಿ ಬರುವಂತಾಯಿತು. ಇತ್ತೀಚಿನ ದಿನಗಳಲ್ಲಿ ಪ್ರಬುದ್ಧ ನಾಗರಿಕರ ಅಭಿಪ್ರಾಯಗಳನ್ನು ತೆಗೆದುಕೊಂಡು, ಈ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವ ಸುಧಾರಣಾ ಆಂದೋಲನಗಳು ಆರಂಭಗೊಂಡಿರುವುದು ಸ್ವಾಗತಾರ್ಹ ಸಂಗತಿ. *(ಮುಗಿಯಿತು)*


ಕಬೀರದಾಸ

ಮೂಲ: ರವೀಂದ್ರನಾಥ ಠಾಕೂರ್ **ಕಥೆ: ಮೋಹನಾ ಸೂರ್ಯನಾರಾಯಣ** **ಚಿತ್ರ: ಶಂಕರ್**


1 ಅದು ಸಂತಶ್ರೇಷ್ಠರಾದ ಸ್ವಾಮಿ ರಾಮಾನಂದರು ಜೀವಿಸಿದ್ದ ಕಾಲ. ಆಗ ಕಬೀರನೆಂಬ ಬಾಲಕನು ಪವಿತ್ರ ಚಿಂತನೆಗಳಲ್ಲೇ ಮುಳುಗಬೇಕೆಂದು ಬಯಸಿದ್ದನು.




2 ದೇವರ ಕೃಪೆಯಿಂದ ಕಬೀರನ ಪ್ರಾರ್ಥನೆಗೆ ಉತ್ತರ ಲಭಿಸಿತು. ಒಂದು ದಿನ ಮುಂಜಾನೆ ಸ್ವಾಮಿ ರಾಮಾನಂದರು ಗಂಗಾನದಿಯ ಪಂಚಗಂಗಾ ಘಟ್ಟದಲ್ಲಿ ಮೆಟ್ಟಿಲಿಳಿದು ಬರುತ್ತಿದ್ದರು. ಯಾರಿಗೂ ಕಾಣಿಸದಂತೆ ಮೆಟ್ಟಿಲಲ್ಲಿ ಮಲಗಿದ್ದ ಕಬೀರನನ್ನು ಅವರು ಅರಿಯದೆ ತುಳಿದುಬಿಟ್ಟರು. ಹಿಂದಕ್ಕೆ ಸರಿದ ಅವರು ರಾಮನಾಮವನ್ನು ಜಪಿಸಿದರು.



3



4 ನೇಕಾರನಾಗಿದ್ದ ಕಬೀರನು ಭಕ್ತಿಯಿಂದ ತುಂಬಿ ತುಳುಕಾಡುವ ಹಲವಾರು ದೋಹೆ (ದ್ವಿಪದಿ-ಎರಡು ಸಾಲಿನ ಹಾಡುಗಳು)ಗಳನ್ನು ರಚಿಸಿದನು. ಅವನೊಂದಿಗೆ ಭಜನೆಯಲ್ಲಿ ಅವನ ಮನೆಯವರೂ ಸೇರಿಕೊಂಡರು.



5 ಹಿಂದೂ-ಮುಸ್ಲಿಮರ ಸಾಮರಸ್ಯವನ್ನು ಸಾರುವ ಹಲವು ದೋಹೆಗಳನ್ನು ಕಬೀರ ಹಾಡಿದ.




6 ಕೆಲವು ವರ್ಷಗಳ ನಂತರ ಕಬೀರನು ಏಕಾಂತದಲ್ಲಿದ್ದು ಜಪಸಾಧನೆ ಮಾಡಬಯಸಿದನು. ಅದಕ್ಕಾಗಿ ಅವನು ಶ್ರೀರಾಮನನ್ನು ಪ್ರಾರ್ಥಿಸಿದ. ಆದರೆ ಅವನ ಸುತ್ತ ಯಾವಾಗಲೂ ಬಹಳ ದೊಡ್ಡ ಗುಂಪು ನೆರೆದಿರುತ್ತಿತ್ತು.



7 ಕಬೀರನ ಪ್ರಸಿದ್ಧಿಯನ್ನು ನೋಡಿದ ಕಪಟಿ ಧಾರ್ಮಿಕ ಮುಖಂಡರು ಚಿಂತೆಗೊಳಗಾದರು. ಅವರೆಲ್ಲ ಒಟ್ಟುಸೇರಿದರು.



8 ಆ ಮುಖಂಡರೆಲ್ಲ ಕುತಂತ್ರ ಮಾಡಿ, ಒಬ್ಬಾಕೆ ಕೆಟ್ಟ ಹೆಂಗಸನ್ನು ಕಬೀರನ ಅಂಗಡಿಗೆ ಕಳುಹಿಸಿದರು. ಅವಳು ಸೀರೆ ಖರೀದಿಸಲು ಬಂದಿರುವಂತೆ ನಟಿಸಿದಳು.





9 ಆ ವಂಚಕಿಯು ಸೀರೆಯನ್ನು ತೆಗೆದುಕೊಳ್ಳುವಾಗ ಇದ್ದಕ್ಕಿದಂತೆ ಕಬೀರನ ಕೈಯನ್ನು ಹಿಡಿದುಕೊಂಡಳು.
ಅಮ್ಮಾ, ನಿನ್ನ ಕೈಯನ್ನು ನಾನು ಹಿಡಿದೆನೆ? ನೀನೇ ನನ್ನ ಕೈಯನ್ನು ಹಿಡಿದುಕೊಂಡೆ.
ಅಯ್ಯೋ, ನನ್ನ ಕೈಯನ್ನು ಬಿಡಿ. ಈ ಅನಾಚಾರವನ್ನು ತಡೆಯುವ ಮಂದಿ ಯಾರೂ ಇಲ್ಲವೇ?
ನೀನೇ ನನ್ನ ಕೈ ಹಿಡಿದು ಈಗ ನನ್ನ ಮೇಲೆ ಆರೋಪ ಹಾಕುತ್ತಿರುವೆಯಾ? ಈ ಪಟ್ಟಣದಲ್ಲಿ ಸ್ವಲ್ಪವೂ ನ್ಯಾಯ ಎಂಬುದಿಲ್ಲವೆ?
10 ಕಬೀರನನ್ನು ದ್ವೇಷಿಸುತ್ತಿದ್ದ ಮುಖಂಡರೆಲ್ಲ ತಮ್ಮ ಯೋಜನೆಯಂತೆ ಅಲ್ಲಿಗೆ ಬಂದರು.
ಏಯ್, ಕಬೀರ! ನೀನು ಭಕ್ತನಂತೆ ನಟಿಸಿ ಈಗ ಇಂತಹ ಅನಾಚಾರ ಮಾಡುತ್ತಿದ್ದೀಯಾ?
ನನ್ನ ಕೈಯನ್ನು ಹಿಡಿದ ಇವನೊಂದಿಗೆ ಮಾತ್ರವೇ ನಾನು ಜೀವಿಸಬಲ್ಲೆ. ಬೇರೆ ಯಾರು ನನ್ನನ್ನು ಮದುವೆಯಾಗುವರು?
ಅಳಬೇಡ ತಾಯಿ! ಇವನಿಗೆ ನಾವು ಎಂತಹ ಶಿಕ್ಷೆ ಕೊಡಬೇಕು? ನೀನೇ ನಿರ್ಧರಿಸು.
11
ಕಬೀರ, ಇನ್ನು ಮುಂದೆ ನೀನು ಈ ಹೆಂಗಸಿನೊಂದಿಗೆ ಜೀವನ ನಡೆಸಬೇಕು. ತಿಳಿಯಿತೆ?
ದೇವಾ! ನನ್ನ ಪ್ರಾರ್ಥನೆಯನ್ನು ಆಲಿಸು. ಇದಕ್ಕೆ ತಕ್ಕ ರೀತಿಯಲ್ಲಿ ನಿನ್ನ ಉತ್ತರವನ್ನು ಕೊಡು.
ಕಬೀರನು ಅವಳ ನಿರ್ಧಾರವನ್ನು ಶ್ರೀರಾಮನ ನಿರ್ಧಾರವೆಂದೇ ಎಣಿಸಿ, ಅವಳೊಂದಿಗೆ ತನ್ನ ಮನೆಗೆ ಹೋದ.
12 ಕಬೀರನ ಮನೆಯನ್ನು ಪ್ರವೇಶಿಸಿದಾಗ ಆ ಹೆಂಗಸಿಗೆ ಹೇಳಲಾಗದಂತಹ ಭಯ ಆವರಿಸಿಕೊಂಡಿತು. ಕೂಡಲೇ ಅವಳು ಕಬೀರನ ಮುಂದೆ ಮಂಡಿಯೂರಿ ...
ಅಯ್ಯೋ... ನನಗೆ ತುಂಬಾ ಕಷ್ಟವಾಗುತ್ತಿದೆ. ಸ್ವಾಮಿ, ಅವರುಗಳ ಮಾತನ್ನು ಕೇಳಿ ನಾನು ನಿಮ್ಮ ಮೇಲೆ ಸುಳ್ಳು ಆರೋಪ ಮಾಡಿದೆ. ಈಗ ನೀವೇ ನನ್ನನ್ನು ರಕ್ಷಿಸಬೇಕು.
ಮಗೂ, ಸಮಾಧಾನ ತಾಳಿಕೋ. ನಿನ್ನ ಹೃದಯವನ್ನು ತೆರೆದು, ರಾಮನ ದಿವ್ಯಪ್ರಭೆ ಅದನ್ನು ತುಂಬುವಂತೆ ಮಾಡು. ನೀನಿಲ್ಲೇ ಇದ್ದುಕೊಂಡು ಶ್ರೀರಾಮನ ಸೇವೆ ಮಾಡು.

13 ಕಬೀರನು ಬಟ್ಟೆ ನೇಯುವಾಗ ಭಜನೆ ಹಾಡುತ್ತಿದ್ದ. ಆ ಹೆಂಗಸೂ ಹಾಡುತ್ತಿದ್ದಳು. ಕ್ರಮೇಣ ಕಬೀರನ ತತ್ತ್ವಭರಿತವೂ ಭಕ್ತಿಪೂರಿತವೂ ಆದ ಹಾಡುಗಳು ಅವಳ ಹೃದಯವನ್ನು ಪರಿಶುದ್ಧಗೊಳಿಸಿದವು. ಅವಳು ಭಕ್ತೆಯಾಗಿ ಪರಿವರ್ತನೆ ಹೊಂದಿದಳು. ಆದರೆ ಅವಳು ಬಂದ ಮೇಲೆ ಕಬೀರನ ಅಂಗಡಿಗೆ ಗಿರಾಕಿಗಳು ಕಡಿಮೆಯಾದರು.

14 ಕೆಲವು ವರ್ಷಗಳು ಕಳೆದವು. ಒಂದು ಸಲ ರಾಜನು ತನ್ನ ಆಸ್ಥಾನಕ್ಕೆ ಕಬೀರನನ್ನು ಆಹ್ವಾನಿಸಿದ. ಅವನ ಹಾಡುಗಳು ವಿಶೇಷವಾದವು ಎಂದು ಅವನು ಕೇಳಿದ್ದ. ಕಬೀರನು ತನ್ನೊಂದಿಗೆ ಆ ಹೆಂಗಸನ್ನೂ ಕರೆತಂದ. ಇದರಿಂದ ರಾಜ ಅಸಮಾಧಾನಗೊಂಡ.




15 ಕಬೀರನು ರಾಜನ ವರ್ತನೆಯಿಂದ ಬೇಸರಪಡಲಿಲ್ಲ. ಆದರೆ ಆ ಹೆಂಗಸು ತುಂಬಾ ದುಃಖಿತಳಾದಳು.



ಕಬೀರನು ಯಾವುದೇ ಬಗೆಯ ಟೀಕೆಯಿಂದಲೂ ವಿಚಲಿತನಾಗಲಿಲ್ಲ. ಜನರಿಗೆ ಕೆಲವೇ ದಿನಗಳಲ್ಲಿ ಅವನ ಮಹಿಮೆ ಅರ್ಥವಾಯಿತು. ಅವರು ಮತ್ತೆ ಭಕ್ತಿ, ಗೌರವಗಳಿಂದ ಅವನ ಬಳಿಗೆ ಬರಲಾರಂಭಿಸಿದರು.

''ಭಗವಂತನ ಸಾಕ್ಷಾತ್ಕಾರ ಪಡೆದ ವ್ಯಕ್ತಿ ಸಂಸಾರದಲ್ಲಿ ಬಂದು ಇದ್ದರೂ ಕಾಮಕಾಂಚನ ಆತನಿಗೆ ಏನನ್ನೂ ಮಾಡಲಾರವು. ಆದರೆ ಪ್ರಥಮದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು..ಅಶ್ವತ್ಥವೃಕ್ಷ ಇನ್ನೂ ಸಸಿಯಾಗಿರುವಾಗ ಆಡು ದನಕರುಗಳು ಅದನ್ನು ತಿಂದು ನಾಶಮಾಡದೆ ಇರಲಿ ಎಂದು ಅದರ ಸುತ್ತಲೂ ಬೇಲಿ ಹಾಕುತ್ತಾರೆ. ಆದರೆ ಬುಡ ದಪ್ಪವಾಯಿತೆಂದರೆ ಬೇಲಿಯ ಆವಶ್ಯಕತೆಯೇನಿರದು. ಆಗ ತೆಗೆದುಕೊಂಡು ಹೋಗಿ ಆನೆಯನ್ನು ಕಟ್ಟಿದರೂ ಅದಕ್ಕೆ ಏನೂ ಆಗದು. ನಿರ್ಜನ ಪ್ರದೇಶದಲ್ಲಿ ಸಾಧನೆ ಮಾಡಿ ಭಗವಂತನ ಪಾದಪದ್ಮಗಳನ್ನು ಭಕ್ತಿಯಿಂದ ಪೂಜಿಸಿ, ಶಕ್ತಿಯನ್ನು ವೃದ್ಧಿ ಮಾಡಿಕೊಂಡು ಮನೆಗೆ ಹೋಗಿ ಸಂಸಾರದಲ್ಲಿ ಇದ್ದರೆ ಕಾಮಕಾಂಚನ ನಿನ್ನನ್ನು ಏನೂ ಮಾಡಲಾರವು.''

— ಶ್ರೀರಾಮಕೃಷ್ಣರು









ಸುದ್ದಿ ಸಂಚಯ

ಐರ್ಲೆಂಡಿನಲ್ಲಿ ರಾಮಕೃಷ್ಣ ವೇದಾಂತ ಸೆಂಟರ್ ಆರಂಭ

ಐರ್ಲೆಂಡ್ ದೇಶದ ಆಡಳಿತ ಕೇಂದ್ರವಾದ **ಡಬ್ಲಿನ್**ನಲ್ಲಿ ೨೦೧೮ರ ಜೂನ್ ೧೭ ರಂದು **ರಾಮಕೃಷ್ಣ ವೇದಾಂತ ಸೆಂಟರ್** ಆರಂಭವಾಯಿತು. ಇದರ ಉದ್ಘಾಟನೆಯನ್ನು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸಹಕಾರ್ಯದರ್ಶಿಗಳಾದ **ಸ್ವಾಮಿ ಬೋಧಸಾರಾನಂದಜಿ** ಮಹಾರಾಜ್ ಅವರು ನೆರವೇರಿಸಿದರು. ಈ ಸಂದರ್ಭದಲ್ಲಿ ಐರ್ಲೆಂಡ್ ಕೇಂದ್ರದ ಅಧ್ಯಕ್ಷರಾಗಿ ಹೊಸದಾಗಿ ನೇಮಕಗೊಂಡಿರುವ **ಸ್ವಾಮಿ ವಿಮೋಕ್ಷಾನಂದಜಿ**, ಐರ್ ವೇದಾಂತ ಸೊಸೈಟಿಯ ಸ್ವಾಮಿ ಪೂರ್ಣಾನಂದಜಿ, ಲಂಡನ್(ಬಾರ್ನ್ ಎಂಡ್, ಯುಕೆ) ರಾಮಕೃಷ್ಣ ವೇದಾಂತ ಸೆಂಟರ್‌ನ ಸ್ವಾಮಿ ಸರ್ವಸ್ಥಾನಂದಜಿ, ನರೇಂದ್ರಪುರ ರಾಮಕೃಷ್ಣ ಮಿಷನ್ ಆಶ್ರಮದ ಸ್ವಾಮಿ ಸರ್ವಲೋಕಾನಂದಜಿ, ಐರ್ಲೆಂಡಿನಲ್ಲಿ ಭಾರತದ ರಾಯಭಾರಿಗಳಾದ ಶ್ರೀಮತಿ ವಿಜಯ್ ಠಾಕೂರ್ ಸಿಂಗ್ ಮುಂತಾದವರು ಉಪಸ್ಥಿತರಿದ್ದರು. ಇವರೊಂದಿಗೆ ಐರ್ಲೆಂಡಿನ ವೇದಿಕ್ ಹಿಂದೂ ಕಲ್ಚರಲ್ ಸೆಂಟರ್‌ನ ಮುಖ್ಯಸ್ಥರಾದ ಡಾ. ಹೇಮಂತಕುಮಾರ್, ರೋಮನ್ ಕೆಥೋಲಿಕ್ ಚರ್ಚ್‌ನ ಮಾನ್‌ಸಿಗ್ನರ್ ಎಯೋನ್ ಥಿನ್ನೆ, ಸಿಸ್ಟರ್ ಟ್ರಿನಿಟಾ ಹಾಗೂ ಕೌನ್ಸಿಲರ್ ಎಲ್. ನೊಲಾನ್ ಮುಂತಾದ ಗಣ್ಯರು ಕೂಡ ಹಾಜರಿದ್ದರು.

ಉದ್ಘಾಟನಾ ಭಾಷಣದ ನಂತರ ರಾಮಕೃಷ್ಣ ಮಿಷನ್ನಿನ ಇತರ ಸಂನ್ಯಾಸಿಗಳು ಸೋದರಿ ನಿವೇದಿತಾಳ ಜೀವನ ಹಾಗೂ ಸಾಧನೆಗಳನ್ನು ಕುರಿತು ಮಾತನಾಡಿದರು. ಅನಂತರ ಡಬ್ಲಿನ್ ಅಂತರ್ಧರ್ಮೀಯ ವೇದಿಕೆ (Interfaith Forum)ಯ ಶ್ರೀಮತಿ ಹೆಚ್. ಅಬ್ರಹಾಮ್ ಮತ್ತು ಶ್ರೀ ಎ.ಕ್ರಿಸ್ಟಿಯಾ ಹಾಗೂ ವೇದಿಕ್ ಹಿಂದೂ ಕಲ್ಚರಲ್ ಸೆಂಟರ್‌ನ ಡಾ.ಹೇಮಂತ್ ಕುಮಾರ್ ಅವರು ಮಾತನಾಡಿದರು.



ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಜಾನ್ ಸ್ಕಾಟಸ್ ಶಾಲೆಯ ವಿದ್ಯಾರ್ಥಿಗಳಿಂದ ಹಾಗೂ ಐರ್ಲೆಂಡಿನ ಸನಾತನ ಧರ್ಮ ಸಂಸ್ಥೆಯ ವಿದ್ಯಾರ್ಥಿಗಳಿಂದ ವೇದಘೋಷ ನಡೆಯಿತು. ಸ್ವಾಮಿ ಪೂರ್ಣಾನಂದರು ನಿವೇದಿತಾಳನ್ನು ಕುರಿತು ಬರೆದ ಕವನವನ್ನು ವಾಚಿಸಲಾಯಿತು. ಶ್ರೀ ಬ್ರಿಯಾನ್ ಓ-ಹಲೂಯಿನ್ ಅವರಿಂದ 'ಉಯಿಲಿಯಾನ್ ಪೈಪ್ ಸಂಗೀತ' ಕೂಡ ನಡೆಯಿತು. ನಿವೇದಿತಾಳ ಜನ್ಮಸ್ಥಳವಾದ ಡಂಗ್‌ನಾನ್ ಪ್ರದೇಶದಿಂದ ಬಂದ ಮಿಸ್ ಜೀನ್ ಮ್ಯಾಕ್‌ಗಿನ್ನೆಸ್ ಅವರು ತಮ್ಮ 'Awakening a Nation' ಎಂಬ ನಾಟಕದ ಭಾಗಗಳನ್ನು ಪ್ರಸ್ತುತಪಡಿಸಿದರು. ಇದರೊಂದಿಗೆ ಭಾರತೀಯ ಶಾಸ್ತ್ರೀಯ ನೃತ್ಯ ಪ್ರದರ್ಶನ, ಭಜನೆ ಮುಂತಾದ ಕಾರ್ಯಕ್ರಮಗಳು ನಡೆದವು. ಶ್ರೀ ಶೇ ಮೊರಾನ್ ಹಾಗೂ ಸಂಗಡಿಗರು ಸ್ಥಳೀಯ ಐರಿಷ್ ಸಂಗೀತವನ್ನು ನಡೆಸಿಕೊಟ್ಟರು.

ಸೋದರಿ ನಿವೇದಿತಾಳ ಸ್ಮೃತಿಗಾಗಿ ನೂತನವಾಗಿ ನವೀಕರಿಸಿದ ಕಟ್ಟಡವನ್ನು **'ನಿವೇದಿತಾ ಹೌಸ್'** ಎಂದು ನಾಮಕರಣ ಮಾಡಲಾಯಿತು. ಸ್ವಾಮಿ ವಿಮೋಕ್ಷಾನಂದಜಿಯವರು ವಿಶೇಷ ಪೂಜೆಯನ್ನು ನೆರವೇರಿಸಿದರು. ಇಂಗ್ಲೆಂಡ್, ಉತ್ತರ ಐರ್ಲೆಂಡ್‌ನಿಂದ ಬಂದ ಸುಮಾರು ೨೦೦ ಮಂದಿ ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅಮೆರಿಕಾದಿಂದಲೂ ಕೆಲವು ಮಂದಿ ಭಕ್ತರು ಆಗಮಿಸಿದ್ದರು.





Managing Editor : Swami Atmajnananda   Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

ಆರ್ಕಿಡ್ ಟ್ರಾವೆಲ್ & ಟೂರ್ಸ್

100% PURE NEW ZEALAND SPECIALIST GOLD 2017 · Karnataka One state. Many worlds. Department of Tourism · BRITAgent · USA · Switzerland · IATA

Orchid Travel & Tours
Celebration of 18th Year

www.orchidtours.net

ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸಗಳು

7 ದಿನಗಳ ಮತ್ತು 11 ದಿನಗಳ ಸಿಂಗಾಪುರ-ಮಲೇಶಿಯ-ಥೈಲ್ಯಾಂಡ್









8 ದಿನಗಳ ಕಾಂಬೋಡಿಯ – ಥೈಲ್ಯಾಂಡ್

ಕಾಂಬೋಡಿಯ – ಸಿಯಾಮ್‌ರಿಪ್, ಅಂಕೋರ್‌ವಾಟ್, ತೋಂಲ್ಲೇ ಸ್ಯಾಪ್ ಸರೋವರ, ತಾಪ್ರಾಮ್, ಬಯಾನ್, ಬಪೂನ್ ದೇವಾಲಯಗಳು,
ಥೈಲ್ಯಾಂಡ್ – ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್



ನೇಪಾಳ ವಿಶೇಷ – 8 ದಿನಗಳ ಶ್ರೀ ಮುಕ್ತಿನಾಥ ಯಾತ್ರೆ (ಸಾಲಿಗ್ರಾಮಂ)

ಪ್ರವಾಸ ಸ್ಥಳಗಳು : ಶ್ರೀ ಮುಕ್ತಿನಾಥ ದೇವಸ್ಥಾನ, ಪಶುಪತಿನಾಥ ದೇವಸ್ಥಾನ ಜಲನಾರಾಯಣ ದೇವಸ್ಥಾನ, ಶ್ರೀ ಕೃಷ್ಣ ದೇವಸ್ಥಾನ, ಕಠ್ಮಂಡು ಸಿಟಿ ಟೂರ್, ಪೋಕ್ರಾ-ಬಿಂದಾಬಾಸಿನಿ ದೇವಸ್ಥಾನ, ಮನೋಕಾಮನ (ಕೇಬಲ್ ಕಾರ್‌ನಲ್ಲಿ)



7 ದಿನಗಳ ಪನಾರಮಿಕ್ ರಷ್ಯಾ

ಸೆಂಟ್ ಪೀಟರ್ಸ್‌ಬರ್ಗ್ : ಗ್ರ್ಯಾಂಡ್ ಪ್ಯಾಲೇಸ್, ಪೀಟರ್ ಓಫ್ ಗಾರ್ಡನ್ ನೇವ ಬೋಟ್ ರೈಡ್, ಸಿಟಿ ಟೂರ್. ಮಾಸ್ಕೋ : ಕ್ರೆಮ್‌ಲಿನ್ ಗ್ರೌಂಡ್, ರೆಡ್ ಸ್ಕ್ವೇರ್, ರಷ್ಯಾ ಸರ್ಕಸ್, ಅಂಡರ್‌ಗ್ರೌಂಡ್ ಮೆಟ್ರೊ ಟೂರ್



10 ದಿನಗಳ ಚೈನಾ, ಹಾಂಕಾಂಗ್, ಮಕಾವ್

ಪ್ರವಾಸ ಸ್ಥಳಗಳು : ಟಿಯ್ಯಾನಾನ್‌ಮೆನ್ ಸ್ಕ್ವೇರ್, ಆಕ್ರೋಬೆಟಿಕ್ ಶೋ, ಸಮ್ಮರ್ ಪ್ಯಾಲೇಸ್, ಕುನ್‌ಮಿಂಗ್ ಲೇಕ್, ಏಳು ಅದ್ಭುತಗಳಲ್ಲಿ ಒಂದಾದ ಚೀನಾ ಮಹಾಗೋಡೆ, ಬೀಜಿಂಗ್ ನಗರ, ಶಾಂಘೈ ಟೆಂಪಲ್, ಓರಿಯಂಟಲ್ ಪರ್ಲ್ ಟಿ.ವಿ. ಟವರ್, ಶಾಂಘೈ ಟವರ್, ಓಷಿಯನ್ ಪಾರ್ಕ್, ವಿಕ್ಟೋರಿಯಾ ಪೀಕ್, ಲ್ಯಾನ್‌ಟೌವ್ ಐಲ್ಯಾಂಡ್, ಮಕಾವ್ ಮತ್ತು ಇತರೆ.



19 ದಿನಗಳ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್

ಆಸ್ಟ್ರೇಲಿಯಾ : ಸಿಡ್ನಿ, ಗೋಲ್ಡ್ ಕೋಸ್ಟ್, ಕೈರ್ನ್ಸ್, ಮೆಲ್ಬೋರ್ನ್
ನ್ಯೂಜಿಲ್ಯಾಂಡ್ : ಆಕ್ಲೆಂಡ್, ರೊಟೂರಾ, ಕ್ವೀನ್ಸ್‌ಟೌನ್, ಕ್ರೈಸ್ಟ್‌ಚರ್ಚ್

ಬಸವನಗುಡಿ
ನಂ.98, 1ನೇ ಮಹಡಿ, ಡಿವಿಜಿ ರಸ್ತೆ, ಬಸವನಗುಡಿ
ಬೆಂಗಳೂರು – 560004.
ಫೋನ್: **080-26670646, 26621983**
ಮೊಬೈಲ್ : **9900080793, 9880079588**

Orchid Travel & Tours

ಮಲ್ಲೇಶ್ವರಂ
ನಂ.198, 1ನೇ ಮಹಡಿ, 11ನೇ ಕ್ರಾಸ್, ಯತಿರಾಜಮಠ ಬಿಲ್ಡಿಂಗ್
ಮಲ್ಲೇಶ್ವರಂ, ಬೆಂಗಳೂರು – 560003.
ಫೋನ್: **080-23445598, 23445559**
ಮೊಬೈಲ್ : **9900080791, 9900080796**

VIVEKA PRABHA (KANNADA MONTHLY)
August 2018, Vol.18, No.08, No.of pages : 44

Registered With Registrar of News Papers Of India under 72356/2000.postal Regn.No.KA/SK/MYS/480/ 2018-20. LICENCED TO POST W.P.P.AT YADAVAGIRI MYSORE 570 020,VIDE LICENCE NO.SK/WPP/MYS/155/2018-20



Printed at mayur graphics,Bangalore